# ಪ್ರಶ್ನೋತ್ತರ ವಾಹಿನಿ

ತೆಲುಗು ಮೂಲ

**ಭಗವಾನ್ ಶ್ರೀ ಸತ್ಯಸಾಯಿ ಬಾಬಾ**

ಇಂಗ್ಲಿಷ್ ಸಂಕಲನ

**ನಾ. ಕಸ್ತೂರಿ**

ಕನ್ನಡ ಅನುವಾದ

**ಆರ್. ಎಲ್. ಅನಂತರಾಮಯ್ಯ**

**ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರಿ)**
'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩
೨೦೧೮

*Prashnottara Vahini* by Bhagavan Sri Sathya Sai Baba. Compiled by N. Kasturi. Translated into Kannada by R. L. Ananthara-maiah. Published by Sri Sathya Sai Publications Society (R), 'Sudhama House', Chickpet, Bengaluru 560 053, India. Demy octavo, Pages viii+60.

© 2018
Sri Sathya Sai Publications Society, Bengaluru, India

೦೬/೨೦೧೮ (೨೦೦೦ ಪ್ರತಿಗಳು)

ಪುಟಗಳು : ೬೮

**ಬೆಲೆ : ₹ 20**

ಮುದ್ರಣ : ಪದ್ಮ ಶೇಖರ್ ಪ್ರಿಂಟರ್ಸ್, ಮೈಸೂರು; ✆ 98865 05878

ಬೇರೆ ಬೇರೆ ಧರ್ಮಗಳೆಲ್ಲ ಇರಲಿ,
ಎಲ್ಲ ಧರ್ಮಗಳೂ ವರ್ಧಿಸಲಿ,
ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ
ವಿವಿಧ ರಾಗಗಳಲ್ಲೂ ಹಾಡಲಿ.
ಧರ್ಮ ಧರ್ಮಗಳ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗೌರವಿಸಿ.
ಭಾವೈಕ್ಯತೆಯ ಬೆಳಕನ್ನು ನಂದಿಸದಿರುವ
ಧರ್ಮಗಳೆಲ್ಲ ಸತ್ವಯುತ ಎಂದು ಮನ್ನಿಸಿ.

**ಶ್ರೀ ಸತ್ಯಸಾಯಿ ಬಾಬಾ**

ಓಂ ಬ್ರಹ್ಮಾಂಡಕ್ಕೆ ಮೂಲವಾದ ಆದಿಮ ಶಬ್ದ. ಓಂಕಾರವು ಅನಾಹತ ಶಬ್ದ. ನಿಮ್ಮ ಹೃದಯದಲ್ಲೂ ವಿಶ್ವದ ಹೃದಯದಲ್ಲೂ ಸದಾ ನಿನದಿಸುತ್ತಿರುವ ಅದನ್ನು ಆಲಿಸಿರಿ.

ಅಹಂಕಾರವನ್ನು ಕತ್ತರಿಸಿ. ಅದು ಶಿಲುಬೆಯ ಮೇಲೆ ಅಳಿದು ಹೋಗಲಿ. ನಮಗೆ ಅಮರತ್ವವನ್ನು ತರಲಿ.

ಕಾರಣ–ಪರಿಣಾಮ, ಕಾರ್ಯ–ಅದರ ಫಲ—ಇವುಗಳ ಚಕ್ರವನ್ನು ಸದಾ ನೆನಪಿನಲ್ಲಿಡಿ.

ಚಂದ್ರನಿಂದ ದೂರ ಸರಿಯದ ನಕ್ಷತ್ರದ ಹಾಗೆ ನೀವೂ ಭಗವಂತನಿಂದ ಅತ್ತಿತ್ತ ಅಲುಗದೆ ಸ್ಥಿರವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಿರಿ.

ಬದುಕಿನ ಕಹಿಯೆಲ್ಲವನ್ನು ಈ ಪವಿತ್ರಾಗ್ನಿಯಲ್ಲಿ ಸಮರ್ಪಿಸಿ ಭವ್ಯರಾಗಿ, ಮಹಾನ್ ಆಗಿ ಪರಿಣಮಿಸಿರಿ.

# ಪರಿವಿಡಿ


| | | |
|---|---|---|
| ಸಂಪಾದಕರ ಮಾತು | | vi |
| ಉತ್ತರ | | viii |
| ೧ | ದೇಹ ಮತ್ತು ಇಂದ್ರಿಯಗಳು | ೧ |
| ೨ | ಹದಿನಾಲ್ಕು ಲೋಕಗಳು | ೬ |
| ೩ | ನಾಲ್ಕು ಆಶ್ರಮಗಳು | ೮ |
| ೪ | ಮೋಕ್ಷ ಮತ್ತು ಕರ್ಮ | ೧೩ |
| ೫ | ವಿದ್ಯೆ ಮತ್ತು ಭಕ್ತಿ | ೧೬ |
| ೬ | ಮೋಕ್ಷಕ್ಕೆ ಅಡ್ಡಿಗಳು | ೨೦ |
| ೭ | ಪಂಚಕೋಶಗಳು | ೨೪ |
| ೮ | ಯೋಗ ಮತ್ತು ಮೋಕ್ಷ | ೨೮ |
| ೯ | ಜ್ಞಾನ ಮತ್ತು ಯೋಗ | ೩೧ |
| ೧೦ | ಬ್ರಹ್ಮವಿದ್ಯೆ ಮತ್ತು ಮಹಿಳೆಯರು | ೩೪ |
| ೧೧ | ಆಶ್ರಮಗಳು ಮತ್ತು ವರ್ಣಗಳು | ೩೭ |
| ೧೨ | ಶಾಸ್ತ್ರಗಳು ಮತ್ತು ಸನ್ಯಾಸ | ೪೦ |
| ೧೩ | ಮಂತ್ರ ಮತ್ತು ಜಪ | ೪೪ |
| ೧೪ | ತಪಸ್ಸು | ೪೮ |
| ೧೫ | ಅಷ್ಟಾಂಗ ಯೋಗ | ೫೩ |

# ಸಂಪಾದಕರ ಮಾತು

೧೯೬೨ರಲ್ಲಿ ನಾ. ಕಸ್ತೂರಿಯವರ 'ಸತ್ಯಂ ಶಿವಂ ಸುಂದರಂ' ಎಂಬ ಶ್ರೀ ಸತ್ಯಸಾಯಿ ಬಾಬಾರವರ ಅದುವರೆಗಿನ ಜೀವನ ವೃತ್ತಾಂತ ಪ್ರಕಟವಾಯಿತು. ಅದೇ ಸತ್ಯಸಾಯಿ ಸಾಹಿತ್ಯದ ಅಧಿಕೃತವಾದ ಮೊದಲ ಪುಸ್ತಕ. ಅಂದಿನಿಂದ ಈವರೆಗೆ ಈ ಸಾಯಿ ಸಾಹಿತ್ಯ ವಿಪುಲವಾಗಿ ವೈವಿಧ್ಯಮಯವಾಗಿ, ಬೆಳೆದಿದೆ, ಬೆಳೆಯುತ್ತಿದೆ.

ಸಾರ್ವಕಾಲಿಕವೂ ನಿತ್ಯನೂತನವೂ ಆದ ಸನಾತನ ಧರ್ಮವನ್ನು ಪುನಃ ಚೇತನಗೊಳಿಸಲೆಂದೇ ಅದೂ ಅತ್ಯಗತ್ಯವಾದಾಗ ತಾನೇ ಅವತರಿಸಿ ಬರುವುದಾಗಿ ಅಭಯ ವಚನವನ್ನಿತ್ತಿರುವ ಭಗವಂತ ಹಾಗೆ ಅವತರಿಸುವಾಗ ಸರ್ವಸನ್ನದ್ಧನಾಗಿ ಸಪರಿವಾರ ಸಮೇತನಾಗಿ ಈ ಲೋಕಕ್ಕಿಳಿಯುತ್ತಾನೆಂಬುದು ಕ್ರಮಕ್ರಮವಾಗಿ ಭಕ್ತರಿಗೆ, ಜ್ಞಾನಿಗಳಿಗೆ, ಸಂತರಿಗೆ ಅನುಭವವಾಗುತ್ತದೆ. ಅವತಾರ ಕಾಲದಲ್ಲಿ ನಡೆಯಬೇಕಾದ ಎಲ್ಲ ಕಾರ್ಯಗಳ ಬೃಹತ್ ಯೋಜನೆ ಮೊದಲೇ ಸಿದ್ಧವಾಗಿದ್ದರೂ ಭಗವತ್ಸಂಕಲ್ಪದಂತೆ ಅದರ ಒಂದೊಂದೇ ಕಾರ್ಯ, ಒಂದೊಂದೇ ಮಜಲು ಕಾಲಾನುಕ್ರಮವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ. ಆ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಎಲ್ಲರ ಹೃದಯಗಳನ್ನೂ ಸೆಳೆದುಕೊಳ್ಳುವ, ಎಲ್ಲರ ಮನವನ್ನೂ ಮುಟ್ಟಬೇಕಾದ ದಿವ್ಯ ಸಂದೇಶ ಪ್ರಸಾರವೂ ಒಂದು.

ಹೀಗೆ ಶ್ರೀ ಸತ್ಯಸಾಯಿ ಸಂದೇಶವನ್ನು ಜನ ಮಾನಸಕ್ಕೆ ತಲುಪಿಸಲು, ತನ್ಮೂಲಕ ವ್ಯಕ್ತಿಯಲ್ಲಿ ಹಾಗೂ ಸಮಾಜದಲ್ಲಿ ಪರಿವರ್ತನೆಯನ್ನುಂಟು ಮಾಡುವುದಕ್ಕಾಗಿ ೧೯೫೮ರಲ್ಲಿ ಶಿವರಾತ್ರಿಯ ಶುಭ ಸಂದರ್ಭದಲ್ಲಿ 'ಸನಾತನ ಸಾರಥಿ' ಎಂಬ ಅರ್ಥಪೂರ್ಣ ಶೀರ್ಷಿಕೆ ಹೊತ್ತ ಮಾಸಪತ್ರಿಕೆ ಆರಂಭವಾಯಿತು. ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಸಂದೇಶವೊಂದರ ಮೂಲಕ ಸ್ವಾಮಿ ನಿರೂಪಿಸಿದರು. ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆ ಎಂಬ ಪಂಚ ಮೂಲಭೂತ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ದುರ್ಲಭವಾದ, ಆದರೆ ಕೃಪೆ ಹಾಗೂ ಪುಣ್ಯಬಲದಿಂದ ಲಭಿಸಿರುವ, ಮಾನವ ಜೀವನವನ್ನು ಸಾರ್ಥಕಪಡಿಸಿಕೊಳ್ಳುವ ಸಾಧನೆಯಲ್ಲಿ ತೊಡಗುವ ಹಾಗೆ ಆತ್ಮಜಾಗೃತಿ ಮಾಡುವುದೇ ಈ ಪತ್ರಿಕೆಯ ಉದ್ದೇಶ.

ಮಹಾಮಹಾಪಂಡಿತರ ವ್ಯಾಖ್ಯಾನ ವಿವರಣೆಗಳಿಂದ ಕ್ಲಿಷ್ಟ ಇಲ್ಲವೆ ಗೊಂದಲಮಯವಾಗಿರುವ ತತ್ವಗಳನ್ನು, ಅನುಷ್ಠಾನ ಸುಲಭವಾಗಿರುವ ಜೀವನ ಮೌಲ್ಯಗಳನ್ನು, ಜನಸಾಮಾನ್ಯರಿಗೂ ತಿಳಿಯುವ ಹಾಗೆ ಸರಳವಾಗಿ ಶ್ರೀ ಸತ್ಯಸಾಯಿ ಬಾಬಾ ಅವರು ಪ್ರೇಮ ವಾಹಿನಿ, ಉಪನಿಷತ್ ವಾಹಿನಿ, ಭಾಗವತ ವಾಹಿನಿ ಮುಂತಾದ ಹದಿನೈದು ವಾಹಿನಿಗಳಾಗಿ ಭಕ್ತರ ಹೃದಯಗಳಿಗೆ ಹರಿಸಿ ದಾಹವನ್ನು ಪರಿಹರಿಸಿದ್ದಾರೆ. ಈ ಎಲ್ಲ ವಾಹಿನಿಗಳೂ ಸನಾತನ ಸಾರಥಿಯಲ್ಲಿ ಧಾರಾವಾಹಿ

ಯಾಗಿ ಬಂದು ನಂತರ ಪುಟ್ಟ ಪುಟ್ಟ ಪುಸ್ತಕಗಳಾಗಿ ಎರಡು ಬಾರಿ ಕನ್ನಡದಲ್ಲಿ ಮುದ್ರಣಗೊಂಡಿವೆ.

ಪ್ರಶ್ನೋತ್ತರ ವಾಹಿನಿಯು ಧರ್ಮದ ಮೂಲಭೂತ ಕಲ್ಪನೆಗಳನ್ನೂ, ವಿಚಾರಗಳನ್ನೂ ಸ್ಪಷ್ಟಪಡಿಸುತ್ತದೆ. ಅದರಲ್ಲೂ ವಿಶೇಷವಾಗಿ ಪಾರಿಭಾಷಿಕ ಪದಗಳು ಹಾಗೂ ಅವುಗಳನ್ನು ಹರಳುಗಟ್ಟುವಂತೆ ಮಾಡುವ ಉಕ್ತಿಗಳನ್ನು ವಿವರಿಸುತ್ತದೆ. ಸ್ವಾಮಿಯ ಅಪೂರ್ವ ಪ್ರೇಮ ಮತ್ತು ಸಹನೆಗಳು ಪ್ರತಿಯೊಂದು ಉತ್ತರವನ್ನೂ ಮಧುರಗೊಳಿಸುವುದು ಮಾತ್ರವಲ್ಲದೆ ಪ್ರಶ್ನೆಯನ್ನೂ ಹಿತವಾಗುವಂತೆ ಮಾಡುತ್ತದೆ.

ಶ್ರೀ ಸತ್ಯಸಾಯಿ ಸಾಹಿತ್ಯದ ಎಲ್ಲಾ ಶ್ರೇಷ್ಠ ಪುಸ್ತಕಗಳನ್ನೂ ಕನ್ನಡದಲ್ಲಿ ತರುವ ನೂತನ ಯೋಜನೆಯ ಮೊದಲ ಹೆಜ್ಜೆಯಾಗಿ,'ಶ್ರೀ ಸತ್ಯಸಾಯಿ ಸಾಹಿತ್ಯ ರತ್ನ ಮಾಲಾ' ಎಂಬ ಕಿರು ಪುಸ್ತಕಗಳ ಮಾಲೆಯನ್ನು ೨೦೦೨ನೆಯ ಗುರುಪೂರ್ಣಿಮೆಯ ದಿನ 'ಪ್ರಶಾಂತಿ ನಿಲಯಂ (ಪುಟ್ಟಪರ್ತಿ)' ಮತ್ತು 'ವಾಕ್ಯ ವಿಭೂತಿ' ಎಂಬೆರಡು ಪುಸ್ತಿಕೆಗಳ ಪ್ರಕಟಣೆಯೊಂದಿಗೆ ಆರಂಭಿಸಲಾಯಿತು. ಪ್ರಶಾಂತಿ ನಿಲಯಂನಲ್ಲಿ ಸ್ವಾಮಿ ತಮ್ಮ ದಿವ್ಯ ಹಸ್ತದಿಂದ ಇವುಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಕೃಪೆಗಾಗಿ ನಾವೆಲ್ಲರೂ ಅವರಿಗೆ ಕೃತಜ್ಞರಾಗಿದ್ದೇವೆ.

ಸಲಹಾ ಸಮಿತಿಯ ಸದಸ್ಯರೆಲ್ಲರೂ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಹಿರಿಯ ಸಾಯಿ ಬಂಧುಗಳಾದ ಶ್ರೀ. ವೈ. ಎನ್. ಗಂಗಾಧರ ಶೆಟ್ಟಿ, ಅಧ್ಯಕ್ಷರು, ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ(ರಿ), ಬೆಂಗಳೂರು ಮತ್ತು ಇದರ ಉಪಾಧ್ಯಕ್ಷರಾದ ಶ್ರೀ. ನಾಗೇಶ್ ಜಿ. ಧಾಕಪ್ಪ ಇವರ ಮಾರ್ಗದರ್ಶನ ಮತ್ತು ಉತ್ತೇಜನ ಎಲ್ಲರಿಗೂ ಸ್ಫೂರ್ತಿಯಾಗಿದೆ. ಈ ಎಲ್ಲರನ್ನೂ ಧನ್ಯವಾದ ರೂಪದ ಸಂತೋಷ ಭಾವದಿಂದ ನೆನೆಯುತ್ತೇನೆ.

ಸುಂದರವಾಗಿ ಮುದ್ರಿಸಿರುವ ಕರ್ನಾಟಕ ಪ್ರೆಸ್, ಮೈಸೂರು, ಸುಂದರವಾದ ಸೂಕ್ತವಾದ ಮುಖಪುಟವನ್ನು ವಿನ್ಯಾಸ ಮಾಡಿಕೊಟ್ಟಿರುವ ಕ್ಯಾನ್ವಾಸ್, ಬೆಂಗಳೂರು ಮತ್ತು ಅದನ್ನು ಮುದ್ರಿಸಿದ ಓಂಕಾರ್ ಆಫ್‌ಸೆಟ್ ಪ್ರೆಸ್, ಬೆಂಗಳೂರು ಈ ಮಿತ್ರರಿಗೆ ಪ್ರಕಾಶನದ ಅನಂತ ಧನ್ಯವಾದಗಳು.

ಜುಲೈ ೨೦೦೫ **ಕೆ.ಬಿ. ಪ್ರಭುಪ್ರಸಾದ್**
ಮೈಸೂರು ಪ್ರಧಾನ ಸಂಪಾದಕ

# ಉತ್ತರ

ಪ್ರಶ್ನೆ ಎಂದರೆ ಕೇಳುವುದು, ಉತ್ತರ ಎಂದರೆ ಕೇಳಿದ್ದಕ್ಕೆ ಉತ್ತರ ಹೇಳುವುದು, ವಾಹಿನಿ ಎಂದರೆ ಒಂದು ಹೊಳೆ. ಈ ಪುಸ್ತಕವು ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರಿಂದ ಉತ್ತರಗಳನ್ನು ಪಡೆದ ಪ್ರಶ್ನೆಗಳ ಒಂದು ಹರಿವಾಗಿದೆ. ಅವತರಿಸುವಾಗ ಭಗವಾನರು ಹೊತ್ತುಕೊಂಡು ಬಂದಿರುವ ಕಾರ್ಯಗಳಲ್ಲಿ ಒಂದು, ಅದನ್ನು ಅವರು ಮೂಲಭೂತವಾದದ್ದು ಎಂದು ಹೇಳಿದ್ದಾರೆ. ಮಾನವ ಜನಾಂಗದ ಧರ್ಮಗ್ರಂಥಗಳನ್ನು ಸ್ಪಷ್ಟಪಡಿಸುವುದು ಮತ್ತು ಶುದ್ಧಗೊಳಿಸುವುದು. ಅವರಿಂದ ಮೂಡಿಬಂದಿರುವ ಪ್ರತಿಯೊಂದು ವಾಹಿನಿಯೂ ಮಾನವನ ಆಧ್ಯಾತ್ಮಿಕ ಉದ್ಧಾರದ ಒಂದಲ್ಲ ಒಂದು ಮುಖದಲ್ಲಿ ಈ ಕಾರ್ಯವನ್ನು ನಿರ್ವಹಿಸಿದೆ.

ಈ ವಾಹಿನಿಯು ಸರಣಿಯ ತೀರಾ ಮೊದಲಿನವುಗಳಲ್ಲಿ ಒಂದು. ಏಕೆಂದರೆ ಇದು ಧರ್ಮದ ಮೂಲಭೂತ ಕಲ್ಪನೆಗಳನ್ನು ವಿಚಾರಗಳನ್ನೂ ಸ್ಪಷ್ಟಪಡಿಸಲು ಪ್ರಯತ್ನಿಸುತ್ತದೆ. ಅದರಲ್ಲೂ ವಿಶೇಷವಾಗಿ ಪಾರಿಭಾಷಿಕ ಪದಗಳು ಹಾಗೂ ಅವುಗಳನ್ನು ಹರಳುಗಟ್ಟುವಂತೆ ಮಾಡುವ ಉಕ್ತಿಗಳನ್ನೂ ವಿವರಿಸುತ್ತದೆ. ಇದುವರೆಗೂ ಗೀತಾ ವಾಹಿನಿಯ ಅನುಬಂಧವಾಗಿ ಪ್ರಕಟಿಸಿದ್ದ ಇದನ್ನು ಈಗ ಸಾಧಕರ ಕೈಯಲ್ಲಿ ಒಂದು ಸ್ವತಂತ್ರ ಮುಖ್ಯ ಕೃತಿಯಾಗಿ ಇರಿಸಿದೆ. ಇದು ಎಲ್ಲಾ ವಾಹಿನಿಗಳನ್ನು ಓದುವವರಿಗೆ ಸಹಾಯಕವಾಗುತ್ತದೆ.

ಸನಾತನ ಧರ್ಮವು, ಆ ಪ್ರಾಚೀನ ಜ್ಞಾನದ ನಿರಂತರ ಸ್ರೋತವು ಮುಂದಿನ ಪೀಳಿಗೆಗೆ ಶಬ್ದರೂಪದಲ್ಲಿ ನೀಡಲ್ಪಟ್ಟಿದೆ. ಆದರೆ ಕಾಲ ಕಳೆದ ಹಾಗೆ, ವ್ಯಾಖ್ಯಾನಕಾರರ ಭಿನ್ನಾಭಿಪ್ರಾಯಗಳು ಕಾರಣವಾಗಿ ಅದು ವಿರೂಪಗೊಂಡಿರಬಹುದು, ಮೌಲ್ಯ ಕಳೆದುಕೊಂಡಿರಬಹುದು, ತೆಳುವಾಗಿರಬಹುದು, ತಿರಸ್ಕಾರಕ್ಕೆ ಗುರಿಯಾಗಿರಬಹುದು. ವರ್ಣ, ಆಶ್ರಮ, ಯೋಗ, ಸನ್ಯಾಸ, ಯಜ್ಞ, ಕರ್ಮ—ಇವುಗಳನ್ನು ವಿವಿಧ ಪಂಥ ಪಂಗಡಗಳ ಅನುಯಾಯಿಗಳು ವಿಪರೀತ ಗೊಂದಲಕರವಾದ ರೀತಿಯಲ್ಲಿ, ವಿರುದ್ಧ ರೂಪಗಳಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ಭಗವಾನರು ಈ ತೊಡರುಗಳನ್ನು ಬಿಡಿಸಿದ್ದಾರೆ. ಅವರ ಅಪೂರ್ವ ಪ್ರೇಮ ಮತ್ತು ಸಹನೆಗಳು ಪ್ರತಿಯೊಂದು ಉತ್ತರವನ್ನೂ ಮಧುರಗೊಳಿಸುವುದು ಮಾತ್ರವಲ್ಲ, ಪ್ರಶ್ನೆಯನ್ನೂ ಹಿತವಾಗುವಂತೆ ಮಾಡುತ್ತವೆ. ಏಕೆಂದರೆ, ಪ್ರಶ್ನಕನಾಗಿ ಅವರೇ ವಿವರಣೆಗಳನ್ನು ಪೂರ್ಣವೂ ಫಲಪ್ರದವೂ ಆಗುವಂತೆ ಮಾಡಿದ್ದಾರೆ.

ಪ್ರಶಾಂತಿ ನಿಲಯಂ
೧೪.೧.೧೯೮೪

**ನಾ. ಕಸ್ತೂರಿ**

# ೧ ದೇಹ ಮತ್ತು ಇಂದ್ರಿಯಗಳು

**ಪ್ರಶ್ನೆ** : ಮಾನವ ದೇಹವು ಪಂಚಭೂತಗಳಿಂದಾಗಿದೆ ಎಂದು ಏಕೆ ಹೇಳುತ್ತಾರೆ?

**ಉತ್ತರ** : ಏಕೆಂದರೆ ಅದು ಪಂಚಭೂತಗಳ ಉತ್ಪನ್ನವಾಗಿದೆ.

**ಪ್ರಶ್ನೆ** : ಪಂಚಭೂತಗಳು ಯಾವುವು?

**ಉತ್ತರ** : ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ. ಸಾಮಾನ್ಯ ಮಾತುಗಳಲ್ಲಿ ಆಕಾಶ, ಗಾಳಿ, ಬೆಂಕಿ, ನೀರು ಮತ್ತು ಮಣ್ಣು.

**ಪ್ರಶ್ನೆ** : ಇವು ಎಲ್ಲಿಂದ ಹುಟ್ಟಿದವು?

**ಉತ್ತರ** : ಪ್ರತಿ ಮುಂದಿನ ದ್ರವ್ಯವು ಹಿಂದಿನದರಿಂದ ಹುಟ್ಟಿತು.

**ಪ್ರಶ್ನೆ** : ಹಾಗಾದರೆ ಮೊಟ್ಟಮೊದಲನೆಯದರ ಮೂಲ, ಅಂದರೆ ಈ ಐದರ ಮೂಲ ಯಾವುದು?

**ಉತ್ತರ** : ನಿರ್ವಿಕಾರ ಅಚಲ ಪರಿಪೂರ್ಣ ಬ್ರಹ್ಮನ್.

**ಪ್ರಶ್ನೆ** : ಪಂಚಭೂತಗಳಿಗೂ ಮಾನವ ದೇಹಕ್ಕೂ ನಡುವೆ ಇರುವ ಸಂಬಂಧ ಎಂಥದು?

**ಉತ್ತರ** : ಬ್ರಹ್ಮದಿಂದ ಯತ್ನ ಮತ್ತು ಮಹತ್ (ಪ್ರಯತ್ನ ಮತ್ತು ಬ್ರಹ್ಮಾಂಡ) ಹುಟ್ಟಿದುವು; ಇವುಗಳಿಂದ ಆಕಾಶ ಹುಟ್ಟಿತು, ಆಕಾಶದಿಂದ ವಾಯು; ವಾಯುವಿನಿಂದ ಅಗ್ನಿ; ಅಗ್ನಿಯಿಂದ ಜಲ; ಜಲದಿಂದ ಪೃಥ್ವಿ. ಈ ಐದು ದ್ರವ್ಯಗಳ ಮಿಶ್ರಣದ ಫಲವೇ ಮನುಷ್ಯ ದೇಹ.

**ಪ್ರಶ್ನೆ** : ದೇಹದಲ್ಲಿ ಈ ದ್ರವ್ಯಗಳು ಯಾವ ರೂಪದಲ್ಲಿ ಉಳಿದಿರುತ್ತವೆ?

**ಉತ್ತರ** : ಪ್ರತಿಯೊಂದು ಭೂತವೂ ಮತ್ತೆ ಐದಾಗಿ ವಿಭಜಿತವಾಗಿ ದೇಹದ ರಚನೆಯಲ್ಲಿ ಸೇರಿವೆ.

**ಪ್ರಶ್ನೆ** : ಮೊದಲನೆಯದಾದ ಆಕಾಶವು ಪಡೆದುಕೊಂಡ ಐದು ರೂಪಗಳು ಯಾವುವು?

**ಉತ್ತರ** : ಜ್ಞಾತಾ (ಗ್ರಹಿಸುವವನು), ಮನಸ್ಸು, ಬುದ್ಧಿ, ಚಿತ್ತ ಅಹಂಕಾರ—ಇವೇ ಆಕಾಶ ಪಂಚಕಗಳೆಂದು.

**ಪ್ರಶ್ನೆ** : ದೇಹದಲ್ಲಿ ಎಂದು ಮಾತನಾಡುವಾಗ ಇವುಗಳನ್ನು ಹೇಗೆ ಸೂಚಿಸಲಾಗುತ್ತದೆ?

**ಉತ್ತರ** : ಅವುಗಳನ್ನು ಅಂತರಿಂದ್ರಿಯಗಳೆಂದು ಗುರುತಿಸಲಾಗಿದೆ.

**ಪ್ರಶ್ನೆ** : ಮುಂದಿನ ದ್ರವ್ಯವಾದ ವಾಯುವಿನ ಐದು ರೂಪಗಳು ಯಾವುವು?

**ಉತ್ತರ** : ಸಮಾನ, ವ್ಯಾನ, ಉದಾನ, ಪ್ರಾಣ ಮತ್ತು ಅಪಾನ.

**ಪ್ರಶ್ನೆ** : ದೇಹದಲ್ಲಿ ಅವುಗಳನ್ನು ಏನೆಂದು ಕರೆಯುತ್ತಾರೆ?

**ಉತ್ತರ** : ಪಂಚ ಪ್ರಾಣಗಳು ಎಂದು.

**ಪ್ರಶ್ನೆ** : ಅಗ್ನಿಯ ವಿಷಯವೇನು?

**ಉತ್ತರ** : ಆ ದ್ರವ್ಯವು ಕಿವಿ, ಚರ್ಮ, ಕಣ್ಣು, ನಾಲಗೆ ಮತ್ತು ಮೂಗು ಎಂಬ ಪಂಚೇಂದ್ರಿಯಗಳಾಯಿತು.

**ಪ್ರಶ್ನೆ** : ಈ ಗುಂಪನ್ನು ವಿಶಿಷ್ಟವಾಗಿ ಗುರುತಿಸುವುದು ಹೇಗೆ?

**ಉತ್ತರ** : ಜ್ಞಾನೇಂದ್ರಿಯಗಳು, ಗ್ರಹಿಕೆಯ ಅಂಗಗಳು ಎಂಬುದಾಗಿ.

**ಪ್ರಶ್ನೆ** : ಜಲಪಂಚಕಗಳು ಅಥವಾ ಅಪ್ ದ್ರವ್ಯದ ಐದು ರೂಪಗಳನ್ನು ಹೇಳಿ?

**ಉತ್ತರ** : ಶಬ್ದ, ಸ್ಪರ್ಶ, ರೂಪ, ರಸ, ಗಂಧ.

**ಪ್ರಶ್ನೆ** : ಇವುಗಳಿಗೂ ವಿಶೇಷವಾದ ಹೆಸರೊಂದಿದೆಯೇ?

**ಉತ್ತರ** : ಇವನ್ನು ಪಂಚತನ್ಮಾತ್ರೆಗಳು ಎನ್ನುತ್ತಾರೆ. ಇವು ಸೂಕ್ಷ್ಮ ಅಂಶಗಳು.

**ಪ್ರಶ್ನೆ** : ಉಳಿದುದು ಪೃಥ್ವಿ ದ್ರವ್ಯ. ದೇಹದಲ್ಲಿ ಇದು ಹೇಗೆ ಕಾಣಿಸಿಕೊಳ್ಳುತ್ತದೆ?

**ಉತ್ತರ** : ಧ್ವನ್ಯಂಗಗಳು, ಕೈಗಳು, ಕಾಲುಗಳು, ಗುಹ್ಯಾಂಗಗಳು ಮತ್ತು ವಿಸರ್ಜನಾ ಅಂಗಗಳು.

**ಪ್ರಶ್ನೆ** : ಇವಕ್ಕೆ ಹೆಸರು?

**ಉತ್ತರ** : ಕರ್ಮೇಂದ್ರಿಯಗಳು ಎನ್ನುತ್ತಾರೆ.

**ಪ್ರಶ್ನೆ** : ಪಂಚಭೂತಗಳಿಂದಾದ ಈ ಮಾನವ ದೇಹವನ್ನು ಒಂದು ಘಟಕವಾಗಿ ಪರಿಗಣಿಸುವುದಕ್ಕೆ ಬದಲು ವೇದಾಂತಿಗಳು ಅದರಲ್ಲಿ ಅನೇಕ ಘಟಕಗಳಿವೆ ಎನ್ನುತ್ತಾರೆ ನಿಜವೆ?

**ಉತ್ತರ** : ಅನೇಕ ಅಲ್ಲ, ಮೂರು. ಕೆಲವರು ನಾಲ್ಕು ಇವೆ ಎನ್ನುತ್ತಾರೆ.

**ಪ್ರಶ್ನೆ** : ಅವು ಯಾವುವು? ಅವುಗಳ ಹೆಸರೇನು? ಮೂರು, ನಾಲ್ಕನೆಯವು?

**ಉತ್ತರ** : ಸ್ಥೂಲ ದೇಹ, ಸೂಕ್ಷ್ಮ ದೇಹ, ಕಾರಣ ದೇಹ. ಕೆಲವರು ಮಹಾಕಾರಣ ದೇಹವನ್ನೂ ಹೇಳುತ್ತಾರೆ.

**ಪ್ರಶ್ನೆ** : ಸ್ಥೂಲ ದೇಹ ಎನ್ನುವುದು ಯಾವುದು?

**ಉತ್ತರ** : ಈಗಾಗಲೇ ನಾನು ಹೇಳಿರುವ ೨೫ ಭೂತ ತತ್ವಗಳಿಂದ ಆಗಿರುವ ದೇಹ ಎಂದರ್ಥ.

**ಪ್ರಶ್ನೆ** : ಹಾಗಾದರೆ ಸೂಕ್ಷ್ಮ ದೇಹ ಎನ್ನುವುದು ಯಾವುದು?

**ಉತ್ತರ** : ಐದು ಜ್ಞಾನೇಂದ್ರಿಯಗಳು, ಐದು ತನ್ಮಾತ್ರೆಗಳು, ಐದು ಪ್ರಾಣಗಳು, ಮನಸ್ಸು ಮತ್ತು ಬುದ್ಧಿ—ಈ ಹದಿನೇಳೂ ಕೂಡಿ ಸೂಕ್ಷ್ಮ ದೇಹವಾಗುತ್ತದೆ.

**ಪ್ರಶ್ನೆ** : ಇದಕ್ಕೆ ಸೂಕ್ಷ್ಮ ದೇಹ ಎಂದು ಮಾತ್ರ ಹೆಸರೊ ಅಥವಾ ಬೇರೆ ಏನಾದರೂ ಹೆಸರಿದೆಯೊ?

**ಉತ್ತರ** : ಯಾಕಿಲ್ಲ? ಇದೆ. ಅದನ್ನು ತೈಜಸ ಎಂದೂ ಕರೆಯುತ್ತಾರೆ.

**ಪ್ರಶ್ನೆ** : ಅದು ಯಾವುದೋ ಒಂದು ಅವಸ್ಥೆಯೊಂದಿಗೆ ಸಂಬಂಧಿಸಿದೆಯೇ?

**ಉತ್ತರ** : ಹೌದು.

**ಪ್ರಶ್ನೆ** : ಅದರ ಹೆಸರೇನು?

**ಉತ್ತರ** : ಸ್ವಪ್ನಾವಸ್ಥೆ.

**ಪ್ರಶ್ನೆ** : ಸ್ಥೂಲ ದೇಹಕ್ಕೆ ನಿರ್ದಿಷ್ಟವಾದೊಂದು ಅವಸ್ಥೆ ಇಲ್ಲ ಎಂದೆ?

**ಉತ್ತರ** : ಇದೆ, ಅದಕ್ಕೂ ಇದೆ.

**ಪ್ರಶ್ನೆ** : ದಯವಿಟ್ಟು ಅದರ ಹೆಸರು ಹೇಳಿ.

**ಉತ್ತರ** : ಜಾಗೃತ್ ಅವಸ್ಥೆ, ಎಚ್ಚರವಾಗಿರುವ ಸ್ಥಿತಿ.

**ಪ್ರಶ್ನೆ** : ಕಾರಣ ದೇಹ ಎನ್ನುವುದು ಯಾವುದು?

**ಉತ್ತರ** : ಅಲ್ಲಿ ಚಿತ್ತವು ಜ್ಞಾತದೊಂದಿಗೆ ಕೂಡಿಕೊಂಡಿದೆ.

**ಪ್ರಶ್ನೆ** : ಅದರ ಹೆಸರೇನು?

**ಉತ್ತರ** : ಪ್ರಾಜ್ಞ.

**ಪ್ರಶ್ನೆ** : ಅದರ ಅವಸ್ಥೆ?

**ಉತ್ತರ** : ಸುಷುಪ್ತಿ, ಆಳವಾದ ನಿದ್ರೆ.

**ಪ್ರಶ್ನೆ** : ಮಹಾಕಾರಣ ದೇಹ ಎಂದು ಯಾವುದಕ್ಕೆ ಹೇಳುತ್ತಾರೆ? ತಿಳಿಸಿ.

**ಉತ್ತರ** : ಯಾವುದೇ ದ್ರವ್ಯ ತತ್ವದೊಂದಿಗೆ ಬೆರೆಯದ ಪರಿಶುದ್ಧ ಚಿತ್ತ. ಅದು ಶಾಶ್ವತ ಸಾಕ್ಷಿ, ಸ್ವಯಂ ಪ್ರಭ. ಅದನ್ನೇ ಮಹಾಕಾರಣ ದೇಹ ಎಂದು ಹೇಳುತ್ತಾರೆ.

**ಪ್ರಶ್ನೆ** : ಮಿಕ್ಕವುಗಳಂತೆ ಅದಕ್ಕೂ ಹೆಸರಿದೆಯೆ?

**ಉತ್ತರ** : ಹೌದು, ಹಿರಣ್ಯಗರ್ಭ ಎಂದು.

**ಪ್ರಶ್ನೆ** : ಅದರ ಅವಸ್ಥೆ?

**ಉತ್ತರ** : ಅದು ಅವಸ್ಥಾರಹಿತ. ಪ್ರಜ್ಞೆಯ ಎಲ್ಲ ಅವಸ್ಥೆಗಳಿಗೆ ಅದು ಅತೀತವಾದುದರಿಂದಲೇ ಅದನ್ನು ಅಕ್ಷರ ಪುರುಷ ಎಂದು ವರ್ಣಿಸುತ್ತಾರೆ.

**ಪ್ರಶ್ನೆ** : ಮತ್ತೆ ಸ್ಥೂಲ ದೇಹದ ವಿಷಯಕ್ಕೆ ಬರುವುದಾದರೆ, ಅದನ್ನು ರೂಪಿಸಿರುವ ಪಂಚಭೂತಗಳಿಗೆ ಅನ್ವಯಿಸಬಹುದಾದ ನಿರ್ದಿಷ್ಟ ಉತ್ಪನ್ನಗಳಾವುವು?

**ಉತ್ತರ** : ಪೃಥ್ವಿಯಿಂದ ಮೂಳೆ, ಚರ್ಮ, ಮಾಂಸ, ರಕ್ತನಾಳ ಮತ್ತು ಕೂದಲು.

**ಪ್ರಶ್ನೆ** : ಜಲಕ್ಕೆ?

**ಉತ್ತರ** : ರಕ್ತ, ಮೂತ್ರ, ಜೊಲ್ಲು, ಶ್ಲೇಷ್ಮ ಮತ್ತು ಮಿದುಳು.

**ಪ್ರಶ್ನೆ** : ಅಗ್ನಿಯಿಂದ?

**ಉತ್ತರ** : ಹಸಿವೆ, ಬಾಯಾರಿಕೆ, ನಿದ್ರೆ, ಆಲಸ್ಯ, ಗೆಳೆತನ.

**ಪ್ರಶ್ನೆ** : ವಾಯು ತತ್ವವು ಏನನ್ನು ಉತ್ಪಾದಿಸುತ್ತದೆ?

**ಉತ್ತರ** : ಚಟುವಟಿಕೆ, ಚಲನೆ, ವೇಗ, ನಾಚಿಕೆ, ಹೆದರಿಕೆ.

**ಪ್ರಶ್ನೆ** : ಹೀಗೇ ಆಕಾಶ ತತ್ವವೂ ಕೆಲವು ಪರಿಣಾಮಗಳಿಗೆ ಕಾರಣವಾಗಿರಬೇಕಲ್ಲವೆ?

**ಉತ್ತರ** : ಹೌದು. ಕಾಮ, ಕ್ರೋಧ, ಲೋಭ, ಗರ್ವ ಮತ್ತು ಮಾತ್ಸರ್ಯ.

**ಪ್ರಶ್ನೆ** : ಮನುಷ್ಯನಿಗೆ ಹಲವು ಕ್ಲೇಶಗಳಿವೆಯಲ್ಲವೆ? ಅವನ ದೇಹದ ರಚನೆಯ ಪರಿಣಾಮಗಳಿಗೂ ಅವನ ಕ್ಲೇಶಗಳಿಗೂ ಸಂಬಂಧವಿದೆಯೇ?

**ಉತ್ತರ** : ನಿಮಗೆ ಕೆಲವು ಸಂದೇಹಗಳಿರುವಂತೆ ತೋರುತ್ತದೆ. ಮನುಷ್ಯನ ಎಲ್ಲ ಸಂಕಟಗಳಿಗೆ ಕಾರಣ ಈ ಸ್ಥೂಲಗುಣಗಳ ಸಮೂಹ. ಕ್ಲೇಶಗಳು ಬಹು

ವಾಗಿರುವಂತೆ ತೋರಿದರೂ ಅವು ನಾಲ್ಕು ಬಗೆ ಮಾತ್ರ. ಅವುಗಳನ್ನು ವಾಸನೆಗಳೆಂದು ಕರೆಯುತ್ತಾರೆ.

**ಪ್ರಶ್ನೆ** : ನಾಲ್ಕು ವಾಸನೆಗಳು ಯಾವುವು?

**ಉತ್ತರ** : ದೇಹ, ಮನಸ್ಸು, ಸಂಪತ್ತು ಮತ್ತು ಸ್ತ್ರೀ. ಬೇರೆ ಕೆಲವು ಇದ್ದರೂ ಅವು ಅಂತಿಮವಾಗಿ ಇವುಗಳ ಮೇಲೆಯೇ ನಿಲ್ಲುತ್ತವೆ.

**ಪ್ರಶ್ನೆ** : ಮನುಷ್ಯನು ಗರ್ವದಿಂದ ಕುರುಡಾಗಿ ಬಿಂಕ ತೋರಿಸುತ್ತಾನೆ. ಅವನಲ್ಲಿ ಮೇಲೇಳುವ ಈ ಅಹಂ ಯಾವುದು? ಎಷ್ಟು ಬಗೆಯ ಅಹಂಗಳಿವೆ?

**ಉತ್ತರ** : ನಾಲ್ಕು ಬಗೆ—ಕುಲದ ಗರ್ವ, ಸಿರಿಯ ಗರ್ವ, ಯೌವನದ ಗರ್ವ ಮತ್ತು ವಿದ್ವತ್ತಿನ ಗರ್ವ. ಇನ್ನೂ ಇತರ ಬಗೆಗಳಿದ್ದರೂ ಅವನ್ನೂ ಈ ನಾಲ್ಕರಲ್ಲೇ ವರ್ಗೀಕರಿಸಬಹುದು.

# ೨ ಹದಿನಾಲ್ಕು ಲೋಕಗಳು

**ಪ್ರಶ್ನೆ** : ಲೋಕಗಳೆಲ್ಲವೂ ಮನುಷ್ಯನ ದೇಹದಲ್ಲೇ ಇವೆ ಎಂದು ಹೇಳುವುದನ್ನು ಕೇಳಿದ್ದೇನೆ. ಕೆಲವು ಅನುಭವಿಗಳು, ಶಾಸ್ತ್ರಾಧ್ಯಯನ ಮಾಡಿದವರು ಹಾಗೆ ಹೇಳುತ್ತಾರೆ. ಇದು ನಿಜವೆ? ಆ ಲೋಕಗಳು ಯಾವುವು? ಅವು ಎಲ್ಲಿವೆ?

**ಉತ್ತರ** : ಹೌದು, ಅವು ಹೀಗಿವೆ: ಭೂಲೋಕ ಪಾದಗಳಲ್ಲಿ; ಭುವರ್ಲೋಕ ಗುಹ್ಯಾಂಗಗಳಲ್ಲಿ; ಸುವರ್ಲೋಕ ಹೊಕ್ಕುಳಿನಲ್ಲಿ; ಮಹರ್ಲೋಕ ಹೃದಯದಲ್ಲಿ; ಜನಲೋಕ ಗಂಟಲಿನಲ್ಲಿ; ತಪೋಲೋಕ ಹುಬ್ಬಿನ ನಡುವೆ ಮತ್ತು ಸತ್ಯಲೋಕ ತಲೆಯ ನೆತ್ತಿ ಭಾಗದಲ್ಲಿ. ಇವುಗಳನ್ನು ಊರ್ಧ್ವ ಲೋಕಗಳು ಎಂದೂ ಕರೆಯುತ್ತಾರೆ. ಇವು ಮಾನವನ ದೇಹದಲ್ಲಿವೆ. ಅಧೋಲೋಕಗಳೂ ಇವೆ.

**ಪ್ರಶ್ನೆ** : ಅವು ಯಾವುವು? ಮತ್ತು ಎಲ್ಲಿವೆ?

**ಉತ್ತರ** : ಅತಳ ಅಂಗಾಲುಗಳಲ್ಲಿ; ವಿತಳ ಉಗುರುಗಳ ಮೇಲೆ; ಸುತಳ ಹಿಮ್ಮಡಿಗಳಲ್ಲಿ; ತಳಾತಳ ಪೃಷ್ಠದಲ್ಲಿ; ರಸಾತಳ ಮಂಡಿಗಳಲ್ಲಿ; ಮಹಾತಳ ತೊಡೆಗಳಲ್ಲಿ ಮತ್ತು ಪಾತಾಳ ಗುದದ್ವಾರದಲ್ಲಿ.

**ಪ್ರಶ್ನೆ** : ಎಲ್ಲಾ ಲೋಕಗಳೂ ದೇಹದಲ್ಲೇ ಇದ್ದರೆ, ಪಂಚಭೂತಗಳಿಂದ ದೇಹವು ಆಗಿದ್ದರೆ, ಸಪ್ತಸಮುದ್ರಗಳ ವಿಷಯವೇನು? ಅವೂ ದೇಹದಲ್ಲೋ ಮನಸ್ಸಿನಲ್ಲೋ ಇವೆಯೇ?

**ಉತ್ತರ** : ದೇಹವು ಎಲ್ಲಾ ಲೋಕಗಳ ನೆಲೆಯಾಗಿರುವಾಗ ಸಪ್ತಸಮುದ್ರಗಳು ಲೋಕಗಳೊಡನೆಯಲ್ಲದೆ ಪ್ರತ್ಯೇಕವಾಗಿ ಹೇಗಿರಬಲ್ಲವು? ಅವೂ ದೇಹದ ಒಳಗೇ ಇವೆ. ಲವಣ ಸಮುದ್ರ (ಮೂತ್ರ), ಇಕ್ಷು ಸಮುದ್ರ (ಬೆವರು), ಸುರಾ ಸಮುದ್ರ (ಇಂದ್ರಿಯಗಳು), ಸರ್ಪಿ ಅಥವಾ ತುಪ್ಪದ ಸಮುದ್ರ (ವೀರ್ಯ), ದಧಿ ಸಮುದ್ರ (ಶ್ಲೇಷ್ಮ), ಕ್ಷೀರ ಸಮುದ್ರ (ಜೊಲ್ಲು) ಮತ್ತು ಶುದ್ಧೋದಕ ಸಮುದ್ರ (ಕಣ್ಣೀರು).

**ಪ್ರಶ್ನೆ** : ಅಗ್ನಿಯ ಹಲವು ಬಗೆಗಳನ್ನು ಹೇಳಿದಿರಿ. ಅವು ಯಾವುವು? ಅವುಗಳ ಹೆಸರೇನು?

**ಉತ್ತರ** : ಅವುಗಳನ್ನು ಪಂಚಾಗ್ನಿ ಎನ್ನುತ್ತಾರೆ, ಏಕೆಂದರೆ ಅವು ಐದಾಗಿವೆ. ಕಾಲಾಗ್ನಿ, ಎನ್ನುವುದು ಸಮಯ, ಕ್ಷುಧಾತ್ರಾಗ್ನಿ, ಶೀತ್ರಾಗ್ನಿ, ಕೋಪಾಗ್ನಿ ಮತ್ತು ಜ್ಞಾನಾಗ್ನಿ.

**ಪ್ರಶ್ನೆ** : ಇವು ಎಲ್ಲಿರುತ್ತವೆ?

**ಉತ್ತರ** : ಪಾದಗಳಲ್ಲಿ, ಹೊಕ್ಕುಳಿನಲ್ಲಿ, ಹೊಟ್ಟೆಯಲ್ಲಿ, ಕಣ್ಣಿನಲ್ಲಿ ಮತ್ತು ಹೃದಯದಲ್ಲಿ.

**ಪ್ರಶ್ನೆ** : ಇವಲ್ಲದೆ ನಾದ ಅಥವಾ ಶಬ್ದದ ಹಲವು ಬಗೆಗಳೂ ಉಂಟು ಎಂದು ಕೇಳಿದ್ದೇವೆ. ಕೆಲವರು ಆ ಮಾತಾಡುವುದನ್ನು ಗಮನಿಸಿದ್ದೇವೆ.

**ಉತ್ತರ** : ಹೌದು, ಅವೂ ಇವೆ.

**ಪ್ರಶ್ನೆ** : ಅವೂ ದೇಹದಲ್ಲಿವೆಯೆ? ಅವು ಎಷ್ಟು ಬಗೆ? ಅವುಗಳ ಹೆಸರೇನು?

**ಉತ್ತರ** : ಹತ್ತು ಬಗೆಯಾಗಿವೆ. ಇವೆಲ್ಲವೂ ಸ್ಥೂಲ ದೇಹದಲ್ಲೇ ಇವೆ. ಲಲಾದಿ ಘೋಷ, ಭೇರೀನಾದ, ಚಣೀನಾದ, ಮೃದಂಗನಾದ, ಘಂಟಾನಾದ, ಕಲನಾದ, ಕಿಂಕಿಣೀನಾದ, ವೇಣುನಾದ, ಭ್ರಮರನಾದ ಮತ್ತು ಕೊನೆಯದಾಗಿ ಪ್ರಣವನಾದ. ಇವು ಶಬ್ದದ ಬಗೆಗಳು.

**ಪ್ರಶ್ನೆ** : ಸೃಷ್ಟಿ ಸಮಸ್ತವೂ ಪಂಚಭೂತಗಳ ಮಿಶ್ರಣವಾದ ದೇಹದಲ್ಲಿ ಅಡಗಿರುವುದಾದರೆ, ಅಂಡಾಂಡ, ಪಿಂಡಾಂಡ ಮತ್ತು ಬ್ರಹ್ಮಾಂಡಗಳು ಯಾವುವು?

**ಉತ್ತರ** : ಅಂಡಾಂಡ ಎಂದರೆ ಈ ಸೃಷ್ಟಿ, ವಿಕಾಸ ವಿನಾಶ ಎರಡನ್ನೂ ಹೊಂದುವಂಥದು, ಚರ ಮತ್ತು ಅಚರ ಪ್ರಕೃತಿ ಎಂದು ಅನೇಕ ವೇಳೆ ಕರೆಯುತ್ತಾರೆ. ದ್ರಷ್ಟಾರ ಮತ್ತು ದೃಶ್ಯ, ಕರ್ತಾರ ಮತ್ತು ಕೃತಿ—ಹೀಗೆ ಕಾಣಿಸುವ ಎಲ್ಲ ದ್ವಂದ್ವಗಳ ಆಂತರ್ಯದಲ್ಲಿರುವ ತತ್ವದ ಹೆಸರು ಪಿಂಡಾಂಡ. ಜನ್ಮದ ಕರ್ಮಕ್ಕನುಗುಣವಾಗಿ ಜೀವವು ಮತ್ತೆ ಮತ್ತೆ ಹುಟ್ಟುವಂತೆ ಮಾಡುವುದೇ ಈ ದ್ವಂದ್ವ. ಪಂಚಭೂತಗಳ ಆಂತರಿಕ ಶಕ್ತಿಗಳಾದ ಮಹಾಭೂತಗಳೇ ಬ್ರಹ್ಮಾಂಡ ಎನಿಸಿಕೊಳ್ಳುತ್ತವೆ. ಆತ್ಮವು ಆಕಾಶದೊಂದಿಗೆ, ಜೀವಾತ್ಮವು ವಾಯುವಿನೊಂದಿಗೆ, ಪ್ರತ್ಯಗಾತ್ಮವು ಅಗ್ನಿಯೊಂದಿಗೆ, ಚೈತನ್ಯಬ್ರಹ್ಮವು ಜಲತತ್ವದೊಂದಿಗೆ ಮತ್ತು ಪರಮಾತ್ಮವು ಪೃಥ್ವಿಯೊಂದಿಗೆ ಸಂಬಂಧಪಟ್ಟಿವೆ. ಬ್ರಹ್ಮಾಂಡ ಎಂಬ ಕಲ್ಪನೆಯಲ್ಲಿ ಇವೆಲ್ಲ ಸೇರಿವೆ. ಪಂಚಭೂತಗಳು ಕಾರ್ಯಪ್ರವೃತ್ತವಾಗುವಂತೆ ಮಾಡುವುದೇ ಈ ಶಕ್ತಿ. ಇವುಗಳಿಂದಾಚೆಗೆ ಅವ್ಯಕ್ತ ಬ್ರಹ್ಮವಿದೆ, ಅದು ಗ್ರಹಿಕೆಗೆ ನಿಲುಕದ ಪರತತ್ವ.

**ಪ್ರಶ್ನೆ** : ಸ್ವಾಮಿ, ಈ ಜಟಿಲವಾದ ವಿಷಯ ನನಗೆ ಅರ್ಥವಾಗುತ್ತಿಲ್ಲ ಸರಳವಾದ ನಿದರ್ಶನದ ಮೂಲಕ ದಯವಿಟ್ಟು ವಿವರಿಸಿ ಹೇಳಿ.

**ಉತ್ತರ** : ಒಳ್ಳೆಯದು. ಅಂಡಾಂಡವು ಕಣ್ಣಿನ ಕಪ್ಪುಗುಡ್ಡೆ ಇದ್ದ ಹಾಗೆ, ಪಿಂಡಾಂಡವು ಅದರೊಳಗಿನ ವೃತ್ತದ ಹಾಗೆ, ಬ್ರಹ್ಮಾಂಡವು ಅದರಲ್ಲಿ ಹೊಳೆಯುವ ಬೆಳಕಿನ ಹಾಗೆ; ಬೆಳಕಿನ ಕಾಂತಿಯೇ ಬ್ರಹ್ಮ.

# ೩ ನಾಲ್ಕು ಆಶ್ರಮಗಳು

**ಪ್ರಶ್ನೆ** : ಮನುಷ್ಯ ದೇಹವಾಗಿರುವ ಈ ವಿಶ್ವದಲ್ಲಿ ಅನುಸರಿಸಬಹುದಾದ ಅತ್ಯುತ್ತಮ ಧರ್ಮ ಯಾವುದು? ಆ ಧರ್ಮಾನುಸರಣೆಗೆ ಒಗ್ಗುವ ಆಶ್ರಮ ಯಾವುದು? ಆಶ್ರಮಗಳು ಎಷ್ಟಿವೆ?

**ಉತ್ತರ** : ಆಶ್ರಮಗಳು ನಾಲ್ಕಿವೆ. ಅವುಗಳ ವಿಚಾರವಾಗಿ ತಿಳಿದುಕೊಂಡರೆ ಯಾವ ಆಶ್ರಮವನ್ನು ನೀವು ಅನುಸರಿಸಬಹುದೆಂದು ನೀವೇ ನಿರ್ಧರಿಸಿಕೊಳ್ಳಬಹುದು. ನಿಮ್ಮದೇ ಸಾಧನೆ, ಪ್ರಗತಿ ಮತ್ತು ಅಭಿರುಚಿಗಳಿಗೆ ಅದು ಹೊಂದಿಕೊಂಡಿರುತ್ತದೆ. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸನ್ಯಾಸ—ಇವೇ ನಾಲ್ಕು ಆಶ್ರಮಗಳು.

**ಪ್ರಶ್ನೆ** : ಬ್ರಹ್ಮಚರ್ಯ ಎಂಬ ಪದವನ್ನೂ ಅದು ಸೂಚಿಸುವ ಹಂತವನ್ನೂ ಕುರಿತು ಬೇರೆ ಬೇರೆ ಜನರು ವಿಧವಿಧವಾಗಿ ವಿವರಣೆ ಕೊಟ್ಟಿದ್ದಾರೆ. ಆ ಹಂತದ ನಿಜವಾದ ಮಹತ್ವವನ್ನು ತಮ್ಮಿಂದ ತಿಳಿಯಬಯಸುತ್ತೇನೆ.

**ಉತ್ತರ** : ಒಳ್ಳೆಯದು. ಗೃಹಸ್ಥರಾಗಿಲ್ಲದವರೆಲ್ಲರೂ ಬ್ರಹ್ಮಚಾರಿಗಳೆಂದು ಕರೆಸಿಕೊಳ್ಳಲು ಅರ್ಹರು ಎಂಬುದು ಸಾಮಾನ್ಯವಾದ ನಂಬಿಕೆ. ಇದು ತುಂಬಾ ತಪ್ಪು. ಯಾರು ಪ್ರಾಪಂಚಿಕ ಮೋಹಗಳಿಂದ ಮನಸ್ಸನ್ನು ದೂರವಿಟ್ಟು, ಸದಾಕಾಲವೂ ಭಗವಚ್ಚಿಂತನೆಯಲ್ಲಿ ನಿರತರಾಗಿರುತ್ತಾರೆಯೋ ಚಿತ್ರವಿಚಿತ್ರವಾದ ಅತಿಶಯವಾದುದನ್ನು ಕೇಳುವುದಿಲ್ಲವೋ ನೋಡುವುದಿಲ್ಲವೋ ಸದಭಿರುಚಿಯನ್ನು ಹೊಂದಿರುತ್ತಾರೆಯೋ ಸಂತೋಷಕ್ಕಾಗಲಿ ದುಃಖಕ್ಕಾಗಲಿ ಯಾರು ವಶರಾಗುವುದಿಲ್ಲವೋ ತಮ್ಮ ಮನಸ್ಸನ್ನೂ ಬುದ್ಧಿಯನ್ನೂ ಆತ್ಮಸಾಕ್ಷಿಯನ್ನೂ ನಿರಂತರ ಬ್ರಹ್ಮತತ್ವ ಚಿಂತನೆಯಿಂದ ಅತ್ಯುತ್ತಮ ಸ್ಥಿತಿಯಲ್ಲಿ ಇಟ್ಟುಕೊಂಡಿರುತ್ತಾರೆಯೋ ಅಂಥವರು ಮಾತ್ರ ಬ್ರಹ್ಮಚಾರಿಗಳು ಎನಿಸಿಕೊಳ್ಳುತ್ತಾರೆ.

**ಪ್ರಶ್ನೆ** : ಹಾಗಾದರೆ ಗೃಹಸ್ಥ ಎನ್ನುವುದರ ಅರ್ಥವೇನು?

**ಉತ್ತರ** : ಅನೇಕರು ಭಾವಿಸುವಂತೆ ಮದುವೆ ಮಾಡಿಕೊಂಡು ಹೆಂಡತಿ ಮಕ್ಕಳ ಜೊತೆ ಇರುವುದು ಗೃಹಸ್ಥಾಶ್ರಮವಲ್ಲ. ವರ್ಣಾಶ್ರಮ ಧರ್ಮವನ್ನು ವರ್ಜಿಸದೆ, ತನ್ನವರು ಪರರು ಎಂಬ ಭೇದವಿಲ್ಲದೆ, ಹಿರಿಯರು ಕಿರಿಯರು ಎಂಬ ತಾರತಮ್ಯವಿಲ್ಲದೆ ಸಹಾನುಭೂತಿ ತುಂಬಿದವನಾಗಿದ್ದು ಸದಾ ಇತರರಿಗೆ ಸಹಾಯ ಮಾಡಲು ಬಯಸುತ್ತಿರಬೇಕು. ತನ್ನನ್ನು ಅವಲಂಬಿಸಿರುವವರನ್ನು ಪ್ರೀತಿಯಿಂದ, ಅನುಕಂಪೆಯಿಂದ ನಡೆಸಿಕೊಳ್ಳ

ಬೇಕು. ಜಗತ್ತು ನೀಡುವ ಒಂದೊಂದು ಹೊಸ ಅನುಭವದಿಂದಲೂ ಹೆಚ್ಚು ಹೆಚ್ಚು ಬುದ್ಧಿವಂತನಾಗಿ ಬೆಳೆಯಬೇಕು. ಶಾಸ್ತ್ರಗಳನ್ನು ಅರಿತಿದ್ದು, ಧರ್ಮವನ್ನು ಆಚರಿಸುವುದರಲ್ಲಿ, ಅಧರ್ಮವನ್ನು ನಿವಾರಿಸುವುದರಲ್ಲಿ ನಿರತನಾಗಬೇಕು. ಜವಾಬ್ದಾರಿಯಿಂದ ತನ್ನ ಹೆಂಡತಿಯನ್ನೂ ಮಕ್ಕಳನ್ನೂ ಕಾಪಾಡಬೇಕು. ಅಷ್ಟ ಮದಗಳನ್ನು—ವಂಶ, ಐಶ್ವರ್ಯ, ನಡವಳಿಕೆ, ದೇಹ ಸೌಂದರ್ಯ, ತಾರುಣ್ಯ, ವಿದ್ವತ್ತು, ಜನ್ಮಸ್ಥಳ, ಕೊನೆಗೆ ವ್ರತಾನುಷ್ಠಾನದಲ್ಲಿ ಸಾಧನೆ ಇವುಗಳಿಂದ ಹುಟ್ಟುವ ಅಹಂಕಾರಗಳನ್ನು ಧೂಳೀಪಟ ಮಾಡಬೇಕು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳನ್ನು ಸರಿಯಾಗಿ ಅರಿತಿದ್ದು, ಲೌಕಿಕ ಸಿರಿ ಸಂಪತ್ತು ಬೇಕಾದಹಾಗಿದ್ದರೂ ಅದರ ಬಗೆಗೆ ಅಹಂಕಾರವಿಲ್ಲದೆ, ದಿನದ ಒಂದು ಭಾಗವನ್ನಾದರೂ ಇತರರ ಸೇವೆಯಲ್ಲಿ ಕಳೆಯಬೇಕು. ಬೇರೊಂದು ಕುಟುಂಬದ ಬಗೆಗೆ ಯಾವುದೇ ಸಂಚು ಹೂಡಬಾರದು. ಪತ್ನಿಯ ವಿಶ್ವಾಸವನ್ನುಗಳಿಸಿ, ಪರಸ್ಪರ ಚೆನ್ನಾಗಿ ಅರಿತು ಬಾಳಬೇಕು. ಗೃಹಸ್ಥನು ಜೀವಿಸಬೇಕಾದ ರೀತಿ ಇದು.

**ಪ್ರಶ್ನೆ** : ಇನ್ನು ವಾನಪ್ರಸ್ಥ ಎಂದರೆ?

**ಉತ್ತರ** : ಆ ಹಂತದಲ್ಲಿ ಮನುಷ್ಯನು ದ್ವಂದ್ವಗಳೆಲ್ಲ ಅಸತ್ಯ, ಆಧಾರರಹಿತ ಎಂದು ಮನಗಾಣುತ್ತಾನೆ. ಆಸೆಗಳನ್ನು ತ್ಯಜಿಸುತ್ತಾನೆ; ಪ್ರಪಂಚದ ಬಗೆಗೆ ಮೋಹ ಕಳಚುತ್ತದೆ. ಜನನಿಬಿಡವಾಗಿರುವ ಸ್ಥಳಗಳಲ್ಲಿ ವಾಸಮಾಡುವುದು ಅವನಿಗೆ ಇಷ್ಟವಾಗುವುದಿಲ್ಲ. ಮಂತ್ರ ಜಪದಿಂದ ಯಶಸ್ಸು ಗಳಿಸಲು ಬಯಸುತ್ತಾನೆ; ಆದ್ದರಿಂದ ನಿಯಮಬದ್ಧ ಜೀವನ ನಡೆಸುತ್ತಾನೆ. ಬಹುತೇಕ ಹಣ್ಣು ಹಂಪಲು, ಸೊಪ್ಪು ಮೊದಲಾದ ಬೇಯಿಸಿದ ಆಹಾರವನ್ನು ಮಿತವಾಗಿ ಸೇವಿಸುತ್ತಾನೆ. ಸಾಧು ಸಂತರ ಜೊತೆಯಲ್ಲೇ ಓಡಾಡುತ್ತಾನೆ, ಅವರ ಉಪದೇಶಗಳನ್ನು ಆಲಿಸುತ್ತಾನೆ. ಭಗವಂತನ ಸಾಕ್ಷಾತ್ಕಾರದ ಹಾದಿಯಲ್ಲಿ ಎಡವದೆ ಮುನ್ನಡೆಯುತ್ತಾನೆ. ಸಾಧನೆಗಾಗಿ ಏಕಾಂತವಾಸಕ್ಕೆ ತೆರಳುವ ಮುನ್ನ ಆತ ತನ್ನ ಪತ್ನಿಯ ಅನುಮತಿಯನ್ನು ಪಡೆದಿರಬೇಕು. ತನ್ನ ಮಕ್ಕಳ ಜೀವನಕ್ಕೆ ಸಾಕಾಗುವಷ್ಟು ವ್ಯವಸ್ಥೆಯನ್ನು ಮಾಡಿಟ್ಟಿರಬೇಕು. ಹೆಂಡತಿಯೂ ಜೊತೆಯಲ್ಲೇ ಬರಲು ಬಯಸಿದ ಪಕ್ಷದಲ್ಲಿ ಆಧ್ಯಾತ್ಮಿಕ ಪಥದಲ್ಲಿ ಅವಳನ್ನೂ ಆತ ಕರೆದೊಯ್ಯಬೇಕು. ಅಲ್ಲಿಂದ ಮುಂದಕ್ಕೆ ಅವರು ಪತಿ ಪತ್ನಿಯರಂತಲ್ಲದೆ ಸಹೋದರ ಸಹೋದರಿಯರಂತೆ ಜೀವಿಸಬೇಕು. ಈ ನೂತನ ಸಂಬಂಧವನ್ನು ಸರಿಯಾಗಿ ಪಾಲಿಸುವುದೇ ಆದರೆ ಮನೆಯ ಜೀವನವನ್ನೇ ವಾನಪ್ರಸ್ಥ ಜೀವನವನ್ನಾಗಿ ಪರಿವರ್ತಿಸಿ ಬಿಡಬಹುದು. ಅದಕ್ಕೆ ವ್ಯತಿರಿಕ್ತವಾಗಿ ಕಾಡಿಗೆ ಹೋದರೂ ಹಿಂದಿನ ಬದುಕೇ ಅಲ್ಲೂ ಮುಂದುವರಿಯುವ ಪಕ್ಷದಲ್ಲಿ ಅದು ಖಂಡಿತವಾ

ಗಿಯೂ ವಾನಪ್ರಸ್ಥವಾಗಲಾರದು. ವಾನಪ್ರಸ್ಥನು ಸಂಸಾರಿಗಳ ಮನೆಗಳಲ್ಲಿ ಉಳಿದುಕೊಳ್ಳಬಾರದು. ವರ್ಷದ ಪ್ರತಿ ಋತುವಿಗೂ ವಿಧಿಸಿರುವ ನೇಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಆಯಾ ಕಾಲಗಳಲ್ಲಿ ಬರುವ ಬಿಸಿಲನ್ನೂ ಮಳೆಯನ್ನೂ ಚಳಿಯನ್ನೂ ಎದೆಗುಂದದೆ ಸೈರಿಸಬೇಕು. ಮನೋಚಾಂಚಲ್ಯದಿಂದ ಮತ್ತೆ ದೈಹಿಕ ಸುಖಗಳ ಕಡೆಗೆ ಸೆಳೆತವುಂಟಾಗದ ಹಾಗೆ ಕಟ್ಟೆಚ್ಚರ ವಹಿಸಬೇಕು. ಕೇವಲ ಭಗವಂತನ ಧ್ಯಾನ. ಅವನ ದಿವ್ಯ ವೈಭವದ ಮನನ ಇವುಗಳಲ್ಲಿ ಸುಖವನ್ನು ಸವಿಯಬೇಕು.

**ಪ್ರಶ್ನೆ** : ಸನ್ಯಾಸ ಎಂದರೆ ಅರ್ಥವೇನು?

**ಉತ್ತರ** : ಸಮಸ್ತ ಇಂದ್ರಿಯಗಳ ಅಥವಾ ವಿಷಯ ಸುಖಗಳ ವಾಸನೆಯನ್ನು ಮೀರಿದ್ದು ಸನ್ಯಾಸ. ಭಗವಚ್ಚಿಂತನೆಯು ಸನ್ಯಾಸಿಗೆ ಜೀವದುಸಿರಾಗಿರುತ್ತದೆ. ತನ್ನ ಅಸ್ತಿತ್ವಕ್ಕೇ ಅದು ಅತ್ಯಗತ್ಯವಾದ ವಸ್ತುವಾಗಿರುತ್ತದೆ. ಈ ಧ್ಯಾನವೊಂದರಿಂದ ಮಾತ್ರ ಅವನಿಗೆ ಸಂತೋಷ. ಸಂಪತ್ತು, ಬಾಂಧವ್ಯ, ಪ್ರೀತಿ, ಮೋಹ ಎಲ್ಲವೂ ಕ್ಷಣಿಕ ಮತ್ತು ಕ್ಷಯಿಸಿ ನಾಶವಾಗುವಂಥವು ಎಂಬ ತಿಳಿವಳಿಕೆ ಅವನಿಗೆ ಬಂದಿದೆ. ಜಾತಿ ಸೂಚಕವಾದ ಬಾಹ್ಯ ಲಾಂಛನಗಳನ್ನೂ ಉಪನಯನ ಮೊದಲಾದ ಸಂಸ್ಕಾರಗಳನ್ನೂ ಕೂಡ ಅವನು ತ್ಯಜಿಸುತ್ತಾನೆ. ಕಾವಿ ಬಟ್ಟೆ ತೊಡುತ್ತಾನೆ. ಜನನಿಬಿಡ ಸ್ಥಳಗಳಲ್ಲಿ ವಾಸಮಾಡುವುದಿಲ್ಲ. ದೊರೆತ ಅಲ್ಪಾಹಾರದಿಂದ ಜೀವಿಸುತ್ತಾನೆ. ಆಹಾರ ನೀಡದಂತಹ ಮನೆಯನ್ನು ಅವನು ಬಯ್ಯುವುದಿಲ್ಲ. ಒಂದೇ ಸ್ಥಳದಲ್ಲಿ ಎರಡು ಸಾರಿ ಉಣ್ಣುವುದಿಲ್ಲ. ಒಂದೇ ಸ್ಥಳದಲ್ಲಿ ಒಟ್ಟಿಗೆ ಎರಡು ರಾತ್ರಿ ಉಳಿಯುವುದಿಲ್ಲ. ವಾಸ್ತವವಾಗಿ ಆಹಾರ ಸೇವಿಸಬೇಕು, ನಿದ್ರೆ ಮಾಡಬೇಕು ಎಂಬ ಚಪಲವನ್ನೂ ಅವನು ಗೆಲ್ಲುತ್ತಾನೆ. ಹವೆಯ ವೈಪರೀತ್ಯಗಳನ್ನು ಸಮಾಧಾನವಾಗಿ ಎದುರಿಸುತ್ತಾನೆ. ಧ್ಯಾನದಿಂದ ಆವಾಹಿಸಿಕೊಂಡ ಭಗವಂತನ ಸಹವಾಸದಲ್ಲಿ ಅವನು ಸದಾ ಕಾಲವೂ ಸಂತುಷ್ಟನಾಗಿರುತ್ತಾನೆ.

**ಪ್ರಶ್ನೆ** : ಈ ದಿನಗಳಲ್ಲಿ ಕಾವಿ ತೊಟ್ಟ ಅನೇಕರು ಸನ್ಯಾಸಿಗಳೆಂದುಕೊಂಡು ಓಡಾಡುತ್ತಾರೆ. ಅವರೆಲ್ಲರೂ ಈಗ ತಾವು ಹೇಳಿದ ಸಂಯಮದ ಜೀವನ ನಡೆಸುತ್ತಿರುತ್ತಾರೆಯೆ?

**ಉತ್ತರ** : ಆ ರೀತಿಯ ಸಿದ್ಧತೆ ಪಡೆದುಕೊಂಡಿರುವ ಜನರಿಗೆ ಕೊರತೆಯೇನಿಲ್ಲ. ಆದರೆ ಎಲ್ಲರೂ ಹಾಗಿದ್ದಾರೆ ಎಂದು ಹೇಳುವುದು ಕಷ್ಟ.

**ಪ್ರಶ್ನೆ** : ಅನೇಕರು ಸನ್ಯಾಸಿಗಳಾಗಿದ್ದರೂ ಆಶ್ರಮಗಳನ್ನು ಕಟ್ಟಿಕೊಂಡು ಪ್ರಾಪಂಚಿಕ ವ್ಯವಹಾರಗಳಲ್ಲಿ ನಿರತರಾಗಿ, ಆಸ್ತಿಪಾಸ್ತಿಗಳನ್ನು ರೂಢಿಸಿಕೊಂಡು ವೈಭವೋಪೇತ ಜೀವನ ನಡೆಸಲು ಹೋರಾಡುತ್ತಿದ್ದಾರೆ. ಅವರ ಬಗೆಗೆ ಏನು ಹೇಳಬೇಕು?

**ಉತ್ತರ** : ನಿಜವಾದ ಸನ್ಯಾಸಕ್ಕೆ, ಮನೋಚಾಂಚಲ್ಯ ನಿಗ್ರಹಕ್ಕೆ ನೀನು ಈಗ ಹೇಳಿದ ರೀತಿಯ ಆಶ್ರಮದಂಥ ಸಂಸ್ಥೆಗಳು ಭಾರೀ ತಡೆಗಳು. ಉದ್ದೇಶಯುಕ್ತ ಪರಿಶ್ರಮವೆಲ್ಲವನ್ನೂ ತ್ಯಜಿಸಬೇಕಾದವರಿಗೆ, ಆಶ್ರಮವನ್ನು ಕಟ್ಟಿಬೆಳೆಸುವ ಪರಿಶ್ರಮವೂ ಸಾಧನಾ ಪಥದಲ್ಲಿ ದೊಡ್ಡ ತಡೆಯೇ ಸರಿ. ಅಂತಹ ಸನ್ಯಾಸಿಗಳನ್ನು ಯಾವ ಹೆಸರಿನಿಂದ ಕರೆಯಬೇಕೆಂಬುದನ್ನು ನಿಮಗೆ ಹೇಳಬೇಕಾಗಿಲ್ಲ. ಸನ್ಯಾಸಿ ಎಂಬ ಹೆಸರಿಗೆ ಅವರು ಅರ್ಹರಲ್ಲ ಎಂದಷ್ಟು ಹೇಳಿದರೆ ಸಾಕು.

**ಪ್ರಶ್ನೆ** : ಸ್ವಾಮಿ, ನಮ್ಮಂತಹವರಿಗೆ ಮೋಕ್ಷ ಸಾಧನವನ್ನು ತಿಳಿದುಕೊಳ್ಳಲು ಸಹಾಯ ಮಾಡುವ ಆಶ್ರಮಗಳ ಬೆಳವಣಿಗೆ ಹೇಗೆ ತಾನೆ ಬಂಧನವಾದೀತು? ಹಣವಿಲ್ಲದೆ ಆಶ್ರಮ ನಡೆಯುವುದು ಹೇಗೆ? ಸ್ವಯಂಪ್ರೇರಣೆಯಿಂದ ಜನರು ನೀಡುವ ನೆರವನ್ನು ಸ್ವೀಕರಿಸುವುದು ತಪ್ಪಲ್ಲವೆಂದು ನನ್ನ ಭಾವನೆ.

**ಉತ್ತರ** : ಅಯ್ಯ! ಬೀಗವನ್ನು ಮುರಿದು ಅಮೂಲ್ಯ ವಸ್ತುಗಳನ್ನು ಕೊಂಡೊಯ್ದರೆ ಅಥವಾ ಗೋಡೆಗೆ ಕನ್ನಹಾಕಿ ಒಳನುಗ್ಗಿ ವಸ್ತುಗಳನ್ನು ಒಯ್ದರೆ ಅದು ಕಳ್ಳತನವೆನಿಸುತ್ತದೆ. ಹಾಗೆಯೇ ಹಾಡುಹಗಲಲ್ಲಿ ಅತ್ಯಂತ ಮೃದುವಾದ ಮಾತುಗಳಿಂದ ನಿಮ್ಮ ಬಳಿ ಇರುವ ಅಮೂಲ್ಯ ವಸ್ತುಗಳನ್ನು ತನಗೆ ಒಪ್ಪಿಸಿ ಬಿಡುವಂತೆ ಯಾರಾದರೂ ಒಲಿಸಿದರೆ ಅದೂ ಕಳ್ಳತನವೇ. ಉದ್ದೇಶ ಯಾವುದೇ ಇರಲಿ, ಸಂಪತ್ತಿನ ಮೇಲೆ ಕಣ್ಣುಹಾಯಿಸಿದನೆಂದರೆ ಸನ್ಯಾಸಿಯಾದವನ ಆಧ್ಯಾತ್ಮಿಕ ಪ್ರಗತಿಗೆ ಮಾರಕವಾಗುತ್ತದೆ. ಆ ಎಲ್ಲ ವಿಚಾರಗಳನ್ನು ತನ್ನ ವಿಶ್ವಾಸಾರ್ಹ ಭಕ್ತನೊಬ್ಬನಿಗೆ ವಹಿಸಿಕೊಟ್ಟು ತಾನು ಸ್ವಲ್ಪವೂ ಸಂಬಂಧಪಡದೆ ಕೇವಲ ಸಾಕ್ಷೀಭೂತವಾಗಿ ನಿಲ್ಲಬೇಕು. ತನ್ನ ಆಶ್ರಯವನ್ನು ಕೋರಿ ಬಂದ ಜನರಿಗೆ ಆಧ್ಯಾತ್ಮಿಕ ನೆರವು ನೀಡುವುದು ಅವನ ಕರ್ತವ್ಯವೇ ಹೊರತು ಆಶ್ರಮವನ್ನು ಬೆಳೆಸಿ ಸಂಪದ್ಭರಿತವಾಗುವಂತೆ ಮಾಡುವುದಲ್ಲ. ಆಶ್ರಮವನ್ನು ಬೆಳೆಸಬೇಕು ಎಂಬ ಆಸೆಯ ಬೆಂಕಿಯು ಅಹಂಕಾರದ ಜ್ವಾಲೆಗಳನ್ನು ಎಬ್ಬಿಸಿ ಸನ್ಯಾಸಿಯಲ್ಲಿದ್ದ ಮೆಚ್ಚಬೇಕಾದ ಗುಣಗಳೆಲ್ಲವನ್ನೂ ಭಸ್ಮಮಾಡಿಬಿಡುತ್ತದೆ. ಮುಖ್ಯವಾಗಿ ಅವನ ಆತ್ಮಾನಂದವನ್ನು ಹಾಳುಗೆಡಹುತ್ತದೆ. ಆ ಬೆಂಕಿಯು ಸನ್ಯಾಸಿಯನ್ನು ಮಾತ್ರವಲ್ಲದೆ, ಅವನ ಆಶ್ರಯವನ್ನು ಅವಲಂಬಿಸಿದವರನ್ನೂ ಸುಟ್ಟು

ಹಾಕುತ್ತದೆ. ನಾನು ಮತ್ತು ನನ್ನದು ಎಂಬ ಭಾವನೆಗಳು ಅಂತಹ ಆತ್ಮವಿನಾಶಕಾರಿ ಕಿಡಿಗಳು. ವ್ಯಕ್ತಿಯು ಈ ಕಿಡಿಗಳಿಲ್ಲದ ಗುರುಗಳನ್ನು ಹುಡುಕಿ ಆರಿಸಿಕೊಳ್ಳಬೇಕು. ಒಂದೊಮ್ಮೆ ಆಶ್ರಮವು ಪ್ರಮುಖ ಅಂಶವಾದರೆ, ಗುರು ಎನಿಸಿಕೊಂಡವನು ತಾನೇ ಮನುಷ್ಯರಿಗೆ ಅಂಟಿಕೊಳ್ಳಬೇಕಾಗುತ್ತದೆ! ವಸ್ತುಸ್ಥಿತಿ ನಿಜವಾಗಿ ಅದಕ್ಕೆ ವಿರುದ್ಧವಾಗಿರಬೇಕು. ಅವನು ಪ್ರಪಂಚವನ್ನು ಅವಲಂಬಿಸಿರಬಾರದು. ಎಲ್ಲ ಬಗೆಯ ಪಾರತಂತ್ರ್ಯದಿಂದ ಅವನು ಬಿಡುಗಡೆ ಹೊಂದಿರಬೇಕು. ಅದು ಸನ್ಯಾಸಿಯ ಗುರುತು.

# ೪ ಮೋಕ್ಷ ಮತ್ತು ಕರ್ಮ

**ಪ್ರಶ್ನೆ** : ಜನರು ಅವಧೂತರನ್ನು ಕುರಿತೂ ಮಾತನಾಡುತ್ತಾರೆ. ಅವರು ಯಾರು? ಅವರ ಅರ್ಹತೆಗಳಾವುವು?

**ಉತ್ತರ** : ವಾನಪ್ರಸ್ಥರು ಮತ್ತು ಸನ್ಯಾಸಿಗಳ ಹಾಗೆ ಅವರೂ ಎಲ್ಲ ಬಗೆಯ ಮೋಹಗಳಿಂದಲೂ ಕ್ರೋಧದಿಂದಲೂ ಬಿಡುಗಡೆ ಹೊಂದಿರಬೇಕು. ಇವರು ತಮ್ಮ ಪರಿಸರದ ವಿಷಯದಲ್ಲಿ, ಅದು ಕಾಡಾಗಲಿ, ನಾಡಾಗಲಿ, ಯಾವುದೇ ಆಸಕ್ತಿ ತಳೆಯುವುದಿಲ್ಲ, ಸ್ವಲ್ಪವೂ ವಿಚಲಿತರಾಗುವುದಿಲ್ಲ. ಇತರರೊಂದಿಗೆ ಯಾವುದೇ ಸಂಬಂಧ ಅವರಿಗಿರುವುದಿಲ್ಲ. ಭೂತ, ವರ್ತಮಾನ, ಭವಿಷ್ಯತ್ತುಗಳ ಬಗೆಗೆ ಅವರು ಸ್ವಲ್ಪವೂ ಗಮನ ಕೊಡುವುದಿಲ್ಲ. ಅವರು ಕಲ್ಲುಮುಳ್ಳುಗಳ ಮೇಲೆ, ನಿಶ್ಶಬ್ಧವಾಗಿ, ತಮ್ಮಲ್ಲೇ ಮುಗುಳ್ನಗುತ್ತಾ ಸದಾ ಸಂತೋಷಚಿತ್ತರಾಗಿ, ಸದಾ ಜಾಗ್ರತರಾಗಿ, ಯಾವುದೇ ಸುಖ ಬಯಸದೆ, ಆಶ್ರಯಬೇಕೆನ್ನದೆ, ಮಲಗಲು ಸ್ಥಳ ಹುಡುಕದೆ, ಆಹಾರವನ್ನು ಅರಸದೆ ನಡೆದಾಡುತ್ತಿರುತ್ತಾರೆ. ಆನಂದವೇ ಅವರ ಆಹಾರ. ಇಂದಿಗೂ ಹಿಮಾಲಯದ ನಿಶ್ಶಬ್ಧ ಗುಹೆಗಳಲ್ಲಿ ತಮ್ಮ ಆತ್ಮಾನಂದದಲ್ಲೇ ನಿಮಗ್ನರಾಗಿರುವ ಇಂಥ ಅವಧೂತರಿದ್ದಾರೆ. ಎಲ್ಲರೂ ಅವರನ್ನು ಕಾಣಲಾರರು. ಅವರಿರುವ ಸ್ಥಳಕ್ಕೆ ನೀವು ಹೋಗುವುದೇ ಸುದೈವ. ಆದರೆ ಅವಧೂತರಂತೆ ನಟಿಸುತ್ತಾ ತಮ್ಮನ್ನು ಹಾಗೆ ಕರೆದುಕೊಳ್ಳುವ ಅನೇಕರಿದ್ದಾರೆ. ನಿಜವಾದ ಅವಧೂತರು ಮನುಷ್ಯರನ್ನು ಅರಸಿ ಬರುವುದಿಲ್ಲ, ಅವರು ಬಹಿರಂಗವಾಗಿ ಕಾಣಿಸಿಕೊಳ್ಳುವುದೇ ಇಲ್ಲ. ಎಲ್ಲೋ ಅಪರೂಪಕ್ಕೆ ದಾರಿತಪ್ಪಿ ಅವರು ಜನರ ನಡುವೆ ಬಂದುಬಿಟ್ಟರೂ ಯಾರ ಗಮನವನ್ನೂ ತಮ್ಮ ಕಡೆಗೆ ಸೆಳೆಯದೆ ಸದ್ದಿಲ್ಲದೆ ಅಲ್ಲಿಂದ ಜಾರಿ ಹೋಗಿಬಿಡುತ್ತಾರೆ. ಯಾವನಾದರೂ ಅವಧೂತ ಜನರ ನಡುವೆ ಓಡಾಡುತ್ತಾ ಪ್ರಾಪಂಚಿಕ ವ್ಯವಹಾರಗಳಲ್ಲಿ ನಿರತನಾಗಿದ್ದರೆ, ಅವನು ಅವಧೂತನಲ್ಲ, ಯಮದೂತನೆಂದು ತಿಳಿ!

**ಪ್ರಶ್ನೆ** : ಎಲ್ಲಿಯವರೆಗೆ ವ್ಯಕ್ತಿಯು ದೇಹಧರ್ಮಕ್ಕೆ, ದೇಹಕ್ಕೆ ಸಂಬಂಧಪಟ್ಟ ಕರ್ತವ್ಯಗಳಿಗೆ ಬದ್ಧನಾಗಿರುತ್ತಾನೆ?

**ಉತ್ತರ** : ಜೀವಾತ್ಮನನ್ನು ಎಲ್ಲಿಯವರೆಗೆ ಗ್ರಹಿಸುವುದಿಲ್ಲವೋ ಅಲ್ಲಿಯವರೆಗೆ. ಕಂಡು ಅರಿತ ನಂತರ ಅವುಗಳ ಅಗತ್ಯವಿರುವುದಿಲ್ಲ.

**ಪ್ರಶ್ನೆ** : ಎಷ್ಟು ಕಾಲ ಈ ಜೀವಾತ್ಮದ ಅರಿವಿರುತ್ತದೆ?

**ಉತ್ತರ** : ನದಿಯು ಸಾಗರವನ್ನು ಸೇರುವವರೆಗೆ, ಜೀವಿ ಎಂಬ ನದಿಯು ತಾನು ಯಾವ ಮೂಲದಿಂದ ಬಂದಿತೋ ಆ ಪರಮಾತ್ಮನೆಂಬ ಸಾಗರವನ್ನು ಸೇರುವವರೆಗೆ.

**ಪ್ರಶ್ನೆ** : ಮೋಕ್ಷ ಎಂದರೇನು?

**ಉತ್ತರ** : ಕಟ್ಟಿಹಾಕುವ ಎಲ್ಲದರಿಂದಲೂ ಬಿಡುಗಡೆಯೇ ಮೋಕ್ಷ. ಅಂದರೆ ಅದು ಶಾಶ್ವತವೂ ಸ್ಥಿರವೂ ಎಂದೆಂದೂ ಪರಮ ಶುದ್ಧವೂ ಆದ ಆತ್ಮತತ್ವವನ್ನು ಗಳಿಸುವಿಕೆ; ಅಶಾಶ್ವತವೂ ಅಸ್ಥಿರವೂ ಮಿಥ್ಯವೂ ಅಶುದ್ಧವೂ ಆದ ದೇಹ ತತ್ವವನ್ನು ಕಳೆದುಕೊಳ್ಳುವಿಕೆ.

**ಪ್ರಶ್ನೆ** : ಆ ಸಿದ್ಧಿ ಎಲ್ಲರಿಗೂ ಅಲ್ಲ, ಹೌದೆ ಸ್ವಾಮಿ?

**ಉತ್ತರ** : ಹಾಗೇಕೆ ಹೇಳುತ್ತೀಯೆ? ತಕ್ಕ ಸಿದ್ಧತೆಯುಳ್ಳ ಪ್ರತಿಯೊಬ್ಬನೂ ಅದನ್ನು ಗಳಿಸಬಹುದು; ಪ್ರಯತ್ನಿಸುವವರು ಸಾಧಿಸುತ್ತಲೇ ಇದ್ದಾರೆ. ಕಾಯಿಲೆ ಯಾದ ಪ್ರತಿಯೊಬ್ಬನಿಗೂ ಔಷಧಿ ಪಡೆಯುವ ಹಕ್ಕಿದೆ; ಅವರಲ್ಲಿ ಕೆಲವರಿಗೆ ಮಾತ್ರ ಆ ಹಕ್ಕಿದೆ ಎಂದು ನೀನು ಹೇಳುವಂತಿಲ್ಲ. ಆದರೂ ಔಷಧಿಯು ತುಂಬ ದುಬಾರಿಯಾಗಿದ್ದರೆ, ಯಾರಿಗೆ ಅಷ್ಟು ತೆರುವುದು ಶಕ್ಯವೋ ಅವರು ಅದರ ಪ್ರಯೋಜನ ಪಡೆಯುತ್ತಾರೆ. ಭಗವಂತನ ಕೃಪೆಯನ್ನು ಪಡೆಯುವುದು ತುಂಬಾ ಕಷ್ಟ; ಅದಕ್ಕೆ ಬಹು ದುಬಾರಿ ಬೆಲೆ ತೆರಬೇಕು. ಬೆಲೆ ಕೊಡು, ಅಂದರೆ ಸಾಧನೆಯಿಂದ ಅದನ್ನು ಗಳಿಸು. ಭಗವತ್ಕೃಪೆಯು ನಿನ್ನನ್ನು ಈ ಭವರೋಗದಿಂದ ಬದುಕಿಸಿ ಕಾಪಾಡುತ್ತದೆ.

**ಪ್ರಶ್ನೆ** : ಈ ಸಾಧನೆಯು ಅತ್ಯಂತ ಅಗತ್ಯವಾಗಿರುವುದು ಯಾರಿಗೆ?

**ಉತ್ತರ** : ಹುಟ್ಟು ಸಾವುಗಳೆಂಬ ಪ್ರವಾಹದಿಂದ ಕೊಚ್ಚಿಕೊಂಡು ಹೋಗದೆ ಪಾರಾ ಗಲು ಹಂಬಲಿಸುವ ಎಲ್ಲರಿಗೂ.

**ಪ್ರಶ್ನೆ** : ಬಾಬಾ! ಮನುಷ್ಯ ಹುಟ್ಟಲು ಕಾರಣವೇನು?

**ಉತ್ತರ** : ಕರ್ಮದ ಆಘಾತ.

**ಪ್ರಶ್ನೆ** : ಎಷ್ಟು ಬಗೆಯ ಕರ್ಮಗಳಿವೆ?

**ಉತ್ತರ** : ಮೂರು! ಕೆಟ್ಟದ್ದು, ಒಳ್ಳೆಯದು ಮತ್ತು ಮಿಶ್ರವಾದದ್ದು. ಕೆಲವರು ನಾಲ್ಕನೆಯದೊಂದನ್ನು ಸೇರಿಸುತ್ತಾರೆ. ಅದು ಒಳ್ಳೆಯದೂ ಅಲ್ಲದ, ಕೆಟ್ಟದ್ದೂ ಅಲ್ಲದ ಜ್ಞಾನಿಯ ಕರ್ಮ.

**ಪ್ರಶ್ನೆ** : ಕೆಟ್ಟ ಕರ್ಮ ಯಾವುದು?

**ಉತ್ತರ** : ಅದನ್ನು ದುಷ್ಕರ್ಮ ಎಂದು ಕರೆಯುತ್ತಾರೆ. ದೈವಭೀತಿಯಿಲ್ಲದೆ ಅಥವಾ ಪಾಪಕ್ಕಿಳಿದು ಮಾಡಿದ ಎಲ್ಲ ಕ್ರಿಯೆಗಳೂ ದುಷ್ಕರ್ಮಗಳು. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳೆಂಬ ಆರು ಶತ್ರುಗಳ ಪ್ರಭಾವಕ್ಕೆ ಸಿಲುಕಿ ಮಾಡಿದ ಕೆಲಸಗಳು; ಮನುಷ್ಯನಲ್ಲಿರುವ ಮೃಗೀಯ ವೃತ್ತಿಯನ್ನು ತೆರೆದಿಡುವ; ಅವನಲ್ಲಿ ವಿವೇಕ ವಿಚಕ್ಷಣೆ ಮತ್ತು ವೈರಾಗ್ಯಗಳಿವೆ ಎಂಬುದರ ಸೂಚನೆಯನ್ನೂ ಕೊಡದ; ದಯೆ, ಧರ್ಮ, ಸತ್ಯ, ಶಾಂತಿ ಮತ್ತು ಪ್ರೇಮಗಳಿಲ್ಲದ ಎಲ್ಲ ಕಾರ್ಯಗಳೂ ದುಷ್ಕರ್ಮಗಳು.

**ಪ್ರಶ್ನೆ** : ಸತ್ಕರ್ಮಗಳೆಂದರೆ?

**ಉತ್ತರ** : ದೇವರ ಬಗೆಗೆ ಮತ್ತು ಪಾಪದ ಬಗೆಗೆ ಭೀತಿಹೊಂದಿದ್ದು ಸತ್ಯ, ಧರ್ಮ, ಶಾಂತಿ ಮತ್ತು ಪ್ರೇಮಗಳಿಂದ ಮಾಡಿದ ಕೆಲಸಗಳೆಲ್ಲ ಸತ್ಕರ್ಮಗಳು.

**ಪ್ರಶ್ನೆ** : ಮಿಶ್ರಕರ್ಮಗಳೆಂದರೆ ಯಾವುವು?

**ಉತ್ತರ** : ಅವು ಬಹಳ ಸ್ವಾರಸ್ಯವಾಗಿವೆ. ಕಾರ್ಯಗಳು ಒಳ್ಳೆಯವಿದ್ದರೂ ದೈವ ಮತ್ತು ಪಾಪಭೀತಿಯಿದ್ದೂ ಅದಕ್ಕೆ ವಿರುದ್ಧವಾದ ಪ್ರವೃತ್ತಿಗಳನ್ನು ಪ್ರಕಟಿಸು ತ್ತವೆ. ಉದಾಹರಣೆಗೆ ಜನರು ಛತ್ರ ಅಥವಾ ತಂಗುದಾಣಗಳನ್ನೂ ಅರವಟ್ಟಿಗೆಗಳನ್ನೂ ತೆರೆಯುತ್ತಾರೆ, ಆದರೆ ಅಲ್ಲಿಯ ನೌಕರರಿಗೆ ಸರಿ ಯಾಗಿ ವೇತನ ಕೊಡುವುದಿಲ್ಲ. ಅವರ ಉದ್ದೇಶ ಕೀರ್ತಿಯನ್ನು ಗಳಿಸು ವುದು. ಬಡವರಿಗೆ ಅವರು ಕೆಲಸಕ್ಕೆ ಬಾರದ ಬಟ್ಟೆಗಳನ್ನೂ ಸವಕಲು ನಾಣ್ಯಗಳನ್ನೂ ದಾನ ಮಾಡುತ್ತಾರೆ. ಅವರು ಏನನ್ನೇ ಮಾಡಲಿ, ಅದು ಪ್ರಚಾರ ಪಡೆಯಬೇಕೆಂಬ ಉದ್ದೇಶದಿಂದ ಮಾತ್ರ.

**ಪ್ರಶ್ನೆ** : ಸ್ವಾಮಿ, ತಾವು ಜ್ಞಾನ ಕರ್ಮವನ್ನೂ ಉಲ್ಲೇಖಿಸಿದಿರಿ.

**ಉತ್ತರ** : ಹೌದು. ದ್ವಂದ್ವಗಳ ಹಾಗೂ ಜಗತ್ತಿನ ಮಿಥ್ಯೆಯ ಬಂಧನದಿಂದ ವಿಮೋ ಚನೆ ಹೊಂದಲು ಪವಿತ್ರ ಶಾಸ್ತ್ರಗ್ರಂಥಗಳಿಂದಲೂ ಹಿರಿಯರಿಂದಲೂ ಗುರುಗಳಿಂದಲೂ ತಕ್ಕ ದಾರಿಯನ್ನು ಕಲಿಯುವ ಕಾರ್ಯವನ್ನು ಜ್ಞಾನ ಕರ್ಮ ಎನ್ನಲಾಗುತ್ತದೆ. ಸತ್ಯ, ಧರ್ಮ, ಶಾಂತಿ ಮತ್ತು ಪ್ರೇಮ—ಈ ಮೌಲ್ಯಗಳಲ್ಲಿ ಶ್ರದ್ಧೆ ಬೆಳೆಸಿಕೊಳ್ಳಲು ಜೀವಾತ್ಮವು ಪರಮಾತ್ಮನೊಂದಿಗೆ ವಿಲೀನಗೊಳ್ಳಲು ಸಹಕಾರಿಯಾಗುವ ಎಲ್ಲ ಕ್ರಿಯೆಗಳೂ ಜ್ಞಾನಕರ್ಮ ಎನಿಸುತ್ತವೆ.

# ೫ ವಿದ್ಯೆ ಮತ್ತು ಭಕ್ತಿ

**ಪ್ರಶ್ನೆ** : ಸ್ವಾಮಿ, ಜನರು ಅನೇಕ ವೇಳೆ ಅಮನಸ್ಕ ಎಂಬ ಪದವನ್ನು ಬಳಸುವುದನ್ನು ಕೇಳಿದ್ದೇನೆ. ಹಾಗೆಂದರೇನು?

**ಉತ್ತರ** : ಸಮಸ್ತ ಸೃಷ್ಟಿಯನ್ನೂ ಶಾಶ್ವತ ಸಾಕ್ಷಿಯಾಗಿ ನೋಡಿದಾಗ ಅದು ಸೂರ್ಯನ ಮುಂದಿನ ಕಾವಳದಂತೆ ಮಾಯವಾಗಿಬಿಡುತ್ತದೆ. ಆ ಹಂತವನ್ನು ಅಮನಸ್ಕ ಎಂದು ಕರೆಯುತ್ತಾರೆ.

**ಪ್ರಶ್ನೆ** : ಆಗ ಜ್ಞಾನವು ಏನಾಗುತ್ತದೆ?

**ಉತ್ತರ** : ಅದೂ ಮಾಯವಾಗುತ್ತದೆ!

**ಪ್ರಶ್ನೆ** : ಈ ತಾವು ಹೇಳಿದ ಸಾಕ್ಷಿಯು ಸ್ವಪ್ನದ ಹಂತದಲ್ಲಿ ಎಲ್ಲಿರುತ್ತದೆ?

**ಉತ್ತರ** : ಅದು ಜೀವಿಯಲ್ಲೇ ಇದೆ. ಅದು ಸಾಕ್ಷಿಯಾಗಿ ನೋಡುತ್ತಿರುವುದು ಮಾತ್ರವಲ್ಲ, ತಾನು ನೋಡಿದ ಪ್ರತಿಯೊಂದನ್ನೂ ನೇಯುತ್ತದೆ, ಸೃಷ್ಟಿಸುತ್ತದೆ.

**ಪ್ರಶ್ನೆ** : ಗಾಢ ನಿದ್ರೆಯ ಸಮಯದಲ್ಲಿ?

**ಉತ್ತರ** : ಅದು ಪೂರ್ಣ (ಅವಿಕಾರ) ಸತ್ಯದಲ್ಲಿರುತ್ತದೆ.

**ಪ್ರಶ್ನೆ** : ನಾಲ್ಕನೆಯದಾದ, ಗಾಢನಿದ್ರೆಗೂ ಆಚೆಯ ತುರೀಯಾವಸ್ಥೆಯಲ್ಲಿ?

**ಉತ್ತರ** : ಅದು ಈಶ್ವರ ಸ್ಥಾನದಲ್ಲಿ, ವಿಕಾರರಹಿತವಾಗಿ, ಪರಿವರ್ತನರಹಿತ ವಸ್ತುವಿನಲ್ಲಿ ಲೀನವಾಗಿರುತ್ತದೆ.

**ಪ್ರಶ್ನೆ** : ಪರಮಾರ್ಥ ಎನ್ನುವ ಪದದ ಅರ್ಥವೇನು?

**ಉತ್ತರ** : ದೇಹ ಮತ್ತು ಇಂದ್ರಿಯಗಳಿಂದ ಸೀಮಿತಗೊಂಡ ಈ ಪ್ರಪಂಚದ ಮೇಲಿನ ಮತ್ತು ಆಚಿನ ಎಂದರ್ಥ.

**ಪ್ರಶ್ನೆ** : ಪರಮಪದ ಎಂಬುದನ್ನೂ ಹೇಳುತ್ತಾರೆ. ಅದು ಹೇಗಿರುತ್ತದೆ?

**ಉತ್ತರ** : ಅದರಲ್ಲಿ ನಾಮರೂಪ ಅಥವಾ ಹೆಸರಿಗೆ ಸಂಬಂಧಿಸಿದ ರೂಪವಾಗಲಿ, ಕ್ರಿಯಾರೂಪ ಅಥವಾ ಕೃತಿಗೆ ಸಂಬಂಧಿಸಿದ ರೂಪವಾಗಲಿ ಇರುವುದಿಲ್ಲ.

**ಪ್ರಶ್ನೆ** : ಸ್ವಾಮಿ, ಭಗವಂತನು ವಿಶ್ವವನ್ನು ಮೀರಿದ್ದಾನೆಯೇ ವಿಶ್ವದಲ್ಲಿ ಅಂತರ್ಗತನಾಗಿದ್ದಾನೆಯೇ?

**ಉತ್ತರ** : ಅವನು ವಿಶ್ವವನ್ನು ಪೂರ್ತಿಯಾಗಿ ತುಂಬಿಕೊಂಡು ಅದನ್ನು ಮೀರಿಯೂ ಇದ್ದಾನೆ. ಅವನಿಂದ ಹೊರತಾದ ಬೇರೆ ಸ್ಥಳವೇ ಇಲ್ಲ. ಎಲ್ಲ ಸ್ಥಳಗಳೂ ಅವನೊಳಗೆ ಇವೆ. ಎಲ್ಲ ನಾಮಗಳೂ ಅವನವೇ ಆಗಿವೆ, ಯಾವ ನಾಮವೂ ಅವನಿಗೆ ಅನ್ಯವಲ್ಲ.

**ಪ್ರಶ್ನೆ** : ವಿಶ್ವವನ್ನು ವ್ಯಾಪಿಸಿರುವ ಭಗವತ್ತತ್ವವನ್ನು ಏನೆಂದು ಕರೆಯಲಾಗುತ್ತದೆ?

**ಉತ್ತರ** : ಹಲವು ಹೆಸರುಗಳಿಂದ ಅವನನ್ನು ಕರೆಯಬಹುದು—ಪರಮಪದ, ಪರಮಾರ್ಥ, ಅಶರೀರ, ಪರಿಪೂರ್ಣ, ಅವಾಙ್ಮನಸಗೋಚರ (ಮಾತಿನಿಂದಾಗಲಿ ಆಲೋಚನೆಯಿಂದಾಗಲಿ ಗ್ರಹಿಕೆಗೆ ಸಿಕ್ಕದವನು). ಅವನಿಗೆ ಅನೇಕ ನಾಮಗಳಿವೆ.

**ಪ್ರಶ್ನೆ** : ಈ ಸತ್, ಈ ವಸ್ತು, ಪ್ರಾಚೀನವೋ ಅರ್ವಾಚೀನವೋ ಸನಾತನವೋ ನೂತನವೋ?

**ಉತ್ತರ** : ಅದು ಸನಾತನ, ನೂತನವಲ್ಲ.

**ಪ್ರಶ್ನೆ** : ಅಂತಿಮ ಪುರುಷಾರ್ಥ ಯಾವುದು?

**ಉತ್ತರ** : ಮೋಕ್ಷವೇ ಅಂತಿಮ ಪುರುಷಾರ್ಥ.

**ಪ್ರಶ್ನೆ** : ವಿದ್ಯೆಯ ಬಗೆಗೆ ಮಾತನಾಡುವಾಗ ಜನರು ನಾಲ್ಕು ವಿದ್ಯೆಗಳನ್ನು ಹೇಳುವುದನ್ನು ಕೇಳಿದ್ದೇನೆ. ಅವು ಯಾವುವು?

**ಉತ್ತರ** : ಅವು ಆನ್ವೀಕ್ಷಕಿ, ತ್ರಯೀ, ವಾರ್ತಾ ಮತ್ತು ದಂಡನೀತಿ.

**ಪ್ರಶ್ನೆ** : ಇವೆಲ್ಲ ನನಗೆ ಹೊಸ ಹೆಸರುಗಳು. ಅನ್ವೀಕ್ಷಕಿ ಎಂದರೆ ಏನು?

**ಉತ್ತರ** : ಆತ್ಮ ಅನಾತ್ಮಗಳ ವ್ಯತ್ಯಾಸವನ್ನು ಗ್ರಹಿಸುವ ಸಾಮರ್ಥ್ಯ ನೀಡುವ ವಿದ್ಯೆ.

**ಪ್ರಶ್ನೆ** : ತ್ರಯೀ ಎಂದರೆ?

**ಉತ್ತರ** : ಸೂಕ್ತವಾದ ಆಚರಣೆಯಿಂದಲೂ ಕರ್ಮದಿಂದಲೂ ಸ್ವರ್ಗವನ್ನು ಪಡೆಯಲು ಸಾಧಕವಾದ ವಿದ್ಯೆ.

**ಪ್ರಶ್ನೆ** : ವಾರ್ತಾ ಎನ್ನುವುದು ಏನನ್ನು ಕಲಿಸುತ್ತದೆ?

**ಉತ್ತರ** : ಕೃಷಿಯನ್ನೂ ಇತರ ಉತ್ಪಾದಕ ಕೆಲಸಗಳನ್ನೂ ಕಲಿಸುತ್ತದೆ.

**ಪ್ರಶ್ನೆ** : ಇನ್ನು ದಂಡನೀತಿ ಎಂದರೇನು?

**ಉತ್ತರ** : ಪ್ರಭುತ್ವದವರು ಮತ್ತು ರಕ್ಷಣಾದಳದವರು ಈ ವಿದ್ಯೆಯ ಪ್ರಕಾರ ಸಮಾಜ ವನ್ನು ಆಳುತ್ತಾರೆ ಮತ್ತು ರಕ್ಷಿಸುತ್ತಾರೆ. ಸಂಪತ್ತುಗಳನ್ನೂ ಬೆಳೆಯನ್ನೂ ಗಳಿಸಲು ಮತ್ತು ಅನುಭವಿಸಲು ಇದು ಅತ್ಯಗತ್ಯ.

**ಪ್ರಶ್ನೆ** : ಇವುಗಳಲ್ಲಿ ಮಾನವನನ್ನು ಹುಟ್ಟುಸಾವುಗಳೆಂಬ ಚಕ್ರಕ್ಕೆ ಒಡ್ಡುವುದು ಯಾವುದು?

**ಉತ್ತರ** : ಮೊದಲನೆಯದಾದ ಆನ್ವೀಕ್ಷಕಿ ಹೊರತು ಉಳಿದುದೆಲ್ಲವೂ.

**ಪ್ರಶ್ನೆ** : ಆಧ್ಯಾತ್ಮಿಕ ಯಶಸ್ಸಿಗೆ ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸುವುದು ಅತ್ಯಗತ್ಯ. ಆದರೆ ಮನಸ್ಸಿನಲ್ಲಿ ತುಂಬಿರುವ ಎಲ್ಲ ಕೆಡಕುಗಳನ್ನೂ ತೊಳೆಯಬೇಕಾದರೆ ಯಾವ ಸದ್ಗುಣಗಳನ್ನು ನಾವು ಬೆಳೆಸಿಕೊಳ್ಳಬೇಕು?

**ಉತ್ತರ** : ಮುಖ್ಯವಾಗಿ ನಾಲ್ಕು ಸದ್ಗುಣಗಳಿವೆ: ಮೈತ್ರಿ, ಕರುಣೆ, ಮುದಿತ ಹಾಗೂ ಉಪೇಕ್ಷಾ.

**ಪ್ರಶ್ನೆ** : ಇವುಗಳನ್ನೂ ವಿವರಿಸಬೇಕು ಸ್ವಾಮಿ, ತಮಗೇ ಮತ್ತೆ ತೊಂದರೆ ಕೊಡಬೇಕಾಗಿದೆ.

**ಉತ್ತರ** : ಸಜ್ಜನರು ಮತ್ತು ವಿನಯವಂತರ ಗೆಳೆತನ ಮತ್ತು ಸಹವಾಸ; ಭಗವಂತನ ನಾಮ ರೂಪಗಳ ಬಗೆಗೆ ಪ್ರೀತಿ, ಇವು ಮೈತ್ರಿಯಲ್ಲಿ ಸೇರುತ್ತವೆ. ದುಃಖಿಗಳ ಬಗೆಗೆ ತಳೆಯಬೇಕಾದ ದಯಾ ಭಾವನೆಯು ಕರುಣೆ ಎನಿಸಿಕೊಳ್ಳುತ್ತದೆ.

**ಪ್ರಶ್ನೆ** : ಮುದಿತ ಎನ್ನುವುದೇನು?

**ಉತ್ತರ** : ದಾನಿಗಳನ್ನು, ಇತರರಿಗೆ ಸೇವೆಗೈಯುವವರನ್ನು, ಕಷ್ಟದಲ್ಲಿರುವವರಿಗೆ ನೆರವಾಗುವವರನ್ನು ಸಂಧಿಸಿದಾಗ ಆಗುವ ಸಂತೋಷವೇ ಮುದಿತ.

**ಪ್ರಶ್ನೆ** : ಉಪೇಕ್ಷಾ ಎಂದರೆ?

**ಉತ್ತರ** : ತೊಡಗಿಕೊಳ್ಳದಿರುವ ನಿಲುವು; ದುರ್ಜನರನ್ನು ಕುರಿತು ಪ್ರೀತಿಯೂ ಇಲ್ಲದೆ ದ್ವೇಷವೂ ಇಲ್ಲದೆ ಸಂಬಂಧವಿಲ್ಲದಂತಿರುವುದು.

**ಪ್ರಶ್ನೆ** : ನಾಲ್ಕು ಗುಣಗಳ ಹಾಗೆ ನಾಲ್ಕು ಬಗೆಯ ಭಕ್ತಿಗಳನ್ನೂ ಹೇಳುತ್ತಾರೆ. ಅವು ಯಾವುವು ಸ್ವಾಮಿ?

**ಉತ್ತರ** : ಅಯ್ಯಾ, ಅವು ಅಸಂಖ್ಯವಾಗಿವೆ. ನಾಲ್ಕು ವರ್ಗಗಳಲ್ಲಿ ಅವುಗಳನ್ನು ಗುಂಪು ಮಾಡಬಹುದು. ಆರ್ತ, ಅರ್ಥಾರ್ಥಿ, ಜಿಜ್ಞಾಸು ಮತ್ತು ಜ್ಞಾನಿ.

**ಪ್ರಶ್ನೆ** : ಆರ್ತ ಎಂದರೇನು?

**ಉತ್ತರ** : ಯಾವುದೋ ಒಂದು ನೋವಿನಿಂದ, ಸಂಕಟದಿಂದ ಗಾಸಿಗೊಂಡಿರುವ ವನು ಆರ್ತ.

**ಪ್ರಶ್ನೆ** : ಅರ್ಥಾರ್ಥಿ ಎಂದರೇನು?

**ಉತ್ತರ** : ಅರ್ಥ ಅಥವಾ ಐಶ್ವರ್ಯವನ್ನು ಅಥವಾ ಆಧ್ಯಾತ್ಮಿಕ ಶಕ್ತಿಯನ್ನು ಬಯಸುವವರು ಎಂದರ್ಥ. ಅವರು ಅದಕ್ಕಾಗೇ ದೇವರನ್ನು ಪೂಜಿಸುತ್ತಾರೆ ಮತ್ತು ವರವನ್ನು ಕೋರುತ್ತಾರೆ.

**ಪ್ರಶ್ನೆ** : ಜಿಜ್ಞಾಸು ಎಂದಿರಿ. ಅವರು ಯಾರು?

**ಉತ್ತರ** : ಸ್ಥಿರಚಿತ್ತದಿಂದ ಹಾಗೂ ಪರಿಶ್ರಮದಿಂದ ಮೋಕ್ಷವನ್ನೇ ಅರಸುವವರು. ಪರಿಪೂರ್ಣದ ಅನ್ವೇಷಣೆಯಲ್ಲಿ ನಿರತರಾದವರು.

**ಪ್ರಶ್ನೆ** : ಜ್ಞಾನಿಯೊ?

**ಉತ್ತರ** : ದ್ವಂದ್ವ ಪ್ರಜ್ಞೆಯಿಂದ ಬಿಡಿಸಿಕೊಂಡವನು; ತಾನೂ ವಿಶ್ವದ ಆಧಾರ ಸತ್ಯವೂ ಒಂದೇ ಎಂದು ಅರಿತಿರುವವನು.

**ಪ್ರಶ್ನೆ** : ಈ ಭಕ್ತಿ ಪ್ರಕಾರಗಳ ಮೂಲಕ ಪ್ರಸಿದ್ಧರಾಗಿರುವ ಕೆಲವರ ಹೆಸರನ್ನು ಹೇಳಿ ಸ್ವಾಮಿ, ಅದರಿಂದ ಈ ವಿಷಯ ನಮಗೆ ಇನ್ನೂ ಸ್ಪಷ್ಟವಾಗುತ್ತದೆ.

**ಉತ್ತರ** : ಓಹ್! ಅಂಥವರು ಅನೇಕರಿದ್ದಾರೆ. ಆರ್ತ ಭಕ್ತರಲ್ಲಿ ದ್ರೌಪದಿ, ಪ್ರಹ್ಲಾದ, ಸಕ್ಕೂಬಾಯಿ ಇವರನ್ನು ಹೆಸರಿಸಬಹುದು; ಅರ್ಥಾರ್ಥಿಗಳಲ್ಲಿ ಧ್ರುವ, ಅರ್ಜುನ ಮುಂತಾದವರು; ಜಿಜ್ಞಾಸುಗಳಲ್ಲಿ ಉದ್ಧವ, ರಾಧೆ ಮೊದಲಾದವರು; ಜ್ಞಾನಿಗಳಲ್ಲಿ ಶುಕ, ಸನಕ ಮತ್ತಿತರರನ್ನು ಹೇಳಬಹುದು.

# ೬ ಮೋಕ್ಷಕ್ಕೆ ಅಡ್ಡಿಗಳು

**ಪ್ರಶ್ನೆ** : ಮೋಕ್ಷದ ಗುರಿಯತ್ತ ಆಧ್ಯಾತ್ಮಿಕ ಪಥದಲ್ಲಿ ಸಾಗುವವರಿಗೂ ಭಾರೀ ಅಡ್ಡಿ ಆತಂಕಗಳುಂಟಾಗುತ್ತವಲ್ಲವೆ ಸ್ವಾಮಿ?

**ಉತ್ತರ** : ಹೌದು, ಭೂತ ವರ್ತಮಾನ ಭವಿಷ್ಯತ್ತು ಎಂಬ ಎಡರುಗಳು.

**ಪ್ರಶ್ನೆ** : ಭೂತಕಾಲದಿಂದೊದಗುವ ತೊಂದರೆಗಳು ಯಾವುವು?

**ಉತ್ತರ** : ಕಳೆದುಹೋದ ಕಾಲವನ್ನು ಮತ್ತೆ ಸ್ಮರಿಸಿಕೊಂಡು ಅದರಿಂದ ದುಷ್ಪರಿಣಾಮಕ್ಕೊಳಗಾಗುವುದು.

**ಪ್ರಶ್ನೆ** : ವರ್ತಮಾನ ಸ್ಥಿತಿಯಿಂದ ಯಾವ ಅಡ್ಡಿ?

**ಉತ್ತರ** : ಅದು ನಾಲ್ಕು ಬಗೆಯಾಗಿ ವರ್ತಿಸುತ್ತದೆ! ವಿಷಯ ಆಸಕ್ತಿ (ಬೋಧನೆಯಲ್ಲಿ ಸಾರ ಏನಿದೆಯೋ ಅದನ್ನು ಗ್ರಹಿಸದೆ ಬಿಟ್ಟು, ಕೇವಲ ಗ್ರಾಂಥಿಕ ವೈಚಿತ್ರ್ಯಗಳಿಗೆ ಹೆಚ್ಚು ಗಮನವೀಯುವುದು); ಪ್ರಜ್ಞಾಮಾಂದ್ಯ (ಹಿರಿಯರ ಮಾತು ಜ್ಞಾನಿಗಳ ಮಾತುಗಳನ್ನು ಗ್ರಹಿಸದಂತೆ ತಡೆಯುವ ಬುದ್ಧಿಯ ಮಂಕು); ಕುತರ್ಕ ಮತ್ತು ವಿಪರ್ಯಯ ದುರಾಗ್ರಹ (ಉತ್ಪ್ರೇಕ್ಷಿತ ಗರ್ವದಿಂದ, ತನ್ನ ಮಾತೇ ಸತ್ಯ ಎಂದು ಸಮರ್ಥಿಸುವುದು).

**ಪ್ರಶ್ನೆ** : ಭವಿಷ್ಯತ್ತಿನಿಂದೊದಗುವ ತಡೆಯ ಸ್ವರೂಪವೇನು?

**ಉತ್ತರ** : ಕಷ್ಟಗಳನ್ನು ಮುಂದಾಗಿ ಕಲ್ಪಿಸಿಕೊಂಡು ಅವು ಬರುವ ಮೊದಲೇ ಕಳವಳಪಡುವುದರಿಂದ ಸಾಧನೆಗೆ ಅಡ್ಡಿಯಾಗುತ್ತದೆ.

**ಪ್ರಶ್ನೆ** : ನಾಲ್ಕು ಬಗೆಯ ಜೀವಿಗಳಿದ್ದಾರೆಂದು ಕೇಳಿದ್ದೇನೆ. ಅವರು ಯಾರೆಂದು ನನಗಿನ್ನೂ ಸ್ಪಷ್ಟವಾಗಿಲ್ಲ.

**ಉತ್ತರ** : ಅಂಡಜ, ಸ್ವೇದಜ, ಉದ್ಭಿಜ್ಜ, ಮತ್ತು ಜರಾಯುಜ.

**ಪ್ರಶ್ನೆ** : ಈ ಪದಗಳ ಅರ್ಥವೇನು?

**ಉತ್ತರ** : ಅಂಡಜವೆಂದರೆ ಮೊಟ್ಟೆಯಿಂದ ಹುಟ್ಟುವುದು; ಸ್ವೇದಜ ಬೆವರಿನಿಂದ ಜನಿಸುವುದು; ಉದ್ಭಿಜ್ಜ ಮಣ್ಣಿನಿಂದ ಹುಟ್ಟುವುದು ಹಾಗೂ ಜರಾಯುಜ ಸಸ್ತನಿಗಳು. ಮೊದಲನೆಯ ಗುಂಪಿಗೆ ಹಕ್ಕಿಗಳು ಒಳ್ಳೆಯ ಉದಾಹರಣೆ; ಹೇನು ಮೊದಲಾದ ಕೀಟಗಳು ಎರಡನೆಯ ಗುಂಪಿನವು; ಇರುವೆಗಳು ಗಿಡಮರಗಳು ಮೂರನೆ ವರ್ಗದವು; ಮನುಷ್ಯರು, ಪಶು ಪ್ರಾಣಿಗಳು ನಾಲ್ಕನೆಯ ಗುಂಪಿನವು.

**ಪ್ರಶ್ನೆ** : ಸ್ವಾಮಿ! ಆಸ್ತಿಕರಾಗಿದ್ದು ಭಗವಂತನನ್ನು ಪೂಜಿಸುವವರಲ್ಲೂ ವಿಶೇಷ ವರ್ಗಗಳಿವೆಯೆ?

**ಉತ್ತರ** : ಹೌದು. ಅವರಲ್ಲೂ ನಾಲ್ಕು ವರ್ಗಗಳಿವೆ.

**ಪ್ರಶ್ನೆ** : ಅವರ ಹೆಸರು?

**ಉತ್ತರ** : ದ್ವಿಜರು, ಮುನಿಗಳು, ಅಲ್ಪಬುದ್ಧಿಗಳು ಮತ್ತು ವಿದಿತಾತ್ಮರು. ಎರಡು ಸಾರಿ ಹುಟ್ಟಿದವರು, ಸಾಧುಗಳು, ಬುದ್ಧಿಮಂಕಾದವರು ಮತ್ತು ಆತ್ಮವನ್ನು ತಿಳಿದವರು ಎಂದು ಕ್ರಮವಾಗಿ ಇವುಗಳ ಅರ್ಥ.

**ಪ್ರಶ್ನೆ** : ಅವರನ್ನು ಹಾಗೇಕೆ ಕರೆಯುತ್ತಾರೆ? ಪ್ರತಿ ವರ್ಗದ ವಿಶಿಷ್ಟ ಲಕ್ಷಣವೇನು?

**ಉತ್ತರ** : ದ್ವಿಜರು ಭಗವಂತನನ್ನು ತಾವು ಪೂಜಿಸುವ ಅಗ್ನಿಯಲ್ಲಿ ಗುರುತಿಸುತ್ತಾರೆ; ಆ ನಂಬಿಕೆಯಿಂದಲೇ ಆರಾಧಿಸುತ್ತಾರೆ.

**ಪ್ರಶ್ನೆ** : ಮುನಿಗಳು?

**ಉತ್ತರ** : ಅವರು ದೇವರನ್ನು ತಮ್ಮ ಹೃದಯದಲ್ಲಿ ಕಾಣುತ್ತಾರೆ.

**ಪ್ರಶ್ನೆ** : ಮಂದಬುದ್ಧಿಯವರ ವಿಷಯ ಹೇಗೆ?

**ಉತ್ತರ** : ಅವರಿಗೆ ವಿಗ್ರಹಗಳು, ಚಿತ್ರಗಳು ಮೊದಲಾದ ಭಗವಂತನ ದಿವ್ಯ ವೈಭವವನ್ನೂ ಮಹಿಮೆಯನ್ನೂ ಪ್ರತಿನಿಧಿಸುವ ಸಾಧನ ಬೇಕು. ಅವುಗಳನ್ನು ಅವರು ಆರಾಧಿಸುತ್ತಾರೆ.

**ಪ್ರಶ್ನೆ** : ಆತ್ಮವನ್ನರಿತವರು?

**ಉತ್ತರ** : ಭಗವಂತನು ವಿಶ್ವದಲ್ಲಿ ಅಂತಸ್ಥನಾಗಿದ್ದಾನೆ ಎಂದು ಅವರು ಗುರುತಿಸುತ್ತಾರೆ, ಎತ್ತ ತಿರುಗಿದರೂ ಅಲ್ಲಿ ಭಗವಂತನನ್ನೇ ಅವರು ಕಾಣುತ್ತಾರೆ.

**ಪ್ರಶ್ನೆ** : ಇವರಲ್ಲಿ ಅತ್ಯುತ್ತಮರು ಯಾರೆಂದು ಕೇಳಬಹುದೆ?

**ಉತ್ತರ** : ಅವರವರ ಹಂತದಲ್ಲಿ ಪ್ರತಿಯೊಬ್ಬನೂ ಉತ್ತಮನೇ. ಆದರೆ ಸಹಜವಾಗೇ ಎಲ್ಲ ಕಾಲಗಳಲ್ಲೂ ಎಲ್ಲೆಲ್ಲೂ ಭಗವದನುಭವ ಪಡೆಯುವವರು ಅತ್ಯುತ್ತಮರು.

**ಪ್ರಶ್ನೆ** : ಸ್ವಾಮಿ ಅ ನಡವಳಿಕೆಯಲ್ಲಿ ನಾವು ನಿವಾರಿಸಬೇಕಾದ ಗುಣಗಳು ಯಾವುವು? ಅಂದರೆ, ಹುಟ್ಟುಸಾವುಗಳ ಚಕ್ರದಿಂದ ಬಿಡುಗಡೆ ಪಡೆಯಲು ಬಯಸುವವನು ಸಾಧನಾ ಪಥದಲ್ಲಿ ಎದುರಿಸಬೇಕಾದ ತಡೆಗಳು ಯಾವುವು?

**ಉತ್ತರ** : ಅರಿಷಡ್ವರ್ಗಗಳು ಅಂದರೆ ಆರು ಶತ್ರುಗಳನ್ನು ಅವನು ನಿವಾರಿಸಬೇಕು. ಅವು ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ.

**ಪ್ರಶ್ನೆ** : ನಿಜವಾಗಿ ಕಾಮ ಎಂದರೆ ಏನು?

**ಉತ್ತರ** : ಧನ ಧಾನ್ಯ, ವಸ್ತು ವಾಹನ, ಪುತ್ರ ಪೌತ್ರ ಮೊದಲಾದವುಗಳ ಆಸೆ. ಅಸತ್ಯವಾದ, ಅನಿತ್ಯವಾದ, ಈ ಇಂದ್ರಿಯ ಗ್ರಾಹ್ಯಜಗತ್ತಿನ ಮಿಥ್ಯವಾದ, ಅಶಾಶ್ವತವಾದ, ಅಶುದ್ಧವಾದ ಯಾವುದೇ ವಸ್ತುವಿಗೆ ಅಂಟಿಕೊಳ್ಳುವಿಕೆ.

**ಪ್ರಶ್ನೆ** : ಕ್ರೋಧ ಎಂದರೆ?

**ಉತ್ತರ** : ಇತರರಿಗೆ ಕಷ್ಟವನ್ನು ಕೊಟ್ಟು ಅವರನ್ನು ಹಾಳುಮಾಡಲು ಉತ್ಸುಕರಾಗಿರುವುದು.

**ಪ್ರಶ್ನೆ** : ಲೋಭ?

**ಉತ್ತರ** : ತಾನು ಏನನ್ನು ಗಳಿಸಿದ್ದಾನೋ ಅಥವಾ ತನ್ನ ಬಳಿ ಏನಿದೆಯೋ ಅದರಲ್ಲಿ ಒಂದು ಸಣ್ಣ ಚೂರನ್ನಾದರೂ ಯಾರೊಬ್ಬರೂ ಅನುಭವಿಸಲು ಅವಕಾಶ ಕೊಡಕೂಡದೆಂಬ ಹಟ. ಎಂತಹ ಕಷ್ಟಕಾಲದಲ್ಲೂ ತನ್ನ ಗಳಿಕೆಯನ್ನು ಸ್ವಲ್ಪವೂ ವೆಚ್ಚಮಾಡಬಾರದೆಂಬ ತವಕ.

**ಪ್ರಶ್ನೆ** : ಮೋಹ ಎಂದರೇನು?

**ಉತ್ತರ** : ಕೆಲವರು ಇತರರಿಗಿಂತಲೂ ತನಗೆ ಬಹಳ ಹತ್ತಿರದವರು ಎಂಬ ಭ್ರಮೆ. ಇತರರಿಗಿಂತ ಮಿಗಿಲಾಗಿ ಅವರನ್ನು ಸಂತೋಷಪಡಿಸುವ ಆಸೆ, ಇದೇ ಬೆಳೆದು ಆ ಕೆಲವರಿಗೋಸ್ಕರವಾಗಿ ಹೆಚ್ಚು ದುಡಿದು, ಹೆಚ್ಚು ಸಂಗ್ರಹಿಸಬೇಕೆಂಬ ಕಾತರ.

**ಪ್ರಶ್ನೆ** : ಮದ?

**ಉತ್ತರ** : ತನ್ನಲ್ಲಿ ಇತರರಿಗಿಂತ ಮೇಲಾದ ವಿದ್ಯೆಯಿದೆ ಅಥವಾ ಬಲವಿದೆ ಅಥವಾ ಸಂಪತ್ತಿದೆ, ಕೀರ್ತಿಯಿದೆ ಇತ್ಯಾದಿ ಭಾವನೆ ಬಂದರೆ ವ್ಯಕ್ತಿಯಲ್ಲಿ ಒಂದು ಸೊಕ್ಕು ಬೆಳೆಯುತ್ತದೆ. ಅದೇ ಮದ. ಅವೆಲ್ಲ ಇಲ್ಲದೆ ಹೋದಾಗಲೂ ಕೂಡ ಹಿರಿಯರನ್ನು ಗೌರವಿಸದೆ, ಇತರರ ಭಾವನೆಗಳಿಗೆ ಗಮನ ಕೊಡದೆ, ತನ್ನ ಸುಖ ತನ್ನ ಭದ್ರತೆಗಳನ್ನು ಮಾತ್ರ ಹಂಬಲಿಸುತ್ತಾ ಒರಟಾಗಿ ನಡೆದುಕೊಳ್ಳುವುದು ಮದ. ಒಂದು ರೀತಿಯಲ್ಲಿ ಅತಿಯಾದ ಅಹಂಕಾರವೇ ಮದ.

**ಪ್ರಶ್ನೆ** : ಕೊನೆಯದಾಗಿ ತಾವು ಮಾತ್ಸರ್ಯವನ್ನು ಹೆಸರಿಸಿದಿರಿ. ಅದರ ಅರ್ಥವೇನು ಸ್ವಾಮಿ?

**ಉತ್ತರ** : ಇತರರು ತನ್ನಷ್ಟೇ ಸಂತೋಷವಾಗಿದ್ದರೆ ಅದನ್ನು ಸಹಿಸದೆ ಹಿಂಸೆಪಡುವುದು, ಅದನ್ನು ಸಹಿಸದಿರುವುದು, ಹೊಟ್ಟೆಕಿಚ್ಚು ಪಡುವುದು.

**ಪ್ರಶ್ನೆ** : ಡಂಭ ಮತ್ತು ದರ್ಪ ಎಂಬ ಅವಗುಣಗಳೂ ಇವೆಯಷ್ಟೆ. ಅವು ಏನನ್ನು ಸೂಚಿಸುತ್ತವೆ?

**ಉತ್ತರ** : ಡಂಭವು ಯಾಗ ಯಜ್ಞಗಳನ್ನು ಲೋಕವೆಲ್ಲಾ ಮೆಚ್ಚಲೆಂದು ದಾನ ಧರ್ಮಗಳನ್ನು ಮಾಡುವುದು. ದರ್ಪವೆನ್ನುವುದು ಮನುಷ್ಯನು ಶ್ರೀಮಂತನೂ ಸಂತುಷ್ಟನೂ ಆದಾಗ ಕಾಡುವ ಒಂದು ಗರ್ವ.

**ಪ್ರಶ್ನೆ** : ಈರ್ಷ್ಯೆ ಎಂದರೇನು?

**ಉತ್ತರ** : ತಾನು ಅನುಭವಿಸುತ್ತಿರುವ ದುಃಖ, ಸಂಕಟ, ನೋವು, ಯಾತನೆಗಳನ್ನು ಇತರರೂ ಅನುಭವಿಸಲಿ ಎಂಬ ಬಯಕೆ.

**ಪ್ರಶ್ನೆ** : ಹಾಗಾದರೆ ಅದು ಅಸೂಯೆಗಿಂತ ಬೇರೆಯೆ?

**ಉತ್ತರ** : ಹೌದು, ಅಸೂಯೆಯೆಂದರೆ ಯಾವಾಗಲೂ ಇತರರಿಗೆ ಕೆಡುಕನ್ನೇ ಬಗೆಯವುದು. ಇತರರಿಗೆ ಹಿಂಸೆ ಮಾಡಬೇಕೆಂಬ ಬಯಕೆಯ ಪೂರೈಕೆಗಾಗಿ ತಾನು ಯಾವ ಕಷ್ಟವನ್ನು ಬೇಕಾದರೂ ಸಹಿಸುವುದು. ಇವೆಲ್ಲ ಆಂತರ್ಯದ ಶತ್ರುಗಳು. ಈ ಶತ್ರುಗಳು ಒಡ್ಡಿದ ಭ್ರಮೆಯ ಬಲೆಗೆ ಮನುಷ್ಯ ಎಲ್ಲಿಯವರೆಗೆ ಸಿಕ್ಕಿಕೊಂಡಿರುತ್ತಾನೋ ಅಲ್ಲಿಯವರೆಗೂ ಅವನ ಮನಸ್ಸಿನಲ್ಲಿ ಮೋಕ್ಷಾಕಾಂಕ್ಷೆ ಉದಿಸುವುದಿಲ್ಲ.

# ೭ ಪಂಚಕೋಶಗಳು

**ಪ್ರಶ್ನೆ** : ಈ ಭ್ರಮೆಯು ಹೋಗುವುದು ಹೇಗೆ?

**ಉತ್ತರ** : ವಿವೇಕ ಮತ್ತು ವಿಜ್ಞಾನಗಳು ಅದು ಮಾಯವಾಗುವಂತೆ ಮಾಡುತ್ತವೆ.

**ಪ್ರಶ್ನೆ** : ಬುದ್ಧಿಯಲ್ಲಿ ಪ್ರತಿಫಲಿತವಾದ ಜೀವಿ ಮತ್ತು ಕೂಟಸ್ಥ ಇವರ ನಡುವೆ ಪರಸ್ಪರ ಸಂಬಂಧವಿದೆಯೆ?

**ಉತ್ತರ** : ಮೇಲು ನೋಟಕ್ಕೆ ಹಾಗಿಲ್ಲವೆಂದು ತೋರಿದರೂ ವಾಸ್ತವವಾಗಿ ಇದೆ.

**ಪ್ರಶ್ನೆ** : ಅದು ಹೇಗೆ?

**ಉತ್ತರ** : ಕೂಟಸ್ಥನು ಅಲಿಪ್ತನೂ ಅಚಂಚಲನೂ ಪರಿಣಾಮರಹಿತನೂ ನಿತ್ಯ ಸ್ವತಂತ್ರನೂ ಆಗಿದ್ದಾನೆ. ಆದರೂ ಮೇಲೊತ್ತಡದಿಂದಾಗಿ ಬೇರೆ ರೀತಿ ಕಾಣಿಸುತ್ತಾನೆ. ಇದು ಅವರಿಬ್ಬರೂ ಒಟ್ಟಿಗಿರುವುದರ ಫಲ.

**ಪ್ರಶ್ನೆ** : ಕೆಲವು ಹಿರಿಯರು 'ತತ್' ಮತ್ತು 'ತ್ವಮ್' ಎರಡೂ ಒಂದೆ, ಅವು ಸಂವಾದಿಯಾಗಿವೆ ಎಂದು ಹೇಳುತ್ತಾರೆ. ಅದು ಹೇಗೆ? ಅದರ ಅರ್ಥ ವೇನು? ದಯವಿಟ್ಟು ವಿವರಿಸಿ ಹೇಳಿ.

**ಉತ್ತರ** : ಮಡಕೆ ಮನೆ, ಪಟ ಇದೆಯೆಂದುಕೊ. ಇವು ಮೂರೂ ಸಂಪೂರ್ಣವಾಗಿ ಬೇರೆ ಬೇರೆ, ಅಲ್ಲವೆ? ಅವು ಪರಸ್ಪರ ಸಂವಾದಿಯಾಗಿಲ್ಲ. ಆದರೆ ಇವು ಮೂರರ ಒಳಗಿರುವ ಆಕಾಶ ಮಾತ್ರ ಒಂದೇ ಆಗಿದೆ. ಉಪಾಧಿ ಅಥವಾ ಷರತ್ತು ಅಥವಾ ಮಿತಿ ಹೊರಟುಹೋದರೆ ಘಟ (ಮಡಕೆ), ಮಠ (ಮನೆ) ಮತ್ತು ಪಟಗಳಲ್ಲಿರುವ ಆಕಾಶವು ಅನಂತ ಆಕಾಶದಲ್ಲಿ ಲೀನವಾಗಿಬಿಡುತ್ತದೆ. ಬೆಳಕೂ ಹಾಗೆಯೇ. ಒಳಗಿನ ಬೆಳಕು ಹೊರಗಿನ ಬೆಳಕಿನೊಂದಿಗೆ ಲೀನವಾಗುತ್ತದೆ.

**ಪ್ರಶ್ನೆ** : ಸ್ವಾಮಿ! ಪಂಚಭೂತಗಳಿಂದಾಗಿರುವ ಈ ದೇಹವನ್ನು ಧರಿಸಿರುವ ಮನುಷ್ಯನು ಪಂಚಕೋಶಗಳ ಒಳಗಿರುವ ಆತ್ಮವನ್ನು ಸಾಕ್ಷಾತ್ಕಾರಪಡಿಸಿಕೊಳ್ಳಬೇಕು ಎಂದು ತಾವು ಹೇಳಿದ್ದೀರಿ. ಪಂಚ ಕೋಶ ಎಂದರೆ ಏನು?

**ಉತ್ತರ** : ಕೋಶ ಎಂದರೆ ಕವಚ, ಒಂದು ಒರೆಯ ಹಾಗೆ, ಮುಸುಕಿನ ಹಾಗೆ. ಕತ್ತಿಯನ್ನು ಒರೆಯೊಳಗೆ, ಹಣವನ್ನು ಭಂಡಾರದಲ್ಲಿ ಅಥವಾ ಕೋಶದಲ್ಲಿ ಇಡುತ್ತಾರೆ. ಈ ಐದು ಕೋಶಗಳ ಒಳಗಡೆ ಇರುವುದು ನಿಜವಾದ 'ನಾನು'. ತನ್ನ ನಿಜಸತ್ಯವನ್ನು ನೋಡಬೇಕಾದರೆ ಪಂಚಕೋಶಗಳನ್ನು ತೆಗೆದುಹಾಕಬೇಕು.

**ಪ್ರಶ್ನೆ** : ಈ ಐದು ಕೋಶಗಳು ಯಾವುವು ಸ್ವಾಮಿ?

**ಉತ್ತರ** : ಅವುಗಳನ್ನು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನ ಮಯ ಮತ್ತು ಆನಂದಮಯಕೋಶಗಳೆಂದು ಕರೆಯುತ್ತಾರೆ.

**ಪ್ರಶ್ನೆ** : ಅನ್ನಮಯ ಎಂದರೇನು?

**ಉತ್ತರ** : ಈ ದೇಹವು ತಾಯ ಗರ್ಭದಲ್ಲಿದ್ದಾಗ ಆಕೆ ಸೇವಿಸಿದ ಆಹಾರದ ನೆರವಿನಿಂದ ಬೆಳೆಯಿತು. ಹುಟ್ಟಿದ ಮೇಲೂ ಇದು ಬೆಳೆಯುತ್ತಿರುವುದು ರಕ್ಷಿತವಾಗುತ್ತಿರುವುದು ಅನ್ನದಿಂದಲೇ. ಸತ್ತ ನಂತರ ಆಹಾರವನ್ನು ಉತ್ಪಾದಿಸುವ ಮಣ್ಣಿನ ಭಾಗವಾಗಿ ಬಿಡುತ್ತದೆ. ಆದ್ದರಿಂದ ಅದನ್ನು ಅನ್ನಮಯವೆಂದು ಕರೆಯುತ್ತಾರೆ.

**ಪ್ರಶ್ನೆ** : ಈ ಅನ್ನಮಯಕೋಶದ ಪ್ರಾಮುಖ್ಯವೇನು?

**ಉತ್ತರ** : ಅದು ಸ್ಥೂಲ ದೇಹ. ಸಂತೋಷದಿಂದ ಹಿಗ್ಗುವ, ದುಃಖದಿಂದ ಕುಗ್ಗುವ ದೇಹ.

**ಪ್ರಶ್ನೆ** : ಇದಕ್ಕೆ ಬೇರೆ ಹೆಸರೇನಾದರೂ ಇದೆಯೆ?

**ಉತ್ತರ** : ಇದೆ. ಭೋಗಾಯತನ ಎಂದೂ ಕರೆಯುತ್ತಾರೆ.

**ಪ್ರಶ್ನೆ** : ಪಾಣಮಯಕೋಶವೆಂದರೆ ಅರ್ಥವೇನು?

**ಉತ್ತರ** : ಪಂಚ ಕರ್ಮೇಂದ್ರಿಯಗಳಿಂದ ಕೂಡಿದ ಪಂಚಪ್ರಾಣಗಳನ್ನು ಪ್ರಾಣ ಮಯಕೋಶವೆನ್ನುವರು.

**ಪ್ರಶ್ನೆ** : ಸ್ವಾಮಿ ಆ ಪ್ರಾಣಗಳು ಮಾತ್ರವಲ್ಲದೆ ಉಪಪ್ರಾಣಗಳೂ ಇವೆ ಎನ್ನುತ್ತಾರೆ ಯಲ್ಲವೆ?

**ಉತ್ತರ** : ಹೌದು. ಅವನ್ನು ನಾಗ, ಕೂರ್ಮ, ಗೃಧ್ರ, ದೇವದತ್ತ ಮತ್ತು ಧನಂಜಯ ಎಂದು ಕರೆಯುತ್ತಾರೆ.

**ಪ್ರಶ್ನೆ** : ಇವುಗಳು ಕೆಲಸ ಏನು?

**ಉತ್ತರ** : ನಾಗವು ತೇಗನ್ನು ಉಂಟುಮಾಡುತ್ತದೆ; ಕೂರ್ಮವು ಕಣ್ಣುರೆಪ್ಪೆಗಳು ಮಿಟುಕಿಸುವಂತೆ ಮಾಡುತ್ತದೆ; ಗೃಧ್ರವು ಸೀನುವುದಕ್ಕೆ ಕಾರಣ; ದೇವ ದತ್ತವು ಆಕಳಿಕೆಯನ್ನು ಉಂಟುಮಾಡುತ್ತದೆ; ಧನಂಜಯವು ದೇಹದಲ್ಲಿ ತುಂಬಿಕೊಂಡು ಅದು ದಪ್ಪಗಾಗುವಂತೆ ಮಾಡುತ್ತದೆ. ಸತ್ತ ಮೇಲೂ ಕೂಡ ಇವು ದೇಹದ ಮೇಲೆ ಪರಿಣಾಮ ಬೀರಿ ಹೆಣದಲ್ಲಿ ಬದಲಾವಣೆ ಗಳನ್ನು ಉಂಟುಮಾಡುತ್ತವೆ.

**ಪ್ರಶ್ನೆ** : ಮನೋಮಯಕೋಶವೆಂದರೇನು?

**ಉತ್ತರ** : ಮನಸ್ಸು ಮತ್ತು ಅದಕ್ಕೆ ಉಪಕರಣಗಳಾಗಿರುವ ಐದು ಜ್ಞಾನೇಂದ್ರಿಯಗಳ ವಲಯ. ಇದು ಪ್ರಾಣಮಯ ಕೋಶದ ಒಳಗಡೆ ಇದೆ.

**ಪ್ರಶ್ನೆ** : ತಾವು ಪದೇ ಪದೇ ಮನಸ್ಸು ಮನಸ್ಸು ಎನ್ನುತ್ತೀರಿ. ಹಾಗೆಂದರೇನು ದಯವಿಟ್ಟು ವಿವರಿಸಿ.

**ಉತ್ತರ** : ದೇಹವೇ ನೀನು ಎಂಬ ಭಾವನೆಯನ್ನೂ, ದೇಹಕ್ಕೆ ಸಂಬಂಧಿಸಿದ ಎಲ್ಲವೂ ನನ್ನವು ಎಂಬ ಭಾವನೆಯನ್ನೂ ಉಂಟುಮಾಡುವಂಥದು; ಇಂದ್ರಿಯಗಳ ಮೂಲಕವಾಗಿ ವಸ್ತುಗಳಿಗೆ ಅವುಗಳ ಆನಂದವನ್ನು ಸವಿಯುವ ಸಲುವಾಗಿ ಹರಿಯುವಂಥದು ಮನಸ್ಸು. ಆದ್ದರಿಂದಲೇ ಅದು ಬಹು ಚಂಚಲ; ಒಂದು ವಸ್ತುವಿನಿಂದ ಮತ್ತೊಂದಕ್ಕೆ ಸದಾ ಹಾರಾಡುತ್ತಿರುತ್ತದೆ.

**ಪ್ರಶ್ನೆ** : ಸ್ವಾಮಿ, ಮನುಷ್ಯನು ತಾನು ಅನ್ನಮಯಕೋಶದಿಂದ ಪ್ರತ್ಯೇಕ, ಅದಕ್ಕೆ ಅತೀತನಾದವನು, ಅದರ ಮೇಲಿರುವವನು ಎಂದು ಅರ್ಥಮಾಡಿ ಕೊಳ್ಳುವುದು ಹೇಗೆ?

**ಉತ್ತರ** : ಹುಟ್ಟುವುದಕ್ಕೆ ಮೊದಲಾಗಲಿ, ಸತ್ತ ನಂತರವಾಗಲಿ ದೇಹವು ವ್ಯಕ್ತವಾಗಿ ರುವುದಿಲ್ಲ. ಮಧ್ಯದ ಕಾಲಾವಧಿಯಲ್ಲಿ ಮಾತ್ರ ಅದು ಗೋಚರಿಸುತ್ತದೆ. ದೇಹಕ್ಕೆ ಆದಿಯಿದೆ, ಅಂತ್ಯವೂ ಇದೆ; ಬೆಳವಣಿಗೆಯಿದೆ, ವಿನಾಶವೂ ಇದೆ. ಅವೆಲ್ಲ ಉತ್ಪನ್ನಗಳು. ಪರಿಣಾಮಗಳು ಯಾವಾಗಲೂ ಸ್ಥಿತಿಗಳು. ಆದ್ದರಿಂದ ದೇಹವೂ ಒಂದು ಸೀಮಿತಸ್ಥಿತಿ. ಜ್ಞಾನಿಯಾದವನು ಹೀಗೆ ಹೇಳಿಕೊಳ್ಳುತ್ತಾನೆ: "ನಾನು ಯಾವಾಗಲೂ ಅಸ್ತಿತ್ವದಲ್ಲಿದ್ದೇನೆ, ಈ ಸ್ಥೂಲ ದೇಹದಿಂದ ನಾನು ಭಿನ್ನವಾಗಿದ್ದೇನೆ. ಆದ್ದರಿಂದ ನಾನು ಈ ಅನ್ನಮಯ ಕೋಶವಾಗಿರಲು ಸಾಧ್ಯವಿಲ್ಲ. ನಾನು ಅನ್ನಮಯಕೋಶದ ಜ್ಞಾತೃ; ನಾನು ಸಾಕ್ಷಿ." ಈ ಅರಿವು ಭದ್ರವಾಗಿ ನೆಲೆಗೊಂಡಾಗ ಅವನಿಗೆ ಸತ್ಯವು ಗೋಚರವಾಗುತ್ತದೆ. ತಾನು ಅನ್ನಮಯಕೋಶದಿಂದ ಆಚೆಗೆ ಅದನ್ನು ಮೀರಿ ಇದ್ದೇನೆಂದು ಅವನು ಅರ್ಥಮಾಡಿಕೊಳ್ಳಬೇಕು.

**ಪ್ರಶ್ನೆ** : ಪ್ರಾಣಮಯಕೋಶದಿಂದಲೂ ಆಚೆಗೆ ಇದ್ದೇನೆಂದು ತಿಳಿದುಕೊಳ್ಳುವ ಪರಿ ಯಾವುದು?

**ಉತ್ತರ** : ರಾತ್ರಿ ವೇಳೆಯಲ್ಲಿ ವ್ಯಕ್ತಿಯು ನಿದ್ರಿಸುತ್ತಿರುವಾಗ ಪ್ರಾಣವಾಯುಗಳು ಚಲಿಸುತ್ತಲೇ ಇರುತ್ತವೆ. ಆದರೆ ತನ್ನಲ್ಲಿ ಏನಾಗುತ್ತಿದೆ, ತನ್ನ ಸುತ್ತಮುತ್ತ ಏನಾಗುತ್ತಿದೆ ಎಂಬುದು ಅವನಿಗೆ ತಿಳಿಯುವುದಿಲ್ಲ. ನಿದ್ರಿಸುತ್ತಿರುವಾಗ

ಶತ್ರುಗಳು ಬಂದರೆ ಅವನು ಅವರೊಂದಿಗೆ ಕಾದಲಾರ. ಒಂದು ಮರದ ಕೊರಡಿನಂತೆ ನಿಷ್ಕ್ರಿಯನಾಗಿ ಜಡವಾಗಿ ಬಿದ್ದಿರುತ್ತಾನೆ. "ನನ್ನ ಸ್ವಭಾವ ಈ ಜಡತ್ವವಲ್ಲ, ನಾನು ಸದಾ ಜಾಗ್ರತವಾಗಿರುವ ಸಾಕ್ಷಿ, ಈ ಎಲ್ಲ ಕೋಶಗಳಿಂದಲೂ ನಾನು ಬೇರೆಯಾಗಿದ್ದೇನೆ," ಹೀಗೆ ಅವನು ವಿವಕ್ಷಿಸಿ, ವಿವೇಚಿಸಿ, ತಿಳಿದುಕೊಳ್ಳಬೇಕು.

# ೮ ಯೋಗ ಮತ್ತು ಮೋಕ್ಷ

**ಪ್ರಶ್ನೆ** : ಈ ದೇಹದಿಂದಲೂ ಮನಸ್ಸಿನಿಂದಲೂ ನಾವು ಅನೇಕಾನೇಕ ಪಾಪಕಾರ್ಯಗಳನ್ನೂ ಪುಣ್ಯಕಾರ್ಯಗಳನ್ನೂ ಮಾಡುತ್ತೇವೆ. ಸ್ವಾಮಿ! ಅವು ನಮಗೆ ದುಃಖವನ್ನೋ ಸಂತೋಷವನ್ನೋ ತರುತ್ತವೆ. ಈಗ ತಾವು ಹೇಳುತ್ತಿರುವ 'ನಾನು' ಆ ಕೆಲಸಗಳನ್ನು ಮಾಡುತ್ತಾನೆಯೆ, ಸುಖದುಃಖಗಳನ್ನು ಅನುಭವಿಸುತ್ತಾನೆಯೆ?

**ಉತ್ತರ** : ಒಂದು ಕ್ಷಣಮಾತ್ರವೂ ಇಲ್ಲ. ಕೆಲಸ ಮಾಡುವವನು ಕರ್ತೃ. ಕೃತಿಯೆನ್ನುವುದು ಒಂದು ಪರಿವರ್ತನೆ. ಕೆಲಸ ಮಾಡುವುದೆಂದರೆ ಒಂದು ಪರಿವರ್ತನೆಯನ್ನು ಉಂಟುಮಾಡುವುದೇ ಅಲ್ಲವೆ? ಆದ್ದರಿಂದ ವ್ಯಕ್ತಿಯು ಏನೋ ಒಂದು ಬದಲಾವಣೆಯನ್ನು ಮಾಡುತ್ತಿರುವಂತೆ ತೋರುತ್ತಾನೆ. ಆದರೆ 'ನಾನು' ಎನ್ನುವುದು ಪರಿವರ್ತನರಹಿತ. ಅವನು ಸ್ಥಿರ, ಶಾಶ್ವತ. ಅವನ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಕರ್ತೃತ್ವವೆನ್ನುವುದು ಅಂತಃಕರಣದ ಲಕ್ಷಣ. ಆದ್ದರಿಂದ 'ನಾನು' ಕರ್ತೃವಿನ ಹಾಗೂ ಕೃತಿಯ ಫಲಾನುಭವದ ತೋರಿಕೆಯನ್ನು ತಳೆಯುತ್ತದೆ.

**ಪ್ರಶ್ನೆ** : ಹಾಗಾದರೆ ನಾವು ಈ ಪ್ರಪಂಚವನ್ನು ಪ್ರವೇಶಿಸುವ ವಿಚಾರವಾಗಿಯೋ ಇಲ್ಲಿಂದ ಬೇರೊಂದಕ್ಕೆ ನಿಷ್ಕ್ರಮಿಸುವ ವಿಚಾರವಾಗಿಯೋ ತಿಳಿದುಕೊಳ್ಳುವುದು ಹೇಗೆ?

**ಉತ್ತರ** : ಈ ಜಗತ್ತಿನಿಂದ ಇನ್ನೊಂದಕ್ಕೆ, ಒಂದು ಜನ್ಮದಿಂದ ಇನ್ನೊಂದಕ್ಕೆ, ತಾನು ಸಂಚಯಿಸಿಕೊಂಡ ಪುಣ್ಯಾನುಸಾರವಾಗಿ ಚಲಿಸುವುದು ಅಂತಃಕರಣ. ಲಿಂಗದೇಹ ಪ್ರವೇಶ, ನಿಷ್ಕ್ರಮಣಗಳಿರುವುದು ಸೀಮಿತವಾಗಿರುವ ಲಿಂಗದೇಹಕ್ಕೆ. ನೀನು ಆಕಾಶದ ಹಾಗೆ ಸರ್ವವ್ಯಾಪ್ತಿಯಾಗಿ ಪರಿಣಾಮರಹಿತವಾಗಿದ್ದೀಯೆ. ನಿನಗೆ ಈ ಜಗತ್ತಿಗೆ ಆಗಮನವೆನ್ನುವುದೂ ಇಲ್ಲ, ಇನ್ನೊಂದಕ್ಕೆ ನಿರ್ಗಮನವೆನ್ನುವುದೂ ಇಲ್ಲ. ನಿನ್ನ ಸ್ವಭಾವ ಅಂಥದಲ್ಲ.

**ಪ್ರಶ್ನೆ** : ಹಾಗಾದರೆ ಮೋಕ್ಷವನ್ನು ಸಂಪಾದಿಸಲು ದಾರಿ ಯಾವುದು?

**ಉತ್ತರ** : ವಿಜ್ಞಾನವೇ ದಾರಿ.

**ಪ್ರಶ್ನೆ** : ಕೆಲವರು ಜ್ಞಾನಿಗಳು ಯೋಗವೇ ದಾರಿ ಎನ್ನುತ್ತಾರೆ. ನಿಜವೆ?

**ಉತ್ತರ** : ಅದೂ ನಿಜ. ಒಂದು ಸ್ಥಳಕ್ಕೆ ಎರಡು ದಾರಿಗಳಿರಬಹುದಲ್ಲವೆ?

**ಪ್ರಶ್ನೆ** : ಉತ್ತಮತರವಾದ ದಾರಿ ಯಾವುದು?

**ಉತ್ತರ** : ಎರಡೂ ಒಳ್ಳೆಯವೇ ಮತ್ತು ಮಹತ್ವದವೇ. ಎರಡೂ ನಿಮ್ಮನ್ನು ಒಂದೇ ಗುರಿಯ ಕಡೆಗೆ ಒಯ್ಯುತ್ತವೆ. ನೀನು ಏಕಕಾಲದಲ್ಲಿ ಎರಡೂ ದಾರಿಗಳಲ್ಲಿ ನಡೆಯಲು ಸಾಧ್ಯವಿಲ್ಲ. ಜನರು ತಮ್ಮ ಒಳದನಿ ಯಾವುದನ್ನು ಒಲಿಯುತ್ತದೋ ಆ ದಾರಿಯನ್ನು ಹಿಡಿದು ಅದಕ್ಕೆ ತಕ್ಕ ಸಾಧನೆ ಮಾಡಬೇಕು. ಎರಡೂ ಸಾಧಕರನ್ನು ಬಂಧನದಿಂದ ಬಿಡುಗಡೆ ಮಾಡುತ್ತವೆ.

**ಪ್ರಶ್ನೆ** : ಸ್ವಾಮಿ ಜ್ಞಾನದಿಂದ ಯೋಗ ದೊರಕುತ್ತದೋ ಯೋಗದಿಂದ ಜ್ಞಾನವನ್ನು ಸಂಪಾದಿಸಲಾಗುತ್ತದೆಯೋ?

**ಉತ್ತರ** : ಯೋಗವು ಜ್ಞಾನವನ್ನು ನೀಡುತ್ತದೆ, ಜ್ಞಾನವು ಸುಲಭವಾಗಿ ಮೋಕ್ಷವನ್ನು ನೀಡುತ್ತದೆ. ಇದೇ ಸರಿಯಾದ ನಿಲುವು.

**ಪ್ರಶ್ನೆ** : ಯೋಗದ ಪರಿಣಾಮವೇನು? ಅದು ಹೇಗೆ ಪ್ರಯೋಜನಕಾರಿ?

**ಉತ್ತರ** : ಯೋಗವು ಬೆಂಕಿಯ ಹಾಗೆ. ಆದ್ದರಿಂದಲೇ ಯೋಗಾಗ್ನಿ ಎಂಬ ಪದವನ್ನು ಪ್ರಯೋಗಿಸುತ್ತಾರೆ. ಅದು ಎಲ್ಲ ಪಾಪಗಳನ್ನೂ ಸುಟ್ಟು ಬೂದಿ ಮಾಡುತ್ತದೆ. ಅದರಿಂದ ಅಂತಃಕರಣವು ಪರಿಶುದ್ಧವಾಗುತ್ತದೆ. ಹಾಗಾದಾಗ ಅಲ್ಲಿ ಜ್ಞಾನವು ಉದಿಸುತ್ತದೆ. ಜ್ಞಾನದ ಕಾಂತಿಯು ಅಜ್ಞಾನ ಮತ್ತು ಭ್ರಮೆಗಳ ಕತ್ತಲನ್ನು ಹೊಡೆ ದೋಡಿಸುತ್ತದೆ. ಅದೇ ಮೋಕ್ಷ.

**ಪ್ರಶ್ನೆ** : ಯೋಗಕ್ಕೆ ಅಂತಹ ಸಾಮರ್ಥ್ಯವಿದೆಯೆ?

**ಉತ್ತರ** : ಇದೆಯೆ ಎಂದು ಕೇಳುವುದೇಕೆ? ಇದೆ. ಒಬ್ಬ ವ್ಯಕ್ತಿಯು ಎಷ್ಟೇ ವಿದ್ಯಾವಂತನಾಗಿರಬಹುದು, ಅವನ ಅನಾಸಕ್ತ ಮನೋಭಾವ ದೊಡ್ಡದಿರಬಹುದು, ವಿವೇಕ ತಲಸ್ಪರ್ಶಿಯಾಗಿರಬಹುದು, ಅವನು ತನ್ನ ಇಂದ್ರಿಯಗಳನ್ನು ಜಯಿಸದೆ ಹೋದ ಪಕ್ಷದಲ್ಲಿ ಮೋಕ್ಷಕ್ಕೆ ಅರ್ಹನಾಗುವುದಿಲ್ಲ. ಯೋಗವಿಲ್ಲದೆ ಹೋದರೆ ಈ ಎಲ್ಲವೂ ಪಾಪದಿಂದ ವಿಮುಕ್ತವಾಗುವುದಿಲ್ಲ. ಅವು ಪಾಪ ವಿಮುಕ್ತವಾಗದೆ ಹೋದರೆ ಅಂತಕರಣವು ಪರಿಶುದ್ಧವಾಗುವುದಿಲ್ಲ. ಪರಿಶುದ್ಧ ಅಂತಃಕರಣವಿಲ್ಲದೆ ಜ್ಞಾನವನ್ನು ಗಳಿಸುವುದು ಸಾಧ್ಯವಿಲ್ಲ. ಜ್ಞಾನವಿಲ್ಲದೆ ಮೋಕ್ಷವೆಲ್ಲಿ ಬಂತು? ಆದ್ದರಿಂದ ಯೋಗವು ಎಲ್ಲದಕ್ಕೂ ತಳಹದಿ.

**ಪ್ರಶ್ನೆ** : ಇದನ್ನು ಅರ್ಥಮಾಡಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಸರಳವಾಗಿ ಸಲು ನಿದರ್ಶನಗಳನ್ನು ಕೊಡಿ ಸ್ವಾಮಿ! ಆಗ ಇದು ಅವಿದ್ಯಾವಂತನಿಗೂ ಅರ್ಥವಾಗುತ್ತದೆ.

**ಉತ್ತರ** : ಬಿರುಗಾಳಿ ಬೀಸುತ್ತಿರುವಾಗ ದೀಪವನ್ನು ಹೊತ್ತಿಸಲು ಸಾಧ್ಯವೆ? ಹಾಗೇ ಇಂದ್ರಿಯಾಕಾಂಕ್ಷೆಗಳು ಅಬ್ಬರಿಸಿ ಬೀಸುತ್ತಿರುವಾಗ ಜ್ಞಾನ ದೀಪವು ಉರಿಯಲಾರದು. ಹೊತ್ತಿಸಿಟ್ಟರೂ ಬಲು ಬೇಗ ಆರಿ ಹೋಗುತ್ತದೆ.

**ಪ್ರಶ್ನೆ** : ಯೋಗದಿಂದೊದಗುವ ಪ್ರಯೋಜನವೇನು?

**ಉತ್ತರ** : ಅದು ಇಂದ್ರಿಯ ಗೋಚರ ಜಗತ್ತಿನ ಕಡೆಗಿನ ಸೆಳೆತವನ್ನು ನಾಶಪಡಿಸಿ ಮನಸ್ಸನ್ನೂ ಅದರ ಚಂಚಲತೆಯನ್ನೂ ತಗ್ಗಿಸಿ ಸ್ಥಿರಗೊಳಿಸುತ್ತದೆ.

# ೯ ಜ್ಞಾನ ಮತ್ತು ಯೋಗ

**ಪ್ರಶ್ನೆ** : ಜ್ಞಾನ ಅತ್ಯಗತ್ಯವೆಂದು ತಾವು ಹೇಳುತ್ತಿದ್ದೀರಿ. ವಾಸ್ತವವಾಗಿ ಜ್ಞಾನದ ಕರ್ತವ್ಯವೇನು?

**ಉತ್ತರ** : ನಿನ್ನ ಆತ್ಮಸ್ವರೂಪವನ್ನು, ಅಂದರೆ ನಿನ್ನದೇ ನಿಜವನ್ನು ಅರ್ಥಮಾಡಿಸುತ್ತದೆ.

**ಪ್ರಶ್ನೆ** : ಯೋಗವೊ? ವ್ಯಕ್ತಿಗೆ ಯೋಗ ಸಾಧನೆಯಿಲ್ಲದೆ ಹೋದರೆ ಏನಾಗುತ್ತದೆ?

**ಉತ್ತರ** : ಅವನು ಕುಂಟನ ಹಾಗೆ.

**ಪ್ರಶ್ನೆ** : ಜ್ಞಾನ ಇಲ್ಲದವನು?

**ಉತ್ತರ** : ಕುರುಡನ ಹಾಗೆ.

**ಪ್ರಶ್ನೆ** : ಯೋಗವು ಎಲ್ಲ ಕುಂದುಗಳನ್ನೂ ನಾಶಮಾಡಿ ದೋಷಗಳನ್ನೂ ತೆಗೆದು ಹಾಕುತ್ತದೆ ಎಂದು ಹೇಳುತ್ತಾರೆ. ಅದು ಹೇಗಾಗುತ್ತದೆ?

**ಉತ್ತರ** : ಅಗ್ನಿ ಸಂಯೋಗವಿಲ್ಲದೆ ಅಕ್ಕಿಯು ಅನ್ನವಾಗುತ್ತದೆಯೆ? ಯೋಗ ಮತ್ತು ಇತರ ಸಾಧನೆಗಳಿಂದ ಚಿತ್ತವು ಮೃದುವಾಗುತ್ತದೆ. ಅದನ್ನು ತಪಸ್ಸು ಎನ್ನುತ್ತಾರೆ. ಅದು ಶಾಖ, ಅದು ತಪ್ತವಾಗುತ್ತದೆ. ಅಲ್ಲದೆ ಯೋಗ ಮತ್ತು ಜ್ಞಾನಗಳು ಎಣ್ಣೆ ಮತ್ತು ದೀಪದ ಕುಡಿ ಇದ್ದ ಹಾಗೆ. ಯೋಗವು ಎಣ್ಣೆ ಮತ್ತು ಜ್ಞಾನವು ಬೆಳಕು ಕೊಡುವ ದೀಪದ ಕುಡಿ.

**ಪ್ರಶ್ನೆ** : ಸ್ವಾಮಿ, ಈ ರೀತಿ ಕೇಳುತ್ತಿರುವುದನ್ನು ಮನ್ನಿಸಬೇಕು. ಈ ದಿನಗಳಲ್ಲಿ ಬೇಕಾದಷ್ಟು ಜನ ವೇದಾಂತವನ್ನು ಬೋಧಿಸುತ್ತಾರೆ. ಅವರೆಲ್ಲರೂ ಸತ್ಯವನ್ನು, ನಿಜಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆಯೆ?

**ಉತ್ತರ** : ಅದು ಹೇಗೆ ಹೇಳಲು ಸಾಧ್ಯ? ನೀನೇ ಅದನ್ನು ತೀರ್ಮಾನಿಸಬಹುದು. ಅವರಲ್ಲಿ ಪರಿಶುದ್ಧ ಹೃದಯ, ಪರಿಶುದ್ಧ ಚಿಂತನೆ, ಮನೋಪರಿಶುದ್ಧಿ, ಅಂತರ್ಯಾಮಿಯೂ ಸರ್ವವ್ಯಾಪಿಯೂ ಆದ ಪರಮಾತ್ಮನ ಅರಿವು ಇವೆಯೆ ಎಂದು ನೋಡು. ಅಂಥವರು ಮಾತ್ರವೆ ವೇದಾಂತವನ್ನು ಬೋಧಿಸಲು ಅರ್ಹರು. ಏಕೆಂದರೆ ಅವರಿಗೆ ಮಾತ್ರವೇ ವೇದಾಂತದ ಅನುಭವವಾಗಿರುತ್ತದೆ.

**ಪ್ರಶ್ನೆ** : ಅಂತಹ ಗುಣಗಳಿಲ್ಲದೆ ಉಪದೇಶ ಮಾಡುವವರಿಂದ ಕೊನೆಯ ಪಕ್ಷ ಸ್ವಲ್ಪವಾದರೂ ಪ್ರಯೋಜನವಿದೆಯೆ?

**ಉತ್ತರ** : ಒಳ್ಳೊಳ್ಳೆಯ ರುಚಿಯಾದ ಭಕ್ಷ್ಯ ಭೋಜ್ಯಗಳನ್ನು ರಸವತ್ತಾಗಿ ವರ್ಣಿಸುವುದರಿಂದ ಹಸಿದಿರುವ ಮನುಷ್ಯನಿಗೆ ತೃಪ್ತಿಯಾಗುವುದಿಲ್ಲ. ಮಾತುಗಳಷ್ಟಕ್ಕೆ ನಿಲ್ಲುವ ವೇದಾಂತವೂ ಹಾಗೆಯೇ. ತೃಪ್ತಿಯಾಗಬೇಕಾದರೆ ಅದನ್ನು ಅನುಭವಿಸಬೇಕು. ಮತ್ತೆ, ಕಲಿಯಬೇಕೆಂಬ ಉತ್ಸುಕತೆಯಿಲ್ಲದೆ ಸುಮ್ಮನೆ ಕಿವಿಯಿಂದ ಕೇಳಿದರೆ ಅದೂ ಪರಿಣಾಮರಹಿತವಾಗಿರುತ್ತದೆ. ಗುರುವು ಇಂದ್ರಿಯ ವಿಷಯಗಳಿಂದ ಅಲಿಪ್ತನಾಗಿರದಿದ್ದರೆ ಅವನ ಬೋಧನೆ ಗಿಣಿಪಾಠವಾಗುತ್ತದಷ್ಟೆ. ಕಲಿತು ಪ್ರಯೋಜನ ಪಡೆಯಬೇಕೆಂಬ ಪ್ರಾಮಾಣಿಕ ಅಪೇಕ್ಷೆಯಿಲ್ಲದೆ ಸುಮ್ಮನೆ ಕೇಳಲು ಬಂದವರು ಒಂದು ಪ್ರದರ್ಶನದಲ್ಲಿ ಭಾಗವಹಿಸಿರುತ್ತಾರೆ ಅಷ್ಟೆ.

**ಪ್ರಶ್ನೆ** : ಬಾಬಾ! ಹೃದಯ ಶುದ್ಧಿ, ಮನೋಶುದ್ಧಿ ಮತ್ತು ಸರ್ವಾಂತರ್ಯಾಮಿಯೂ ಸರ್ವಾತೀತನೂ ಆದ ಪರಮಾತ್ಮನ ಅರಿವು ಅತ್ಯಗತ್ಯ ಎಂದು ಹೇಳುವಿರಿ. ಹಾಗಿದ್ದರೆ ಪಂಚಭೂತಗಳಿಂದಾದ ಈ ದೇಹದಿಂದ ಮಾಡುವ ಸಾಧನೆಗಳಾದರೂ ಏತಕ್ಕೆ? ವ್ಯಕ್ತಿಯು ಸ್ವಸ್ವರೂಪ ಜ್ಞಾನವೊಂದನ್ನು ಪಡೆದರೆ ಸಾಲದೆ?

**ಉತ್ತರ** : ವಿಚಿತ್ರದ ವ್ಯಕ್ತಿ ನೀನು! ಅಯ್ಯಾ, ಚುಕ್ಕಾಣಿ ಅತ್ಯಗತ್ಯ ಸರಿ. ಹಾಗಾದರೆ ನೌಕೆಯೇ ಅನಗತ್ಯ ಎಂದು ಹೇಳಲು ಬರುತ್ತದೆಯೆ? ಚುಕ್ಕಾಣಿಯೊಂದರಿಂದಲೇ ನದಿಯನ್ನು ದಾಟಲು ಸಾಧ್ಯವಿಲ್ಲ. ದೇವರು ಈ ದೇಹವನ್ನು ನಿನಗೆ ಕೊಟ್ಟಿರುವುದು ಈ ಸಂಸಾರವೆಂಬ ಸಾಗರವನ್ನು ದಾಟಲು ಅಗತ್ಯವಾದ ದೋಣಿಯಾಗಿ. ಚಿತ್ತವು ಅದರಲ್ಲಿರುವ ಅತ್ಯಂತ ಮುಖ್ಯವಾದ ವಸ್ತು. ಅದೇ ವೇದಾಂತದಲ್ಲಿ ಮೊದಲನೆಯ ಹೆಜ್ಜೆ. ಸ್ವಸ್ವರೂಪ ಜ್ಞಾನವು ಈ ನೌಕೆಗೆ ಚುಕ್ಕಾಣಿ. ಆದರೆ ಅದಷ್ಟೇ ಸಾಕಾಗುವುದಿಲ್ಲ. ದೈಹಿಕ ಅಭ್ಯಾಸಗಳು ಸಾಧನೆಗಳಿಗೂ ಗಮನ ಕೊಡಬೇಕು. ಅಪ್ರಾಪಂಚಿಕ ಶಾಶ್ವತ ನೆಲೆಯನ್ನು ತಲುಪಬೇಕಾದರೆ ಸಂಯಮಿತ ದೇಹವು ಬಹು ಮುಖ್ಯ.

**ಪ್ರಶ್ನೆ** : ಇನ್ನೊಂದು ಸಂದೇಹವು ನನ್ನನ್ನು ಕಾಡುತ್ತಿದೆ ಸ್ವಾಮಿ! ದೈಹಿಕ ಸಾಧನೆಗಳ ವಿಷಯ ವಿಚಾರ ಮಾಡುವಾಗ ಬ್ರಹ್ಮವಿದ್ಯಾಸಾಧನೆ ಹೇಗೆ?

**ಉತ್ತರ** : ಮಗು, ಈ ನೌಕೆಯು ಅಂತಹ ಭೇದವನ್ನೇನೂ ಮಾಡುವುದಿಲ್ಲ. ಬ್ರಹ್ಮವಿದ್ಯೆ ಮತ್ತು ಚಿತ್ತಶುದ್ಧಿಗಳು ಲಿಂಗವನ್ನು ಅವಲಂಬಿಸುವುದಿಲ್ಲ. ಕಾಯಿಲೆಯಾದವರಿಗೆಲ್ಲ ವಾಸಿ ಮಾಡುವ ಔಷಧಿ ಪಡೆಯುವ ಹಕ್ಕಿದೆ, ಅಲ್ಲವೆ? ಹಾಗೆಯೇ ಭವರೋಗವಿರುವವರೆಲ್ಲರಿಗೂ (ಹುಟ್ಟು ಮತ್ತು ಸಾವು) ಅದನ್ನು ಪರಿಹರಿಸುವ ಔಷಧಿಯಾದ ಬ್ರಹ್ಮವಿದ್ಯೆಯನ್ನು ಪಡೆಯುವ ಹಕ್ಕಿದೆ. ಆ ಅದ್ಭುತವಾದ ಔಷಧಿಯನ್ನು ಪಡೆಯುವ ಶಕ್ತಿ

ಎಲ್ಲರಿಗೂ ಇರಲಾರದು. ಹಾಗೆಂದ ಮಾತ್ರಕ್ಕೆ ಅವರಿಗೆ ಅದನ್ನು ಗಳಿಸುವ ಹಕ್ಕಿಲ್ಲ ಎಂದು ವಾದಿಸಲು ಸಾಧ್ಯವಿಲ್ಲ.

**ಪ್ರಶ್ನೆ** : ಆದರೆ ಸ್ವಾಮಿ, ಕೆಲವು ವೇದಾಂತ ವಿದ್ವಾಂಸರೇ ಸ್ತ್ರೀಯರಿಗೆ ಬ್ರಹ್ಮವಿದ್ಯೆಯನ್ನು ಕಲಿಯುವ ಅಥವಾ ಆಚರಿಸುವ ಅಧಿಕಾರವಿಲ್ಲ ಎಂದು ಹೇಳುತ್ತಾರಲ್ಲ! ನೌಕೆಗಳು ಒಂದೇ ಸ್ವರೂಪದವಲ್ಲ ಎಂದು ಅವರ ಅಭಿಮತವಿರುವಂತೆ ತೋರುತ್ತದೆ.

**ಉತ್ತರ** : ಮಗು, ನಾನಾಗಲೆ ಹೇಳಿದ ಹಾಗೆ ಇಬ್ಬರಿಗೂ ಔಷಧಿ ಪಡೆಯುವ ಹಕ್ಕಿದೆ. ಆದರೆ ಔಷಧಿಯು ದೇಹದ ಮೇಲೆ ಕೆಲಸ ಮಾಡಬೇಕಾದರೆ ಪಥ್ಯ ಮಾಡಬೇಕಾಗುತ್ತದೆ. ಬ್ರಹ್ಮ ಭಾವನೆ ಅಥವಾ ತನ್ನ ನಿಜದ ಆಧಾರದ ಮನನವೇ ಔಷಧಿ. ಅದರೊಟ್ಟಿಗೇ ಜ್ಞಾನ ಮತ್ತು ವೈರಾಗ್ಯಗಳ ಪಥ್ಯದ ಕಟ್ಟುಪಾಡುಗಳನ್ನು ಕಟ್ಟು ನಿಟ್ಟಾಗಿ ಅನುಸರಿಸಲೇಬೇಕು. ಸ್ತ್ರೀಯರು ಪುರುಷರಷ್ಟು ಕಟ್ಟುನಿಟ್ಟಾಗಿ ಪಾಲಿಸದೆ ಹೋಗಬಹುದು, ಅವರು ಪುರುಷರಷ್ಟು ಬಲಿಷ್ಠರಲ್ಲವಾದ್ದರಿಂದ. ನೀನು ಹೇಳಿದ ವೇದಾಂತಿಗಳು ಸ್ತ್ರೀಯರಿಗೆ ಈ ಔಷಧಿಯನ್ನು ಹೇಳದುದಕ್ಕೆ ಈ ದೌರ್ಬಲ್ಯವೇ ಕಾರಣವಿರಬಹುದು. ಆದರೆ ಸ್ತ್ರೀಯರೋ ಪುರುಷರೋ ಯಾರಾದರೂ ಸರಿ, ನಿಯಮ ನಿಬಂಧನೆಗಳನ್ನು ಕಟ್ಟುಪಾಡುಗಳನ್ನು ಪಾಲಿಸುವವರಿಗೆ ಬ್ರಹ್ಮ ವಿದ್ಯೆ ಎಂಬ ಔಷಧಿಯ ಪ್ರಯೋಜನವನ್ನು ಪಡೆಯುವ ಸಮಾನ ಹಕ್ಕಿದೆ. ಇದೇ ನನ್ನ ಕೊನೆಯ ಮಾತು.

# ೧೦ ಬ್ರಹ್ಮವಿದ್ಯೆ ಮತ್ತು ಮಹಿಳೆಯರು

**ಪ್ರಶ್ನೆ** : ಕಟ್ಟುನಿಟ್ಟಾದ ನಿಯಮ ಎಂದಿರಿ. ಪುರುಷರೂ ಹಾಗೆಯೇ ಪಾಲಿಸಬೇಕು ತಾನೆ?

**ಉತ್ತರ** : ಹೌದು. ಅವರದೂ ರಕ್ತ ಮಾಂಸ, ಮೂಳೆ ಮಜ್ಜೆ. ಅವರಿಗೂ ಕಾಯಿಲೆ ಬರುತ್ತದೆ. ಹುಟ್ಟು ಮತ್ತು ಸಾವುಗಳೆಂಬ ಕಾಯಿಲೆಯಿಂದ ನರಳುತ್ತಿರುವ ಪ್ರತಿಯೊಬ್ಬ ವ್ಯಕ್ತಿಗೂ ಈ ಔಷಧಿಯ ಅಗತ್ಯವಿದೆ. ಈ ಚಿಕಿತ್ಸೆ ಪಡೆಯುವವರು ಸಂಬಂಧಿಸಿದ ಕಟ್ಟುಪಾಡನ್ನು ಅನುಸರಿಸಲೇಬೇಕಾಗುತ್ತದೆ. ಸ್ತ್ರೀಯಾಗಲಿ ಪುರುಷನಾಗಲಿ ಪಥ್ಯದ ಕಟ್ಟುಪಾಡನ್ನು ಅಲಕ್ಷಿಸಿದರೆ ಕಾಯಿಲೆ ಗುಣವಾಗಲಾರದು. ಕಾಯಿಲೆಯಿಂದ ವಿಮುಕ್ತರಾಗಿದ್ದೇವೆಂದು ಪುರುಷರು ಹೇಳುವಂತಿಲ್ಲ, ಅವರು ಮೊದಲು ನಿಯಮ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಬ್ರಹ್ಮೋಪದೇಶವಾಗಿದ್ದರೂ ಶಮ ದಮಗಳೇ ಮೊದಲಾದ ಸದ್ಗುಣಗಳನ್ನು ಪಾಲಿಸದೆ ಹೋದ ಪಕ್ಷದಲ್ಲಿ, ಅದು ಪುರುಷನಾಗಲಿ, ಸ್ತ್ರೀಯಾಗಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲಾರರು.

**ಪ್ರಶ್ನೆ** : ಹಾಗಾದರೆ, ಸ್ವಾಮಿ! ಅನೇಕ ಶಾಸ್ತ್ರವಿದರಾದ ವಿದ್ವಾಂಸರು ಬ್ರಹ್ಮವಿದ್ಯೆಯನ್ನು ಗಳಿಸಲು ಸ್ತ್ರೀಯರಿಗೆ ಹಕ್ಕಿಲ್ಲ ಎಂದು ಏಕೆ ಘೋಷಿಸಿದ್ದಾರೆ? ಅದಕ್ಕೆ ಕಾರಣವೇನು?

**ಉತ್ತರ** : ಮಹಿಳೆಯರಿಗೆ ಬ್ರಹ್ಮವಿದ್ಯೆಯನ್ನು ಪಡೆಯುವ ಹಕ್ಕಿಲ್ಲ ಎಂದು ಘೋಷಿಸಲು ಯಾವ ಕಾರಣವೂ ಇಲ್ಲ. ಮಹಾವಿಷ್ಣುವು ಭೂದೇವಿಗೆ ಗೀತೆಯ ಮಹಿಮೆಯನ್ನು ಬೋಧಿಸಿದನು. ಪರಮೇಶ್ವರನು ಪಾರ್ವತಿಗೆ ಬ್ರಹ್ಮತತ್ತ್ವವನ್ನು ಗುರು ಗೀತೆಯ ಮೂಲಕ ಬೋಧಿಸಿದನು. ಗುರುಗೀತೆಯಲ್ಲಿ 'ಪಾರ್ವತಿ ಉವಾಚ' ಎಂಬ ಮಾತುಗಳಿಗೆ ಇದೇ ಅರ್ಥ. ಇದರ ಜೊತೆಗೆ ಈಶ್ವರನು ಪಾರ್ವತಿಗೆ ಯೋಗಶಾಸ್ತ್ರ ಹಾಗೂ ಮಂತ್ರಶಾಸ್ತ್ರಗಳಿಗೆ ದೀಕ್ಷೆ ಕೊಟ್ಟನು. ಯಾಜ್ಞವಲ್ಕ್ಯನು ಮೈತ್ರೇಯಿಗೆ ಇದೇ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನೆಂದು ಬೃಹದಾರಣ್ಯಕ ಉಪನಿಷತ್ತು ಉಲ್ಲೇಖಿಸುತ್ತದೆ. ಈಗ ನೀನೇ ತೀರ್ಮಾನಿಸಬಹುದು. ಮಹಿಳೆಯರಿಗೆ ಬ್ರಹ್ಮವಿದ್ಯೆಗೆ ಹಕ್ಕಿದೆಯೊ ಇಲ್ಲವೋ ಎಂಬುದನ್ನು.

**ಪ್ರಶ್ನೆ** : ಸ್ತ್ರೀಯರಿಗೆ ಬ್ರಹ್ಮಚರ್ಯ ಮತ್ತು ಸನ್ಯಾಸಗಳನ್ನು ಆಚರಿಸಲು ಅರ್ಹತೆಯಿಲ್ಲ ಎಂದು ಹೇಳುವ ಮತ್ತೆ ಕೆಲವರಿದ್ದಾರೆ. ನಿಜವೆ? ವೇದಗಳು ಅವುಗಳನ್ನು ಮಹಿಳೆಯರಿಗೆ ನಿಷೇಧಿಸುತ್ತವೆಯೆ?

**ಉತ್ತರ** : ವೇದಗಳಲ್ಲಿ ಎರಡು ವಿಭಾಗಗಳಿವೆ. ಕರ್ಮಕಾಂಡ ಮತ್ತು ಜ್ಞಾನಕಾಂಡ. ಕರ್ಮಕಾಂಡವು ಪ್ರಾರಂಭಿಗರಿಗೆ, ಇನ್ನೂ ವಿಕಾಸಗೊಳ್ಳದವರಿಗೆ. ಜ್ಞಾನ ಕಾಂಡವು ಪ್ರಗತಿ ಹೊಂದಿದವರಿಗೆ, ವಿಕಸಿತ ಬುದ್ಧಿಯುಳ್ಳವರಿಗೆ. ಇಲ್ಲಿ ಪುರುಷರು, ಮಹಿಳೆಯರೆಂಬ ಭೇದದ ಉಲ್ಲೇಖವಿಲ್ಲ. ಪ್ರಾರಂಭಿಗರು ಇನ್ನೂ ಪ್ರಾಪಂಚಿಕರಾಗಿರುತ್ತಾರೆ. ಅವರಿಗೆ ಜ್ಞಾನಕಾಂಡವು ಸಾರುವ ಆತ್ಮವನ್ನು ಕುರಿತ ಅಮರ ಸಂದೇಶವು ಹೇಗೆ ತಾನೆ ಅರ್ಥವಾಗಬೇಕು? ಬೃಹದಾರಣ್ಯಕದಲ್ಲಿ ಬ್ರಹ್ಮಚರ್ಯ ಮತ್ತು ಸನ್ಯಾಸಗಳ ಆಧ್ಯಾತ್ಮಿಕ ಕಾಂತಿ ಯನ್ನು ಹೊದ್ದು ಥಳಥಳಿಸುವ ಗಾರ್ಗಿ ಮತ್ತು ಮೈತ್ರೇಯಿಯರನ್ನು ನೋಡುತ್ತೇವೆ. ಮಹಾಭಾರತದಲ್ಲೂ ಶುಭಯೋಗಿನಿಯೇ ಮೊದಲಾದ ಸದ್ಗುಣ ಪರಿಪೂರ್ಣರಾದ ಮಹಿಳೆಯರನ್ನು ನಾವು ನೋಡುತ್ತೇವೆ.

**ಪ್ರಶ್ನೆ** : ಮಹಿಳೆಯರು ಗಾರ್ಹಸ್ಥ್ಯ ಜೀವನ ನಡೆಸುತ್ತಿರುವಂತೆಯೇ ಬ್ರಹ್ಮಜ್ಞಾನ ವನ್ನು ಗಳಿಸಬಲ್ಲರೆ?

**ಉತ್ತರ** : ಏಕಾಗಲಾರದು? ಮದಾಲಸೆ ಮತ್ತಿತರರು ಗೃಹಿಣಿಯರಾಗಿರುತ್ತಲೇ ಬ್ರಹ್ಮಜ್ಞಾನವನ್ನು ಪಡೆದರು. ಯೋಗವಾಸಿಷ್ಠದಲ್ಲೂ ಪುರಾಣಗಳಲ್ಲೂ ಇವರು ಹೇಗೆ ಪವಿತ್ರತೆಯ ಉತ್ತುಂಗ ಶಿಖರವಾಗಿ ಬ್ರಹ್ಮಜ್ಞಾನವನ್ನು ಸಾಧಿಸಿದರೆಂಬುದನ್ನು ಹೇಳಿದೆ. ಅಷ್ಟೇ ಅಲ್ಲ, ಕಾತ್ಯಾಯನಿ, ಸಾರಾಂಗಿ, ಸುಲಭಾ, ವಿಶ್ವವೇದಾ ಮೊದಲಾದವರು ಬ್ರಹ್ಮಜ್ಞಾನ ಪಡೆದಿದ್ದರೆಂದು ಉಪನಿಷತ್ತುಗಳು ಘೋಷಿಸುತ್ತವೆ.

**ಪ್ರಶ್ನೆ** : ಸ್ವಾಮಿ, ಗಾರ್ಹಸ್ಥ್ಯ ಹಂತದಲ್ಲಿ, ಸನ್ಯಾಸ ಹಂತದಲ್ಲಿ, ವಾನಪ್ರಸ್ಥ ಹಂತದಲ್ಲಿ, ಬ್ರಹ್ಮಚರ್ಯ ಹಂತದಲ್ಲಿ ಇರುವಾಗ ಬ್ರಹ್ಮಜ್ಞಾನವನ್ನು ಪಡೆದ ಮಹಿಳೆಯರಿದ್ದಾರೆಯೆ?

**ಉತ್ತರ** : ಈ ಆಶ್ರಮಗಳಲ್ಲಿರುತ್ತಾ ಬ್ರಹ್ಮಜ್ಞಾನ ಪಡೆದ ಸ್ತ್ರೀಯರಿಲ್ಲ ಎಂದು ಭಾವಿಸ ಬೇಡ. ಚೂಡಾಲಾ ಗೃಹಸ್ಥಳಾಗಿ ಅದನ್ನು ಸಾಧಿಸಿದಳು; ಸುಲಭ ಯೋಗಿನಿಯು ಸನ್ಯಾಸಿನಿಯಾಗಿ ಸಾಧಿಸಿದಳು; ಮೈತ್ರೇಯಿ ಅದನ್ನು ಪಡೆದದ್ದು ವಾನಪ್ರಸ್ಥ ಹಂತದಲ್ಲಿ; ಗಾರ್ಗಿ ಬ್ರಹ್ಮಚರ್ಯ ಹಂತದಲ್ಲೇ ಗಳಿಸಿದಳು. ಭಾರತದಲ್ಲಿ ಈ ಔನ್ನತ್ಯದ ಶಿಖರ ತಲುಪಿರುವ ಮಹಿಳೆ ಯರು ಇನ್ನೂ ಹಲವರಿದ್ದಾರೆ. ಅಷ್ಟೇಕೆ ಇಂದೂ ಈ ಪರಮೋನ್ನತ ಸ್ಥಾನ ವನ್ನು ಸಾಧಿಸಿರುವವರಿದ್ದಾರೆ. ಈಗ ಪ್ರಶ್ನೆಯನ್ನೆತ್ತಿದುದರಿಂದ ನಾಲ್ಕು ಹೆಸರುಗಳನ್ನು ಹೇಳಿದೆ ಅಷ್ಟೆ. ಆದ್ದರಿಂದ ಎಳ್ಳಷ್ಟೂ ಉತ್ಸಾಹ ಕುಂದ ಬೇಕಾಗಿಲ್ಲ, ಎದೆಗೆಡಬೇಕಾಗಿಲ್ಲ.

**ಪ್ರಶ್ನೆ** : ಬ್ರಹ್ಮಜ್ಞಾನವನ್ನು ಗಳಿಸಿರುವ ಮಹಿಳೆಯರ ಇಷ್ಟೊಂದು ನಿದರ್ಶನಗಳಿರುವಾಗ, ಅನೇಕರು ಅದರ ವಿರುದ್ಧವಾಗಿ ವಾದಿಸುವುದಾದರೂ ಏಕೆ? ಮಹಿಳೆಯರಿಗೆ ಅದನ್ನು ವಂಚಿಸಿ ಸೀಮಿತಗಳನ್ನು ವಿಧಿಸುವುದೇಕೆ?

**ಉತ್ತರ** : ಶುದ್ಧ ಅವಿವೇಕ. ಬ್ರಹ್ಮಜ್ಞಾನ ಸಂಪಾದನೆಯ ಹಕ್ಕನ್ನು ಮಹಿಳೆಯರಿಗೆ ವಂಚಿಸುವುದು ಶುದ್ಧ ಮೂರ್ಖತನ. ಆದರೆ ಪ್ರಾಪಂಚಿಕ ವಿಚಾರಗಳಲ್ಲಿ ಅವರು ಕೆಲವು ಮಿತಿಗಳನ್ನು ಗೌರವಿಸಿ ಪಾಲಿಸುವುದು ಅತ್ಯಗತ್ಯ. ಧರ್ಮ ಮತ್ತು ಲೋಕ ಕಲ್ಯಾಣದ ಹಿತಾಶಕ್ತಿಯಿಂದ ಮಾತ್ರವೇ ಅಂತಹ ಕೆಲವು ನಿಯಮಗಳನ್ನು ವಿಧಿಸಲಾಗಿದೆ. ಈ ಜಗತ್ತಿನಲ್ಲಿ ನೈತಿಕತೆಯನ್ನೂ ಸಾಮಾಜಿಕ ಆರೋಗ್ಯವನ್ನೂ ಕಾಪಾಡುವ ಸಲುವಾಗಿ ಸ್ತ್ರೀಯರು ಅವುಗಳಿಗೆ ಬದ್ಧರಾಗಲೇಬೇಕು. ಜೀವನದಲ್ಲಿ ಕೆಲವು ನಿಷ್ಠುರ ನಿಯಮಗಳನ್ನು ಸಂಯಮಗಳನ್ನು ಪಾಲಿಸುವುದು ದುರ್ಬಲರಾಗಿರುವ ಅವರಿಗೆ ಕಷ್ಟ. ಅವರಿಗೆ ನಿಸರ್ಗ ಸಹಜವಾದ ಕೆಲವು ದೌರ್ಬಲ್ಯಗಳಿವೆ. ಈ ಕಾರಣದಿಂದ ಹಾಗೆ ಹೇಳಿರುತ್ತಾರೆ ಅಷ್ಟೆ. ಇಷ್ಟರಿಂದ ಸ್ತ್ರೀವರ್ಗವು ಯಾವುದೇ ತೆರನಾದ ಕೀಳರಿಮೆಯನ್ನು ಅನುಭವಿಸಬೇಕಾಗಿಲ್ಲ. ಪಂಡಿತರಾಗಲಿ, ಶಾಸ್ತ್ರವೇತ್ತರಾಗಲಿ ಜ್ಞಾನ ಸಂಪಾದನೆ ಮಾಡುವುದು ಸ್ತ್ರೀದೇವತೆ ಸರಸ್ವತಿಗೆ ಪೂಜೆ ಸಲ್ಲಿಸಿ ಪ್ರಾರ್ಥಿಸಿದ ನಂತರವೇ. ವಿದ್ಯೆ, ಐಶ್ವರ್ಯ ಮತ್ತು ಜ್ಞಾನಗಳಿಗೆ ಆಧಿದೇವಿಯರು ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿಯರು. ಲೌಕಿಕ ವ್ಯವಹಾರದಲ್ಲೇ ಮಹಿಳೆಯರನ್ನು ಕುರಿತು, "ಲಕ್ಷ್ಮೀ ಸಮಾನರಾದ ...ಗೆ" ಎಂದು ಬರೆಯುತ್ತಾರೆ. ಮಾತಾಡುವಾಗ ಮಾತಾ ಪಿತಾ, ಗೌರೀ ಶಂಕರ, ಲಕ್ಷ್ಮೀ ನಾರಾಯಣ, ಸೀತಾ ರಾಮ, ರಾಧಾ ಕೃಷ್ಣ ಎಂದೇ ಹೇಳುತ್ತೀರಿ. ಸ್ತ್ರೀ ನಾಮವು ಮೊದಲು ಬರುತ್ತದೆ. ಆಮೇಲೆ ಪುರುಷ ನಾಮವು ಬರುತ್ತದೆ. ಇಷ್ಟರಿಂದಲೇ ನಮ್ಮ ದೇಶದಲ್ಲಿ ಮಹಿಳೆಯರಿಗೆ ಎಷ್ಟು ಗೌರವ ಸಲ್ಲುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದು.

**ಪ್ರಶ್ನೆ** : ಪುರುಷನಿಗೂ ಮಹಿಳೆಗೂ ನಡುವೆ ಭೇದವನ್ನು ಮಿಥ್ಯಾಜ್ಞಾನ ಎಂದು ತಿರಸ್ಕರಿಸುವಿರೋ ಆತ್ಮಜ್ಞಾನ ಎಂದು ಪುರಸ್ಕರಿಸುವಿರೋ?

**ಉತ್ತರ** : ಅಯ್ಯಾ, ಆತ್ಮಕ್ಕೆ ಅಂತಹ ಭೇದ ಇಲ್ಲವೇ ಇಲ್ಲ. ಅದು ಶಾಶ್ವತ ಪ್ರಜ್ಞೆ, ಪರಮ ಪರಿಶುದ್ಧ, ಸ್ವಯಂಪ್ರಕಾಶವುಳ್ಳದ್ದು. ಆದ್ದರಿಂದ ನೀನು ಹೇಳುವ ಭೇದವು ಕೇವಲ ಮಿಥ್ಯಾಜ್ಞಾನ, ಅದೆಂದಿಗೂ ಆತ್ಮಜ್ಞಾನವಾಗಲಾರದು. ಅದು ಸೀಮಿತತೆಯ ಮುಸುಕೆಂಬ ಉಪಾಧಿಯನ್ನು ಅವಲಂಬಿಸಿದ ಭೇದ. ಆತ್ಮವು ಪುಲ್ಲಿಂಗವೂ ಅಲ್ಲ, ಸ್ತ್ರೀಲಿಂಗವೂ ಅಲ್ಲ, ನಪುಂಸಕ ಲಿಂಗವೂ ಅಲ್ಲ. ಮಿತಿಯನ್ನು ಹಾಕಿ, ಭ್ರಮೆಗೊಳಪಡಿಸಿ, ಹೆಸರುಗಳನ್ನು ಪಡೆಯುವುದು ರೂಪ ಮಾತ್ರ.

# ೧೧ ಆಶ್ರಮಗಳು ಮತ್ತು ವರ್ಣಗಳು

**ಪ್ರಶ್ನೆ** : ಸ್ವಾಮಿ! ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಆಶ್ರಮಗಳಲ್ಲಿ ಮೂಲತಃ ಮುಖ್ಯವಾದದ್ದು ಯಾವುದು?

**ಉತ್ತರ** : ಎಲ್ಲ ಜೀವಂತ ವಸ್ತುಗಳೂ ಹೇಗೆ ಪ್ರಾಣವಾಯುವನ್ನು ಅವಲಂಬಿಸಿವೆಯೋ ಹಾಗೆಯೇ ಎಲ್ಲ ಆಶ್ರಮಗಳೂ ಗೃಹಸ್ಥಾಶ್ರಮವನ್ನು ಅವಲಂಬಿಸಿವೆ. ಮಿಕ್ಕ ಎಲ್ಲರಿಗೂ ಅನ್ನಪಾನಗಳನ್ನು ನೀಡಿ ರಕ್ಷಿಸುವವನು ಅವನು. ವೇದಾಧ್ಯಯನಕ್ಕೆ ಪೋಷಣೆ ಕೊಡುತ್ತಾನೆ; ಶಾಸ್ತ್ರಗಳನ್ನು ಕಾಪಾಡುತ್ತಾನೆ. ಆದ್ದರಿಂದ ಗೃಹಸ್ಥಾಶ್ರಮವೇ ತುಂಬ ಮುಖ್ಯವಾದದ್ದು. ನಾರದ ಪರಿವ್ರಾಜಕೋಪನಿಷತ್ತು ಮತ್ತು ಮನು ಧರ್ಮಶಾಸ್ತ್ರಗಳಲ್ಲಿ ತನ್ನ ಆಶ್ರಮಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುವ ಗೃಹಸ್ಥನಿಗೆ ಅತಿ ಹೆಚ್ಚಿನ ಗೌರವ ಮತ್ತು ಮರ್ಯಾದೆ ಸಲ್ಲಿಸಬೇಕು ಎಂದು ಹೇಳಿದೆ.

**ಪ್ರಶ್ನೆ** : ಆದರೆ ಸ್ವಾಮಿ! ಕೆಲವರು ಗೃಹಸ್ಥನಿಗಿಂತ ಸನ್ಯಾಸಿಯು ಮೇಲ್ಮಟ್ಟದವನು ಎಂದು ಹೇಳುತ್ತಾರಲ್ಲ, ಅದು ಎಷ್ಟು ಮಟ್ಟಿಗೆ ನಿಜ?

**ಉತ್ತರ** : ಆಶ್ರಮವು ಯಾವುದೇ ಇರಲಿ, ಅದಕ್ಕೆ ವಿಧಿಸಲಾಗಿರುವ ಧರ್ಮವನ್ನು ಅತ್ಯಂತ ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತಂದಿದ್ದು, ಮೋಕ್ಷಕ್ಕಾಗಿ ಹಂಬಲಿಸುತ್ತಿದ್ದರೆ, ವ್ಯಕ್ತಿಗೆ ಅದು ಲಭಿಸಿಯೇ ತೀರುತ್ತದೆ. ಇದರಲ್ಲಿ ಯಾವ ಸಂದೇಹವೂ ಇಲ್ಲ. ಆತ್ಮಜ್ಞಾನವನ್ನು ಪಡೆಯಲು ಆಶ್ರಮವನ್ನು ಆದ್ಯತೆಯ ಮೇರೆಗೆ ಆರಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಎಲ್ಲ ಆಶ್ರಮಗಳಿಗೂ ಅದನ್ನು ಸಾಧಿಸಿಕೊಡುವ ಸಾಮರ್ಥ್ಯವಿದೆ. ಇಲ್ಲಿ ಮೇಲು ಕೀಳು ಎಂಬ ವಿಚಾರವೇ ಇಲ್ಲ. ನಡವಳಿಕೆಗೆ ಬೇಕಾದರೆ ಮೇಲ್ಮಟ್ಟ ಕೆಳಮಟ್ಟ ಎಂದು ಪಟ್ಟಿ ಅಂಟಿಸಬಹುದು.

**ಪ್ರಶ್ನೆ** : ಸ್ವಾಮಿ ಗೃಹಸ್ಥಧರ್ಮವು ವ್ಯಕ್ತಿಯನ್ನು ಕಟ್ಟಿಹಾಕುತ್ತದೆ, ಬ್ರಹ್ಮಚರ್ಯ ಮತ್ತು ಸನ್ಯಾಸಗಳು ಬಂಧವಿಮುಕ್ತಗೊಳಿಸುತ್ತವೆ ಎಂದು ಹೇಳುತ್ತಾರಲ್ಲ, ಈ ಅಭಿಪ್ರಾಯ ಹೇಗೆ ಹುಟ್ಟಿತು?

**ಉತ್ತರ** : ನಾನು ಆ ಮಾತನ್ನು ಒಪ್ಪುವುದಿಲ್ಲ, ಧರ್ಮಯುತವಾದ ರೀತಿಯಲ್ಲಿ ಧನ ಸಂಪಾದನೆ ಮಾಡುವವನು, ತನ್ನ ಅತಿಥಿಗಳನ್ನು ವಿಹಿತವಾಗಿ ಗೌರವಿಸುವವನು, ತನ್ನ ಸಹವರ್ತಿಗಳನ್ನು ಸಂತೋಷಪಡಿಸಿ ಅವರಿಗೆ ಸೇವೆ ಸಲ್ಲಿಸುವವನು ಶಾಸ್ತ್ರದಲ್ಲಿ ಪರಿಣತರಾದವರು ಪಡೆಯುವ ರೀತಿಯಲ್ಲೇ ಮೋಕ್ಷವನ್ನು ಪಡೆಯುತ್ತಾನೆ. ಒಬ್ಬ ವ್ಯಕ್ತಿಯು ಸನ್ಯಾಸಿಯೋ

ಬ್ರಹ್ಮಚಾರಿಯೋ ಆಗಿದ್ದಾನೆಂದ ಮಾತ್ರದಿಂದ ಹುಟ್ಟುಸಾವುಗಳ ಈ ಸಾಗರವನ್ನು ದಾಟಲು ಸಾಧ್ಯವಿಲ್ಲ, ಉನ್ನತ ಕುಲ, ತಪಸ್ಸಿನಲ್ಲಿ ಸಾಧನೆ, ಸನ್ಯಾಸಿಯ ಸ್ಥಾನಮಾನ, ಅಪಾರ ವಿದ್ವತ್ತು—ಈ ಯಾವುದೂ ತನಗೆ ತಾನೆ ಸಹಾಯಕವಾಗುವುದಿಲ್ಲ. ಇವುಗಳ ಜೊತೆಗೆ ಪ್ರಾಮಾಣಿಕವಾಗಿ ಸ್ವಧರ್ಮಪಾಲನೆ ಮಾಡುತ್ತಿರಬೇಕು, ವೇದ ಭಗವದ್ಗೀತೆ ಮೊದಲಾದ ಶಾಸ್ತ್ರಗ್ರಂಥಗಳ ಅಧ್ಯಯನ ಮಾಡುತ್ತಿರಬೇಕು, ಜಪ ಧ್ಯಾನಗಳಿಂದ ಕೂಡಿದ ಶಿಸ್ತುಬದ್ಧ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿರಬೇಕು.

**ಪ್ರಶ್ನೆ** : ಸ್ವಾಮಿ! ಈ ನಾಲ್ಕೂ ಆಶ್ರಮಗಳಲ್ಲಿರುವ ವ್ಯಕ್ತಿಗಳು ಉದ್ಧಾರವಾಗಬೇಕಾದರೆ ಯಾವ ಗುಣಗಳನ್ನು ಬೆಳೆಸಿಕೊಳ್ಳಬೇಕು?

**ಉತ್ತರ** : ಮುಮುಕ್ಷುಗಳು ಪಾಲಿಸಬೇಕಾದ ಧರ್ಮಾಚರಣೆಗೆ ಸಂಬಂಧಿಸಿದಂತೆ ಹತ್ತು ಗುಣಗಳಿವೆ: ದಯೆ, ಅಸ್ತೇಯ, ಧೀ, ವಿದ್ಯೆ, ಸತ್ಯ, ಇಂದ್ರಿಯ ನಿಗ್ರಹ, ಶೌಚ, ಕ್ಷಮೆ, ಧೃತಿ ಮತ್ತು ಅಕ್ರೋಧ. ಎಲ್ಲ ವ್ಯಕ್ತಿಗಳೂ ಅವರ ಆಶ್ರಮ ಯಾವುದೇ ಇರಲಿ, ಪಾಲಿಸಬೇಕಾದ ಹತ್ತು ಗುಣಗಳು ಇವು. ನೀನು ಎಲ್ಲೇ ಇದ್ದರೂ ನಿನ್ನನ್ನು ರಕ್ಷಿಸಲು ಇವಿಷ್ಟು ಸಾಕು. ಇವುಗಳನ್ನು ಸಾಧಿಸಿಲ್ಲದೆ ಹೋದರೆ, ಯಾವುದೇ ಆಶ್ರಮವಾಗಿರಲಿ, ವ್ಯಕ್ತಿಯ ಬದುಕು ಕೇವಲ ವ್ಯರ್ಥ. ಅವನ ಬದುಕಿನ ದೈನಂದಿನ ಚಟುವಟಿಕೆ ಅತ್ಯಂತ ಮಹತ್ವದ್ದು, ಅದರಲ್ಲಿ ಈ ಹತ್ತು ಗುಣಗಳು ಪ್ರತಿಫಲಿತವಾಗಬೇಕು. ಅರ್ಜುನನು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಾಗ ಕೃಷ್ಣನು ಹೇಳಿದ್ದು ಇದನ್ನೇ.

**ಪ್ರಶ್ನೆ** : ಸ್ವಾಮಿ, ಹತ್ತು ನಿಯಮಗಳೊಂದಿಗಿನ ನಿತ್ಯಕರ್ಮದ ಮಹತ್ವವನ್ನು ಕುರಿತು ಅರ್ಜುನನು ಕೇಳಿದನೆಂದಿರಿ. ಅದಕ್ಕೆ ಕೃಷ್ಣನು ನೀಡಿದ ಉತ್ತರ ವೇನು?

**ಉತ್ತರ** : ಕೃಷ್ಣನು ಹೇಳಿದನು: ಜ್ಞಾನಯೋಗದಲ್ಲಿ ಪರಿಣತರಾದ ಸಾಂಖ್ಯಯೋಗಿಗಳು ಪಡೆಯುವ ಮೋಕ್ಷವನ್ನೇ ನಿಷ್ಕಾಮಕರ್ಮಯೋಗದಲ್ಲಿ ಕುಶಲರಾದವರೂ ಪಡೆಯುತ್ತಾರೆ. ಎರಡೂ ಒಂದೇ ಫಲಿತವನ್ನು ನೀಡುತ್ತವೆ. ಇದು ಸತ್ಯವೆಂದು ತಿಳಿ. ಈ ವಿಷಯದಲ್ಲಿ ಗೃಹಸ್ಥನಿಗೂ ಸನ್ಯಾಸಿಗೂ ಯಾವ ಭೇದವೂ ಇಲ್ಲ. ಇಲ್ಲಿ ಅಗತ್ಯವಾಗಿರುವುದು ಅವಿರತ ಆಚರಣೆ ಮತ್ತು ಪ್ರಾಮಾಣಿಕ ಪರಿಶ್ರಮ. ಇದಕ್ಕೆ ಆಸೆಯನ್ನು ಕಳೆದುಕೊಳ್ಳಬೇಕು. ಅಹಂಕಾರದ ತ್ಯಾಗ, ತನಗೆ ಸೇರಿದ್ದು ಎನ್ನುವ ಪ್ರಜ್ಞೆಯ ತ್ಯಾಗ, ಕೊನೆಗೆ ಸಕ್ರಿಯ ಆಲೋಚನೆಯ ತ್ಯಾಗ ಬೇಕು. ಬ್ರಹ್ಮತತ್ವವನ್ನು ಕುರಿತು ಏಕಾಗ್ರತೆಯಿಂದ ಧ್ಯಾನ ಮಾಡಬೇಕು. ಇದನ್ನು ಸಾಧಿಸಿದವನಿಗೆ ದುಃಖವೆಂಬುದೇ ಇಲ್ಲ. ಏಕೆಂದರೆ ಅಲ್ಲಿ ಅಜ್ಞಾನದ ನೆರಳು ಮುಸುಕಿರುವುದಿಲ್ಲ.

ಈ ಉನ್ನತಿಯನ್ನು ಗಳಿಸಿರುವ ಜ್ಞಾನಿಯನ್ನು ಮಿಥ್ಯೆಯೂ ಅಶಾಶ್ವತವೂ ಭ್ರಮೆಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಕೊನೆಗೆ ಬದುಕಿನ ಕೊನೆಯ ಕ್ಷಣದಲ್ಲಾದರೂ ಈ ಜ್ಞಾನವನ್ನು ಗಳಿಸಿಕೊಳ್ಳಲು ವ್ಯಕ್ತಿಗೆ ಸಾಧ್ಯವಾದರೆ ಅವನು ಜನನ ಮರಣಗಳ ಚಕ್ರದಿಂದ ವಿಮೋಚನೆ ಹೊಂದುವುದು ಖಂಡಿತ.

**ಪ್ರಶ್ನೆ** : ಹಾಗಾದರೆ ಈ ಜಾತಿಗಳನ್ನು, ವರ್ಣಗಳನ್ನು ಏಕೆ ರೂಪಿಸಿದರು?

**ಉತ್ತರ** : ಅವು ಮನುಷ್ಯನ ದೈಹಿಕ ನೆಲೆಗೆ ಅನ್ವಯಿಸುತ್ತವೆ, ಆಧ್ಯಾತ್ಮಿಕ ನೆಲೆಯ ಮೇಲೆ ಅವು ಯಾವುದೇ ದುಷ್ಪರಿಣಾಮ ಬೀರುವುದಿಲ್ಲ. ಅವು ದೈಹಿಕ ರಚನೆಯನ್ನು ಸೂಚಿಸುತ್ತವೆ. ದೈಹಿಕ ಎಂದಾಗ ಬುದ್ಧಿ, ಮನಸ್ಸು, ಚಿತ್ತ, ಅಂತಃಕರಣಗಳೂ ಸೇರುತ್ತವೆ. ಇವಕ್ಕೆ ಸರಿಯಾದ ತರಬೇತಿ ಕೊಟ್ಟು ನಿಯಂತ್ರಿಸದೆ ಹೋದ ಪಕ್ಷದಲ್ಲಿ ಆತ್ಮಧರ್ಮವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಜಾತಿ, ಮತ, ಧರ್ಮಗಳೆಲ್ಲವೂ ಮಾನವನ ಸಹಜ ಪ್ರವೃತ್ತಿಗಳನ್ನು ಮತ್ತು ಆವೇಗಗಳನ್ನು ನಿಯಂತ್ರಿಸಿ, ಸಂಸ್ಕರಿಸುವುದಕ್ಕೆ ಸಹಾಯ ಮಾಡುತ್ತವೆ. ಜ್ಞಾನಿಗಳು ಅವುಗಳನ್ನು ಒಪ್ಪಿಕೊಂಡು ಗೌರವಿಸಿದಕ್ಕೆ ಇದೇ ಕಾರಣ. ಸತ್, ಚಿತ್, ಆನಂದಗಳು ಆತ್ಮದ ಸ್ವರೂಪ, ಆತ್ಮವನ್ನು ಹೇಗಾದರೂ ಸೂಚಿಸಲೇಬೇಕು ಎನ್ನುವುದಾದರೆ. ಅದನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಹೃದಯ, ಮನಸ್ಸು ಮತ್ತು ಬುದ್ಧಿ, ಇವನ್ನು ಪರಿಶುದ್ಧಗೊಳಿಸಿಕೊಂಡರೆ ಮಾತ್ರ ಸಾಧ್ಯ. ಇಂತಹ ಪರಿಶುದ್ಧಿ ಯಾರಿಗಿದೆಯೋ ಅವರು, ವರ್ಣ ಅಥವಾ ಆಶ್ರಮ ಯಾವುದೇ ಇರಲಿ, ಮೋಕ್ಷವನ್ನು ಪಡೆಯಬಹುದು, ಹಾಗೆಂದೇ ಶಾಸ್ತ್ರಗಳು ಘೋಷಿಸಿವೆ. ವ್ಯಕ್ತಿಯು ಕೆಲವರ ವಿಷಯದಲ್ಲಿ ಮೋಹ ಬೆಳೆಸಿಕೊಂಡು ಮತ್ತೆ ಕೆಲವರ ವಿಷಯದಲ್ಲಿ ದ್ವೇಷ ಬೆಳೆಸಿಕೊಂಡರೆ, ಅವನು ಅರಣ್ಯದ ಏಕಾಂತದಲ್ಲೇ ಇದ್ದರೂ ಅವನಿಗೆ ಅದರಿಂದ ಕೆಡುಕೇ ಸರಿ. ಸಂಸಾರದ ನಡುವೆ ಇದ್ದುಕೊಂಡು ಗೃಹಸ್ಥ ಜೀವನವನ್ನು ನಡೆಸುತ್ತಿದ್ದರೂ ಇಂದ್ರಿಯಗಳ ಮೇಲೆ ವಿಜಯ ಸಾಧಿಸಿದ್ದ ಪಕ್ಷದಲ್ಲಿ ಅವನು ನಿಜವಾದ ತಪಸ್ವಿ. ಸತ್ಕರ್ಮದಲ್ಲಿಯೇ ನಿರತನಾಗಿರುತ್ತಾ ಅವನು ಜ್ಞಾನಿಯಾಗಲು ತಕ್ಕ ಅರ್ಹತೆ ಸಂಪಾದಿಸಿರುತ್ತಾನೆ. ಅನಾಸಕ್ತನಾದವನಿಗೆ ಮನೆಯೇ ಒಂದು ಋಷ್ಯಾಶ್ರಮ. ಸತ್ಸಂತಾನ, ಸತ್ಕರ್ಮ, ಸಂಪತ್ತು, ಯಜ್ಞಯಾಗಾದಿ ಕರ್ಮಗಳು ಇವುಗಳ ಮೂಲಕವಾಗಿಯೂ ಮೋಕ್ಷವನ್ನು ಗಳಿಸಬಹುದು. ಮೋಕ್ಷಕ್ಕೆ ಅಗತ್ಯವಾಗಿರುವುದು ಮೋಹವೆಂಬ ಕಶ್ಮಲದಿಂದ ಬಿಡುಗಡೆ. ಮೋಹವೇ ಬಂಧನ.

# ೧೨ ಶಾಸ್ತ್ರಗಳು ಮತ್ತು ಸನ್ಯಾಸ

**ಪ್ರಶ್ನೆ** : ಸ್ವಾಮಿ ಅ ವ್ಯಕ್ತಿಯು ಕೆಲವು ಕೆಲಸಗಳನ್ನು ಮಾಡಬೇಕು ಎಂದು ಹೇಳುತ್ತೀರಿ. ಕೆಲವು ಕೆಲಸಗಳನ್ನು ಮಾಡಕೂಡದು ಎಂದು ಹೇಳುತ್ತೀರಿ. ಯಾವ ಕೆಲಸ ಹೇಗೆ ಅನ್ನುವುದು ನಮಗೆ ಹೇಗೆ ತಿಳಿಯಬೇಕು, ಅದಕ್ಕೆ ಆಧಾರವೇನು?

**ಉತ್ತರ** : ಶಾಸ್ತ್ರಗಳೇ ಆಧಾರ. ಉದಾಹರಣೆಗೆ ಮನಸ್ಮೃತಿಯು ಘೋಷಿಸುತ್ತದೆ, ವರ್ಣಾಶ್ರಮಗಳು ದೇಹಪರಿಶುದ್ಧಿಗಾಗಿಯೇ ವಿನಾ ಪರತತ್ವವನ್ನು ಗಳಿಸುವುದರ ಅಥವಾ ಬಿಡುವುದರ ಮೇಲೆ ಪರಿಣಾಮ ಬೀರುವುದಿಲ್ಲ.

**ಪ್ರಶ್ನೆ** : ಹಾಗಿದ್ದರೆ ಈ ವರ್ಣಗಳ ಮತ್ತು ಆಶ್ರಮಗಳ ಗೊಂದಲ ತಾನೆ ಏಕೆ? ಅವು ನಿಯಂತ್ರಿಸುವ ನಿಯಮ ನಿಬಂಧನೆಗಳೇಕೆ?

**ಉತ್ತರ** : ಆಹ್! ಮೋಹದಿಂದ ಅಥವಾ ರಾಗದಿಂದ ನೀನು ಬಿಡುಗಡೆ ಹೊಂದದಿರುವವರೆಗೂ ಅವು ಅತ್ಯಗತ್ಯ. ಅಲ್ಲಿಯವರೆಗೂ ಮತ್ತು ಅದಕ್ಕಾಗಿ ನಿಯಮಗಳು, ನಿಬಂಧನೆಗಳು, ಮಿತಿಗಳನ್ನು ಅಕ್ಷರಶಃ ಪಾಲಿಸಲೇಬೇಕು. ಕಾಯಿಲೆ ಇರುವವರೆಗೂ ಔಷಧವನ್ನು ಸೇವಿಸುತ್ತಲೇ ಇರಬೇಕು. ಪ್ರತಿಯೊಂದು ಬಗೆಯ ಕಾಯಿಲೆಗೂ ಪರಿಹಾರವಾಗಿ ವಿಶಿಷ್ಟವಾದ ಔಷಧಿಯಿದೆ, ಅಲ್ಲವೆ? ಹಾಗೆಯೇ ಬೇರೆ ಬೇರೆ ತೆರನಾದ ಪಥ್ಯವಿದೆ, ಅನುಪಾನವಿದೆ. ಕಾಯಿಲೆ ವಾಸಿಯಾದ ಮೇಲೆ ವ್ಯಕ್ತಿಯು ಇತರರೊಂದಿಗೆ, ಅವರಂತೆಯೇ ಔತಣದೂಟವನ್ನು ಮಾಡಲು ಅಡ್ಡಿಯಿಲ್ಲ. ಇದನ್ನು ಒಪ್ಪಿಕೊಳ್ಳದೆ ಆರೋಗ್ಯವಾಗಿರುವವನೂ ಅನಾರೋಗ್ಯಪೀಡಿತನೂ ಒಂದೇ ಔತಣದೂಟವನ್ನು ಬಯಸಿದರೆ ಪರಿಣಾಮ ಹಾನಿಕರವಾಗುತ್ತದಷ್ಟೆ. ವರ್ಣಗಳು ಮತ್ತು ಆಶ್ರಮಗಳು ಭವರೋಗ, ಪ್ರಾಪಂಚಿಕತೆ ಮತ್ತು ಲೌಕಿಕ ಮೋಹ ಎಂಬ ರೋಗದಿಂದ ಬಳಲುತ್ತಿರುವವರಿಗೆ ವಿಧಿಸಲಾಗಿರುವ ಔಷಧಿಗಳು. ರಾಗವೇ (ಮೋಹ) ರೋಗ, ಚಿಕಿತ್ಸೆಯನ್ನು ಕಟ್ಟುನಿಟ್ಟಾಗಿ ಮಾಡಿದರೆ ಮಾತ್ರ ರೋಗವು ಮಾಯವಾಗುತ್ತದೆ. ಆರೋಗ್ಯವಂತನಾದ ಹೊರತು ಬಿಡುಗಡೆ ಸಾಧ್ಯವಾಗುವುದಿಲ್ಲ. ವೇದಾಂತದ ನಿಜವಾದ ಅರ್ಥ ಇದೇಯೆ. ಇದನ್ನು ತಿಳಿದುಕೊಂಡವನು, ಅವನ ಆಶ್ರಮ ಯಾವುದೇ ಇರಲಿ, ಮುಕ್ತಿಯನ್ನು ಪಡೆಯುತ್ತಾನೆ.

**ಪ್ರಶ್ನೆ** : ಸ್ವಾಮಿ! ಗೃಹಸ್ಥ ಆಶ್ರಮದಲ್ಲಿರುವಾಗಲೆ ಹೀಗೆ ಮೋಕ್ಷವನ್ನು ಸಾಧಿಸಿದ ಮಹಾಪುರುಷರಿದ್ದಾರೆಯೆ?

**ಉತ್ತರ** : ಜನಕ, ಅಶ್ವಪತಿ, ದಿಲೀಪ—ಇವರು ಗಾರ್ಹಸ್ಥ್ಯದಲ್ಲೇ ಮುಕ್ತಿ ಸಾಧಿಸಿದವರು.

**ಪ್ರಶ್ನೆ** : ಸ್ವಾಮಿ! ಮನುಷ್ಯನು ಬ್ರಹ್ಮಚರ್ಯ ಹಂತವನ್ನು ಮುಗಿಸಿದ ಮೇಲೆ ಗೃಹಸ್ಥ ಧರ್ಮವನ್ನಾಚರಿಸಿ, ಅನಂತರ ವಾನಪ್ರಸ್ಥನಾಗಿ ಅದಕ್ಕೆ ಸಂಬಂಧಿಸಿದ ಕಟ್ಟುಪಾಡುಗಳನ್ನೂ, ನಿಯಮ ನಿಬಂಧನೆಗಳನ್ನೂ ಪಾಲಿಸಿ ಆಮೇಲೆ ಮಾತ್ರವೆ ಅಂತಿಮವಾಗಿ ಪೂರ್ಣ ವಿರಕ್ತಿಯ ಸನ್ಯಾಸ ಆಶ್ರಮವನ್ನು ಕೈಗೊಳ್ಳಬೇಕು ಎಂದು ಶ್ರುತಿಯು ವಿಧಿಸುತ್ತದಷ್ಟೆ. ಅದನ್ನು ಕಡ್ಡಾಯವಾಗಿ ಪಾಲಿಸದೆ, ಇತರ ಹಂತಗಳನ್ನು ಆಚರಿಸದೆಯೇ ನೇರವಾಗಿ ಸನ್ಯಾಸವನ್ನು ಸ್ವೀಕರಿಸಬಹುದೇ?

**ಉತ್ತರ** : ಹೌದು. ವಸ್ತುಗಳ ಬಗೆಗೆ ಅಲಿಪ್ತತೆ, ನಿರ್ಮೋಹತೆಗಳುಂಟಾದಾಗ ಅವನು ಸನ್ಯಾಸವನ್ನು ತೆಗೆದುಕೊಳ್ಳಬಹುದು. ಅಂಥದೊಂದು ಅವಕಾಶ ದೊರೆತಾಗ, ಅದನ್ನು ಉಪಯೋಗಿಸಿಕೊಳ್ಳದೆ ಹೋದರೆ ಅವನು ಅವನತಿ ಹೊಂದುತ್ತಾನೆ. ನೀನಿರುವ ನೆಲೆ ಅಥವಾ ಆಶ್ರಮ ಯಾವುದೇ ಇರಲಿ, ಪೂರ್ಣ ವಿರಕ್ತಿಯುಂಟಾದಾಗ ಆ ಕ್ಷಣದಿಂದಲೇ ಸನ್ಯಾಸದ ಹಂತಕ್ಕೆ ಏರಬಹುದು. ಅದಕ್ಕಿಂತ ಹಿಂದಿನ ಮೂರೂ ಆಶ್ರಮಗಳನ್ನು ಅನುಸರಿಸಿರಲೇಬೇಕೆಂಬ ಕಡ್ಡಾಯದ ನಿಯಮವೇನಿಲ್ಲ. ಇದೂ ಶ್ರುತಿ ವಿಧಿಸಿರುವ ಆದೇಶವೇ. ಅದಕ್ಕೆ ಕಾರಣವಿದೆ. ಅಂತಹ ಪರಿಶುದ್ಧಾತ್ಮವು ಇತರ ಆಶ್ರಮಗಳ ಶುದ್ಧೀಕರಣ ಕ್ರಿಯೆಗೆ ಹಿಂದಿನ ಜನ್ಮಗಳ ಜೀವನವೆಂಬ ಮೂಸೆಯಲ್ಲಿ ಒಳಗಾಗಿರುತ್ತದೆ. ವಿನಾಶಕಾರಕ ಪ್ರವೃತ್ತಿಗಳೆಲ್ಲ ಬೇರು ಸಹಿತ ಹೋಗಿರುತ್ತವೆ, ಪ್ರಗತಿಪರವಾದ, ಉದ್ಧಾರಕವಾದ ಪ್ರವೃತ್ತಿಗಳು ಹಿಂದಿನ ಜನ್ಮಗಳಲ್ಲೇ ವಿಕಾಸಗೊಂಡಿರುತ್ತವೆ.

**ಪ್ರಶ್ನೆ** : ಅಂತಹ ಪರಿವರ್ತನೆಯು ಹಿಂದಿನ ಜನ್ಮಗಳಲ್ಲಿಯೇ ಆಗಿದೆ ಎಂದು ನಾವು ತಿಳಿದುಕೊಳ್ಳುವುದು ಹೇಗೆ? ಇಂತಿಂಥ ಆಶ್ರಮವನ್ನು ದಾಟಿಕೊಂಡು ಮುಂದಕ್ಕೆ ಹೋಗಬಹುದು ಎಂದು ತಿಳಿದುಕೊಳ್ಳಲು ಏನಾದರೂ ಕುರುಹುಗಳಿವೆಯೆ? ಇದ್ದರೆ ದಯವಿಟ್ಟು ಹೇಳಿ.

**ಉತ್ತರ** : ಆ ಮೂರು ಆಶ್ರಮಗಳ ಬಗೆಗೆ ವ್ಯಕ್ತಿಗೆ ಒಲವಿಲ್ಲ, ಆಕರ್ಷಣೆಯಿಲ್ಲ ಎನ್ನುವುದೇ ಸ್ಪಷ್ಟವಾದ ಕುರುಹು. ಹಿಂದಿನ ಜನ್ಮದಲ್ಲಿ ವೈರಾಗ್ಯ ವಿಕಾಸಗೊಂಡಿದ್ದರೆ ಈಗ ಆ ಆಶ್ರಮಗಳ ಕಡೆಗೆ ಒಲವು ಇರುವುದಿಲ್ಲ. ಆತ್ಮವೊಂದೇ ಸತ್ಯ ಎಂಬ ತಿಳಿವು ಉದಯಿಸಿರುವುದರಿಂದ ಬದುಕಿನ ಮೊದಲ ಹಂತಗಳ ಕಡೆಗೆ ಅವನು ಅನಾಸಕ್ತ. ವೈರಾಗ್ಯವು ಕಾಣಿಸಿಕೊಂಡಾಗ ಕ್ರಮ ಪದ್ಧತಿ ಬಿಟ್ಟು ಸನ್ಯಾಸ ತೆಗೆದುಕೊಳ್ಳಬಹುದು. ಇದನ್ನು ಶ್ರುತಿಯೂ ಅಂಗೀಕರಿಸಿದೆ. ಆದರೆ ಅವನಿಗೆ ಸನ್ಯಾಸ ದೀಕ್ಷೆ ನೀಡುವವನು

ಅವನನ್ನು ಪೂರ್ತಿಯಾಗಿ ಪರೀಕ್ಷೆಮಾಡಿ, ಸನ್ಯಾಸ ಪಡೆಯಲಿರುವ ಈ ವ್ಯಕ್ತಿಯು ಐಂದ್ರಿಯ ಪ್ರವೃತ್ತಿಗಳಿಂದಲೂ ಮೋಹಗಳಿಂದಲೂ ವಿರಹಿತನಾಗಿದ್ದಾನೆ ಎಂದು ಮೊದಲು ಮನವರಿಕೆ ಮಾಡಿಕೊಳ್ಳಬೇಕು. ಮನಸ್ಸಿನ ಚಂಚಲತೆಗಳು ಅಥವಾ ವೃತ್ತಿಗಳು ಇಲ್ಲದವರಿಗೆ ಸನ್ಯಾಸ ನೀಡಬೇಕು. ಅಂಥವನು ಮಾತ್ರ ಅನಾಸಕ್ತಿಯನ್ನು ಸಾಧಿಸಿರುತ್ತಾನೆ. ಶಿಷ್ಯನೂ ಅಭ್ಯರ್ಥಿಯೂ ತನ್ನನ್ನು ಚೆನ್ನಾಗಿ ಪರೀಕ್ಷೆ ಮಾಡಿಕೊಳ್ಳಬೇಕು. ತನ್ನ ಅಂತಃಕರಣ ಸ್ಥಿತಿಯನ್ನು, ವಾಸನಾಗುಣಗಳು ನಶಿಸಿದೆಯೆ ಇಲ್ಲವೆ ಎಂದು ಪರೀಕ್ಷಿಸಿಕೊಳ್ಳಬೇಕು. ಹಾಗೆ ವಿಮುಕ್ತನಾಗಿರದಿದ್ದರೆ ಅವನು ಸನ್ಯಾಸದ ನಿಯಮಗಳನ್ನು ಭಂಗಪಡಿಸಿ ಭ್ರಷ್ಟನಾಗುತ್ತಾನೆ, ಇಲ್ಲವೆ ಹಾನಿಕರ ಅಂತ್ಯವನ್ನಪ್ಪುತ್ತಾನೆ.

**ಪ್ರಶ್ನೆ** : ಸನ್ಯಾಸವು ಒಂದೇಯೋ ಅಥವಾ ಹಲವು ಬಗೆಯಾಗಿದೆಯೊ?

**ಉತ್ತರ** : ಸನ್ಯಾಸದ ಮೂರು ಬಗೆಗಳಿವೆ—ದೇಹ ಸನ್ಯಾಸ, ಮನೋ ಸನ್ಯಾಸ ಮತ್ತು ಆತ್ಮ ಸನ್ಯಾಸ.

**ಪ್ರಶ್ನೆ** : ದೇಹ ಸನ್ಯಾಸ ಎಂದರೇನು?

**ಉತ್ತರ** : ಹೊರಲಕ್ಷಣದಲ್ಲಿ, ಹೊರಗಿನ ದೇಹಕ್ಕೆ ಸಂಬಂಧಿಸಿದಂತೆ ಸನ್ಯಾಸ. ಅವನು ಕಾವಿ ಬಟ್ಟೆ ಧರಿಸುತ್ತಾನೆ, ಸನ್ಯಾಸಿ ಎಂಬ ಹೆಸರಿಟ್ಟುಕೊಳ್ಳುತ್ತಾನೆ, ಹಾಗೆಯೇ ಕಾಣಿಸುತ್ತಾನೆ. ಆದರೆ ಅವನಿಗೆ ಆತ್ಮನ ಅರಿವಾಗಿರುವುದಿಲ್ಲ. ಬಾಹ್ಯ ವಸ್ತುಗಳಿಗೆ ಅಂಟಿಕೊಂಡ ಆಸೆ ಆಕಾಂಕ್ಷೆಗಳ ವಲಯದಲ್ಲೇ ಅವುಗಳ ನಡುವೆಯೇ ಓಡಾಡುತ್ತಾನೆ. ಎಲ್ಲ ಉದ್ದೇಶಗಳಿಗೆ ಅವನು ಸಾಮಾನ್ಯ ಮನುಷ್ಯನ ಹಾಗೆಯೇ.

**ಪ್ರಶ್ನೆ** : ಮನೋ ಸನ್ಯಾಸ?

**ಉತ್ತರ** : ಮನೋ ಸನ್ಯಾಸದಲ್ಲಿ ಅವನು ಎಲ್ಲ ನಿರ್ಣಯಗಳನ್ನೂ ಇಚ್ಛೆಗಳನ್ನೂ ತ್ಯಜಿಸುತ್ತಾನೆ; ತನ್ನ ಮನಸ್ಸನ್ನು ಕಟ್ಟುನಿಟ್ಟಾದ ಹತೋಟಿಯಲ್ಲಿಟ್ಟಿರುತ್ತಾನೆ; ಪ್ರವೃತ್ತಿಗಳಿಗಾಗಲಿ ಹುಚ್ಚು ಆವೇಶಗಳಿಗಾಗಲಿ ವಶನಾಗಿ ವರ್ತಿಸುವುದಿಲ್ಲ. ಅವನು ಯಾವಾಗಲೂ ಶಾಂತನಾಗಿ ಸಮಾಧಾನಿಯಾಗಿರುತ್ತಾನೆ.

**ಪ್ರಶ್ನೆ** : ಮೂರನೆಯ ಆತ್ಮ ಸನ್ಯಾಸವನ್ನು ಉಲ್ಲೇಖಿಸಿದಿರಿ.

**ಉತ್ತರ** : ಇಲ್ಲಿ ಅವನು ಆತ್ಮಕ್ಕೆ ಸಂಬಂಧಿಸಿರದ ವಸ್ತುಗಳ ಬಗೆಗೆ ಆಲೋಚನೆಗಳನ್ನು ಮುರಿದು ಹಾಕುತ್ತಾನೆ. ಏಕೆಂದರೆ ಅವನು ಸದಾ ಕಾಲವೂ ನಿಜ ಸತ್ಯದ ಅಹಂ ಬ್ರಹ್ಮಾಸ್ಮಿಯ ಚಿಂತನೆಯಲ್ಲೇ ಮುಳುಗಿ ಹೋಗಿರುತ್ತಾನೆ; ತಾನು ಆತ್ಮ ಎಂಬ ಪ್ರಜ್ಞೆಯಲ್ಲಿ ಸ್ಥಿರನಾಗಿರುತ್ತಾನೆ. ಅವನ ಆನಂದವು

ನಿರಂತರವಾಗಿ ಅಖಂಡವಾಗಿರುತ್ತದೆ. ಇದನ್ನು ಅಮೃತ ಸನ್ಯಾಸವೆಂದೂ ಕರೆಯುತ್ತಾರೆ. ಅತ್ಯಂತ ದಟ್ಟವಾದ ಕಗ್ಗತ್ತಲನ್ನು ಸೂರ್ಯಮಂಡಲದಿಂದ ಮೂಡಿಬರುವ ಕಿರಣವು ಮಾತ್ರವೆ ಹೋಗಲಾಡಿಸಬಲ್ಲುದು; ಅದೇ ರೀತಿಯಲ್ಲಿ ಆತ್ಮ ಸನ್ಯಾಸದ ಉಜ್ವಲ ಕಾಂತಿಯಿಲ್ಲದೆ ಹೋದರೆ ಅಜ್ಞಾನವು ಹರಿಯಲಾರದು. ಹೃದಯವನ್ನು ಆವರಿಸಿರುವ ಮುಸುಕುಗಳು ನುಚ್ಚು ನೂರಾಗಿ ಆತ್ಮವು ತನ್ನದೇ ದಿವ್ಯಕಾಂತಿಯಿಂದ ಬೆಳಗಲಾರದು.

**ಪ್ರಶ್ನೆ** : ತಾವು ಹೇಳಿದ ಮೂರು ಮಾದರಿಗಳನ್ನೂ ಪಡೆಯುವುದು ಹೇಗೆ? ಅವನ್ನು ಸಾಧಿಸಿಕೊಂಡಿರುವುದಕ್ಕೆ ಕುರುಹುಗಳು ಯಾವುವು?

**ಉತ್ತರ** : ನಿತ್ಯ ಅನಿತ್ಯಗಳ ನಡುವೆ, ಕ್ಷಣಿಕ ಮತ್ತು ಶಾಶ್ವತಗಳ ನಡುವೆ ಭೇದವನ್ನು ಮನಗಾಣುವುದರಿಂದ ದೇಹ ಸನ್ಯಾಸವನ್ನು ಸಾಧಿಸಬಹುದು. ಮಾತು, ಇಂದ್ರಿಯಗಳು ಮತ್ತು ಮನಸ್ಸಿನ ಚಂಚಲತೆಯನ್ನು ಗೆಲ್ಲುವುದರಿಂದ ಮನೋಸನ್ಯಾಸವನ್ನು ಮುಟ್ಟಬಹುದು. ವೇದಾಂತ ಚಿಂತನೆಯ ತತ್ವ ಗಳನ್ನು ತುಂಬಿಕೊಳ್ಳುವುದರ ಮೂಲಕ ಆತ್ಮಸನ್ಯಾಸವನ್ನು ಪಡೆಯ ಬಹುದು. ಈ ಶೈಕ್ಷಣಿಕ ಪ್ರಭಾವಗಳು ಗಟ್ಟಿಯಾದಂತೆ ಈ ಗುಣಗಳಲ್ಲಿ ಪ್ರವೃತ್ತಿಗಳಲ್ಲಿ ನೀನು ಸ್ಥಾಪಿತನಾಗುತ್ತೀಯೆ. ಆಗ ಈ ಹಂತಗಳ ಒಟ್ಟು ಫಲವಾಗಿ ಮೋಕ್ಷವನ್ನು ಪಡೆಯುವೆ.

**ಪ್ರಶ್ನೆ** : ಇವರಲ್ಲಿ ನಿಜವಾಗಿ ಅದೃಷ್ಟಶಾಲಿ ಯಾರು? ಯಾರ ಜೀವನವು ಅತ್ಯಂತ ಅರ್ಹವಾಗಿ ಕಳೆದಂತಾಗುತ್ತದೆ?

**ಉತ್ತರ** : ಹೂವಿನ ಮಕರಂದವನ್ನು ನಿಶ್ಶಬ್ದವಾಗಿ, ಆನಂದವಾಗಿ ಸವಿಯುವ ಜೇನ್ನೊಣದಂತೆ ಆತ್ಮಾನಂದವನ್ನು ಅವಿರತವಾಗಿ ಸವಿಯುವುದರಲ್ಲೇ ಆಸಕ್ತನಾಗಿರುವನು; ಈ ಪ್ರಪಂಚವನ್ನು ಒಂದು ದೃಶ್ಯವೆಂದು ಅಲಕ್ಷಿಸುವ ವನು; ಅವನು ನಿಜವಾಗಿ ಅತ್ಯಂತ ಅದೃಷ್ಟಶಾಲಿ; ಅವನ ಬದುಕು ಅತ್ಯಂತ ಅರ್ಹವಾದ ಬದುಕು.

**ಪ್ರಶ್ನೆ** : ಹಾಗಾದರೆ, ಸ್ವಾಮಿ, ಹಿರಿಯರು ಸತ್ಯ, ನಿತ್ಯ, ನಿರ್ಮಲ ಮತ್ತು ಶಾಂತಿಗಳನ್ನು ಗಳಿಸುವುದು ಎನ್ನುತ್ತಾರಲ್ಲ ಅದೇನು? ಇವುಗಳನ್ನು ಪಡೆಯುವುದು ಹೇಗೆ?

**ಉತ್ತರ** : ನಾನು ಈಗಾಗಲೆ ಹೇಳಿದಂತೆ ಯಾರು ದೃಶ್ಯಕ್ಕೆ ಅಂಟಿಕೊಳ್ಳದೆ ತನ್ನದೇ ಆತ್ಮಾನಂದದಲ್ಲಿ ಮುಳುಗಿಹೋಗಿರುತ್ತಾನೋ ಅವನು ಸತ್ಯ, ನಿತ್ಯ, ನಿರ್ಮಲ ಮತ್ತು ಶಾಂತಿಗಳನ್ನು ಪಡೆಯುತ್ತಾನೆ. ಅಥವಾ ಇವುಗಳಲ್ಲಿ ಅವನು ಒಂದನ್ನು ಪಡೆದರೂ ಸಾಕು, ಏಕೆಂದರೆ ಒಂದರಲ್ಲಿ ಎಲ್ಲವೂ ಇವೆ.

# ೧೩ ಮಂತ್ರ ಮತ್ತು ಜಪ

**ಪ್ರಶ್ನೆ** : ಸ್ವಾಮಿ, ತಾವು ಈಗ ತಾನೆ ಹೇಳಿದ ಶಾಂತಿ ಸ್ಥಿತಿಯನ್ನು ಕೊಡುವ ಮಂತ್ರ ಅಥವಾ ಜಪ ಯಾವುದಾದರೂ ಇದೆಯೆ? ಇದ್ದರೆ ಅವುಗಳಲ್ಲಿ ಮುಖ್ಯವಾದದ್ದು ಯಾವುದು?

**ಉತ್ತರ** : ಮಂತ್ರ ಮತ್ತು ಜಪ ಎಲ್ಲ ಬಗೆಯ ಜನರಿಗೂ ಅಗತ್ಯ. ಮಂತ್ರ ಎಂದರೆ ಏನು? ಮ ಎಂದರೆ ಮನನ; ತ್ರ ಎಂದರೆ ರಕ್ಷಿಸುವುದು. ಆದ್ದರಿಂದ ಮನನ ಮಾಡುವುದರಿಂದ ನಿಮ್ಮನ್ನು ರಕ್ಷಿಸುವುದೇ ಮಂತ್ರ. ಈ ಪ್ರಾಪಂಚಿಕ ಜೀವನದ ತೊಡರುಗಳಲ್ಲಿ ಸಾವು, ನೋವು, ಬಗೆ ಬಗೆಯ ಸಂಕಟಗಳ ಸೋಂಕುಗಳಿಗೆ ಸಿಕ್ಕಿಕೊಳ್ಳದ ಹಾಗೆ ನಿಮ್ಮನ್ನು ಅದು ಕಾಪಾಡುತ್ತದೆ. ಮಂತ್ರಗಳಲ್ಲೆಲ್ಲಾ ಪ್ರಣವವೇ ಅತ್ಯುನ್ನತವೂ ಅತ್ಯುತ್ತಮವೂ ಆದದ್ದು. ಅದು ಎಲ್ಲಾ ಮಂತ್ರಗಳ ನೆತ್ತಿಮುಡಿ, ಕಿರೀಟ.

**ಪ್ರಶ್ನೆ** : ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಇಷ್ಟದೇವತೆಯ ನಾಮವನ್ನು ಜಪ ಮಾಡಿದರೆ ತಪ್ಪಿಲ್ಲವಷ್ಟೆ, ಅಥವಾ ಅದರಲ್ಲೇನಾದರೂ ತಪ್ಪಿದೆಯೆ?

**ಉತ್ತರ** : ಒಬ್ಬ ವ್ಯಕ್ತಿಯು ಎಂತಹ ಕ್ರೂರಿಯೇ ಆಗಿರಲಿ ಮೂರ್ಖನೇ ಆಗಿರಲಿ ಭಗವಂತನನ್ನು ಕರೆಯದೆ ಬೇರೆ ದಾರಿಯೇ ಇಲ್ಲ ಎನ್ನುವಿಯಲ್ಲವೆ? ಹೌದು, ಆ ಹೆಸರನ್ನು ಪ್ರಣವದೊಂದಿಗೆ ಸೇರಿಸಿ ಉಚ್ಚರಿಸಿದ ಪಕ್ಷದಲ್ಲಿ ಅದು ಖಂಡಿತವಾಗಿಯೂ ಲಾಭಕರ. ಸಾಗರದ ನೀರು ಸೂರ್ಯಕಿರಣಗಳಿಂದಾಗಿ ಮೇಲೇರಿ ಮತ್ತೆ ಮಳೆಯ ರೂಪದಲ್ಲಿ ಕೆಳಕ್ಕೆ ಸುರಿದು ತೊರೆಗಳಾಗಿ ನದಿಗಳಾಗಿ ಹರಿದು ಮತ್ತೆ ತನ್ನ ಮೂಲ ನೆಲೆಯಾದ ಸಾಗರದೊಂದಿಗೆ ಲೀನಗೊಳ್ಳಲು ಹೇಗೆ ಧಾವಿಸುವುದೋ ಹಾಗೆಯೇ ಹಿಂದೊಮ್ಮೆ ಕೇವಲ ಪ್ರಣವವಾಗಿದ್ದ ಶಬ್ದವು ಅನೇಕ ಶಬ್ದಗಳಾಗಿ, ಮಂತ್ರಗಳಾಗಿ ಜಪ ಮತ್ತು ಇತರ ಸಾಧನೆಗಳ ಮತ್ತು ಅನುಷ್ಠಾನಗಳ ಮೂಲಕವಾಗಿ ಮತ್ತೆ ಪ್ರಣವವನ್ನೇ ತಲುಪುತ್ತದೆ. ಅವೆಲ್ಲ ತಮ್ಮ ಮೂಲವಾದ ಪ್ರಣವದಲ್ಲಿ ವಿಲೀನಗೊಳ್ಳುತ್ತವೆ.

**ಪ್ರಶ್ನೆ** : ಸ್ವಾಮಿ, ಮಂತ್ರದಲ್ಲಿ ಹೆಚ್ಚು ಬೀಜಾಕ್ಷರಗಳಿದ್ದರೆ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎಂದು ಕೆಲವು ಹಿರಿಯರು ಹೇಳಿದ್ದಾರೆ. ಕೆಲವೇ ಬೀಜಾಕ್ಷರಗಳಿರುವುದಕ್ಕಿಂತ ಇಂಥವನ್ನು ಆಯ್ಕೆ ಮಾಡಿಕೊಳ್ಳುವುದು ವಿಹಿತವೆ?

**ಉತ್ತರ** : ಬೀಜಾಕ್ಷರಗಳ ಸಂಖ್ಯೆ ಕಡಮೆಯಾದ ಹಾಗೆ ಧ್ಯಾನದಲ್ಲಿ ಏಕಾಗ್ರತೆಯ ಅವಕಾಶ ಕಡಮೆಯಾಗುತ್ತದೆ ಎನ್ನುವ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಸಾಧಕರು ಪಂಚಾಕ್ಷರಿಯನ್ನೋ ಅಷ್ಟಾಕ್ಷರಿಯನ್ನೋ ಪ್ರಣವದೊಂದಿಗೆ ಉಚ್ಚರಿಸಿದರೆ ಹೆಚ್ಚು ಪ್ರಯೋಜನ ಪಡೆಯುತ್ತಾರೆ. ಸ್ವಲ್ಪ ದೂರ ಹೀಗೆ ಮುಂದುವರಿದ ನಂತರ ಮಂತ್ರದ ಪದಗಳನ್ನೂ ಕೈಬಿಟ್ಟು ಅವು ಚಿತ್ರಿಸುವ ರೂಪದ ಮೇಲೆ ಕೇಂದ್ರೀಕರಿಸಬಹುದು. ಆ ಪ್ರಕಾರವಾಗಿ ಮಂತ್ರವನ್ನು ದೇವತೆಯಾಗಿ ಪರಿವರ್ತನೆ ಮಾಡಿಕೊಳ್ಳಬಹುದು. ಶ್ರುತಿ ಹೇಳುತ್ತದೆ, "ನಿಶ್ಶಬ್ದೋ ಬ್ರಹ್ಮ ಉಚ್ಯತೇ (ಶಬ್ದರಾಹಿತ್ಯ, ನಿಶ್ಶಬ್ದವೇ ಬ್ರಹ್ಮ)," ಎಂದು.

**ಪ್ರಶ್ನೆ** : ಶಬ್ದ ಶೂನ್ಯವನ್ನು ಸೃಷ್ಟಿಸುವುದು ಹೇಗೆ? ಅದು ಬ್ರಹ್ಮವಾಗಿರಲು ಹೇಗೆ ಸಾಧ್ಯ?

**ಉತ್ತರ** : ಈ ವಸ್ತುನಿಷ್ಠ ಪ್ರಪಂಚ, ಈ ಪ್ರಕೃತಿ, ಮಾಯೆ ಎಂದು ಶ್ರುತಿಗಳು ಘೋಷಿಸುತ್ತವೆ. ಈ ಮಾಯೆಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿರುವವನು ಈಶ್ವರ ಎಂದೂ ಹೇಳುತ್ತವೆ. ಆದ್ದರಿಂದ ಈ ಸೃಷ್ಟಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ ನೀವೇ ಈಶ್ವರರಾಗಿ. ನಿಮಗೆ ಸಂಬಂಧಪಟ್ಟಂತೆ ವಸ್ತುನಿಷ್ಠ ಪ್ರಪಂಚವು ಸಮಗ್ರವಾಗಿ ನಶಿಸಿದಾಗ ಬ್ರಹ್ಮ ಪ್ರಾಪ್ತಿಯಾಗುತ್ತದೆ ಎಲ್ಲಿಯವರೆಗೆ ನಿಮ್ಮ ಪಾಲಿಗೆ ಜಗತ್ತು ಶೂನ್ಯವಾಗುವುದಿಲ್ಲವೋ ಅಲ್ಲಿಯವರೆಗೆ ನೀವು ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ; ಇದು ಖಚಿತ. ಹಾವು ಪೊರೆಬಿಟ್ಟು ಹೊಸ ಚರ್ಮವನ್ನು ತಳೆಯುವಂತೆ, ಸಾಧಕನು ಹಳೆಯ ಚರ್ಮವನ್ನು ತ್ಯಜಿಸಿ, ತಾನು ಕೇಂದ್ರೀಕರಿಸಿದ ಮಂತ್ರವು ಸೂಚಿಸುವ ದೈವದ ಚರ್ಮವನ್ನು ಧರಿಸುತ್ತಾನೆ.

**ಪ್ರಶ್ನೆ** : ಕ್ಷಮಿಸಿ, ಸ್ವಾಮಿ! ನನಗೆ ಇದೆಲ್ಲ ಅರ್ಥವಾಗುವುದಿಲ್ಲ. ಇನ್ನೂ ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿ.

**ಉತ್ತರ** : ನೀನು ಮೊಟ್ಟೆಯನ್ನು ನೋಡಿದ್ದೀಯೆ ಅಲ್ಲವೆ? ಸ್ವಲ್ಪ ಸಮಯ ಹಕ್ಕಿಯು ಅದರ ಮೇಲೆ ಕುಳಿತುಕೊಳ್ಳುತ್ತದೆ. ಮೊಟ್ಟೆಯೊಳಗೆ ಮರಿಯು ಬೆಳೆದು ಚಿಪ್ಪು ಒಡೆದಾಗ ಪೂರ್ಣ ಹಕ್ಕಿಯ ಸ್ವರೂಪದಲ್ಲಿ ಹೊರಬರುತ್ತದೆ. ಅದೇ ರೀತಿಯಲ್ಲಿ ಸಾಧಕನು ಚಿತ್ತಶುದ್ಧಿಯಿಂದ ಮಂತ್ರ ಮತ್ತು ಅದರ ಅರ್ಥಗಳನ್ನು ಮನನ ಮಾಡುತ್ತಿದ್ದರೆ, ಅದರ ಮಹತ್ವವನ್ನು ಅವಿಚ್ಛಿನ್ನವಾಗಿ ಮನಸ್ಸಿನಲ್ಲಿ ತಿರಿವಿ ಹಾಕುತ್ತಿದ್ದರೆ, ಮನಸ್ಸಿನಲ್ಲಿ ಆ ದರ್ಶನವು ಬೆಳೆಯುತ್ತದೆ, ಅಜ್ಞಾನದ ಚಿಪ್ಪು ಒಡೆದು ಚಿತ್ತದಲ್ಲಿ ರೂಪಿಸಿಕೊಂಡ ದೈವತ್ವದ ಕಾಂತಿಯಿಂದ ಅವನು ಬೆಳಗುತ್ತಾನೆ.

**ಪ್ರಶ್ನೆ** : ಎಲ್ಲ ವಸ್ತುಗಳೂ ಪ್ರಣವದಿಂದ ಹುಟ್ಟಿ ಪ್ರಣವದಲ್ಲೇ ವಿಲೀನಗೊಳ್ಳುತ್ತವೆ ಎಂದು ಹೇಳುತ್ತಾರೆ. ಹಾಗಾದರೆ ಇದನ್ನು ಹೇಳುವ ಹಿರಿಯರೇ ಕೆಲವರು ಮಾತ್ರ ಪ್ರಣವವನ್ನು ಉಚ್ಚರಿಸಬಹುದು, ಇನ್ನು ಕೆಲವರು ಕೂಡದು ಎಂದು ಏಕೆ ಹೇಳು ತ್ತಾರೆ?

**ಉತ್ತರ** : ಪ್ರಕೃತಿ ಎನ್ನುವುದೇನು ಪಂಚಭೂತಗಳ ಸಮ್ಮಿಶ್ರಣವಲ್ಲದೆ? ಪ್ರಣವವು ಎಲ್ಲ ಭೂತಗಳ ಸತ್ವ. ಆದ್ದರಿಂದ ಅದು ಪ್ರಕೃತಿಯ ಉಸಿರೇ ಆಗಿದೆ. ಎತ್ತರದ ಶಿಖರದಿಂದ ಧುಮುಕುವ ಜಲಪಾತದ ಭೋರ್ಗರೆತ, ದಡಕ್ಕೆ ಅಪ್ಪಳಿಸುವ ಸಮುದ್ರದಲೆಗಳ ಅಬ್ಬರ ಎರಡೂ ಪ್ರಣವವನ್ನೇ ಪಠಿಸುತ್ತಿವೆ. ಉಸಿರನ್ನು ಒಳತೆಗೆದುಕೊಳ್ಳುವುದೂ ಹೊರಬಿಡುವುದೂ ಅಂದರೆ ಶ್ವಾಸೋಚ್ಛ್ವಾಸಗಳು ಪ್ರಣವವೇ ಅಲ್ಲವೆ? ಅವರಿಗೆ ತಿಳಿದಿರಲಿ, ಬಿಡಲಿ, ಪಲ್ಲಕ್ಕಿಯನ್ನು ಹೆಗಲ ಮೇಲೆ ಹೊತ್ತು ಹೆಜ್ಜೆಹಾಕುವ ಬೋಯಿ ಗಳ 'ಹೈ ಹೋ' ಆಗಲಿ; ಬೆನ್ನ ಮೇಲೆ ಭಾರವನ್ನು ಎತ್ತುವವರು ಬಿಡುವ ಸಶಬ್ದ ಉಸಿರಾಗಲಿ; ನದಿ ದಂಡೆಯಲ್ಲಿ ಕಲ್ಲಿನ ಮೇಲೆ ಬಟ್ಟೆಗಳನ್ನು ಎತ್ತಿ ಎತ್ತಿ ಒಗೆಯುವ ಅಗಸರ 'ಹೀ ಹಾಯ್' ಆಗಲಿ, ಎಲ್ಲವೂ ಪ್ರಣವವನ್ನೇ ಮರುಧ್ವನಿಸುತ್ತವೆ. ಅದರ ಪೂರ್ಣ ಮಹತ್ವವನ್ನು ತಿಳಿದುಕೊಂಡು ಉಚ್ಚರಿಸಿದ್ದೇ ಆದರೆ, ಖಂಡಿತವಾಗಿಯೂ ಈ ಪ್ರಾಪಂಚಿಕವಾದ ದುಃಖ ದಿಂದ ಬಿಡುಗಡೆ ಹೊಂದುವಿರಿ. ಉಸಿರಾಟದ ಪ್ರಣವವೂ ಸಂಕಟದಿಂದ ಪಾರುಮಾಡುವ ಪ್ರಕ್ರಿಯೆಯೇ. ಕೆಲವರಿಗೆ ಮಾತ್ರ ಪ್ರಣವವನ್ನು ಉಚ್ಚರಿ ಸಲು ಹಕ್ಕಿದೆ, ಇತರರಿಗಿಲ್ಲ ಎಂದು ವಾದಿಸುವುದು ಅರ್ಥಶೂನ್ಯ. ಯಾರು ಉಸಿರಾಡುವುದಿಲ್ಲವೋ ಅವರಿಗೆ ಅದನ್ನು ಉಚ್ಚರಿಸುವ ಅಧಿ ಕಾರವಿಲ್ಲದೆ ಹೋಗಬಹುದು; ಆದರೆ ಉಸಿರಾಡುತ್ತಿರುವವರೆಲ್ಲರೂ ಈಗಾಗಲೆ ಪ್ರಣವವನ್ನು ಪಠಿಸುತ್ತಲೇ ಇದ್ದಾರೆ. ಆದ್ದರಿಂದ ಕೆಲವರಿಗೆ ಅದನ್ನು ವಂಚಿಸುವುದು ಶುದ್ಧ ಅವಿವೇಕ. ಮರಣಕಾಲದಲ್ಲಿ ಭಗವಂತ ನನ್ನು ಸ್ಮರಣೆ ಮಾಡುವುದು ಹೇಗೆ ಎಂದು ಅರ್ಜುನನು ಕೇಳಿದಾಗ ಕೃಷ್ಣನು ಕೊಟ್ಟ ಉತ್ತರ ನಿನಗೆ ತಿಳಿಯದೆ? ತನ್ನಿಂದ ಎಷ್ಟು ಮಾತ್ರಕ್ಕೂ ಬೇರೆಯಲ್ಲದ ಪ್ರಣವವನ್ನು ಸ್ಮರಣೆಗೆ ತಂದುಕೊಳ್ಳಬೇಕು ಎಂದು ಹೇಳಿ ದನು. ಅಂತಹ ಭಕ್ತನು ಮೋಕ್ಷವನ್ನು ಗಳಿಸುತ್ತಾನೆ ಎಂದೂ ಆಶ್ವಾಸನೆ ಕೊಟ್ಟನು. ಆದ್ದರಿಂದ ಈ ಮಹಾಮಂತ್ರವಾದ ಪ್ರಣವಕ್ಕೆ ಎಲ್ಲರಿಗೂ ಹಕ್ಕಿದೆ.

**ಪ್ರಶ್ನೆ** : ಪ್ರಣವದ ಉಪಾಸನೆಯಿಂದ ಗುರಿಯನ್ನು ಮುಟ್ಟುವುದು ಹೇಗೆ? ಧ್ಯಾನ ಮಾಡುತ್ತಿರುವ ವ್ಯಕ್ತಿಯು ಧ್ಯಾನದ ವಸ್ತುವೇ ಆಗಿ ಪರಿವರ್ತನೆಗೊಳ್ಳು ವುದು ಹೇಗೆ? ಈ ಅನುಪಮವಾದ ಮಂತ್ರವನ್ನೂ ಅದು ಹೇಗೆ ಸಹಾಯ

ಮಾಡುವುದೆಂಬುದನ್ನೂ ಸುಲಭವಾದ ಉದಾಹರಣೆಗಳಿಂದ ವಿವರಿಸಿ ಹೇಳಿ.

**ಉತ್ತರ** : ಒಳ್ಳೆಯದು. ಪ್ರಣವವು ಒಂದು ಬಿಲ್ಲಿದ್ದ ಹಾಗೆ; ಆತ್ಮವೇ ಬಾಣ; ಪರಬ್ರಹ್ಮವೇ ಲಕ್ಷ್ಯ. ಬಿಲ್ಲುಗಾರಿಕೆಯನ್ನು ಸಾಧಿಸುವ ಬಿಲ್ಗಾರನ ಹಾಗೆ ಸಾಧಕನು ತನ್ನ ಮನಸ್ಸನ್ನು ಕಾಡುವ ಇತರ ವಿಚಾರಗಳಿಂದ ವಿಚಲಿತನಾಗದೆ, ಗುರಿಯ ಕಡೆಗೆ ಏಕಾಗ್ರಚಿತ್ತದಿಂದ ಗಮನವನ್ನು ಕೊಡಬೇಕು. ಆಗ ಗುರಿಯು ಅವನನ್ನು ಪೂರ್ತಿಯಾಗಿ ಆವರಿಸಿಕೊಳ್ಳುತ್ತದೆ. ತಾನು ಯಾವುದನ್ನು ಧ್ಯಾನಿಸುತ್ತಿದ್ದಾನೋ ಆ ವಸ್ತುವೇ ಆಗಿ ಅವನು ಪರಿವರ್ತಿತನಾಗುತ್ತಾನೆ. ಕೈವಲ್ಯೋಪನಿಷತ್ತಿನಲ್ಲಿ, ಮುಂಡಕೋಪನಿಷತ್ತಿನಲ್ಲಿ ಮತ್ತು ಶ್ರುತಿಯ ಹಲವು ಭಾಗಗಳಲ್ಲಿ ಪ್ರಣವವನ್ನು ಅನೇಕ ವಿಧವಾಗಿ ಪ್ರಶಂಸಿಸಲಾಗಿದೆ. ಆದ್ದರಿಂದ ಮನುಷ್ಯನನ್ನು ವಿಮುಕ್ತಗೊಳಿಸುವ ಈ ಪರಮಶ್ರೇಷ್ಠ ಮಂತ್ರವನ್ನು ಎಲ್ಲರೂ ಉಚ್ಚರಿಸಬಹುದು, ಧ್ಯಾನಿಸಬಹುದು. ಯಾರು ಬೇಕಾದರೂ ಪ್ರಣವೋಪಾಸನೆಯನ್ನು ಕೈಗೊಳ್ಳಬಹುದು. ಈ ವಿಷಯದಲ್ಲಿ ನಿನಗೆ ಸಂದೇಹವೇ ಬೇಡ.

# ೧೪ ತಪಸ್ಸು

**ಪ್ರಶ್ನೆ** : ಪಂಚಭೂತಗಳಿಂದಾದ ಈ ಭೌತಿಕ ದೇಹದಲ್ಲಿರುತ್ತಲೇ ಆತ್ಮಸಾಕ್ಷಾತ್ಕಾರ ಮಾಡಿಕೊಂಡು ಪ್ರಣವದೊಂದಿಗೆ ವಿಲೀನಗೊಳ್ಳಲು ಸಾಧ್ಯವೆ? ಆತ್ಮವನ್ನು ದೇಹದಿಂದ ಪ್ರತ್ಯೇಕಗೊಳಿಸಬಹುದೆ? ಅದನ್ನು ಮಾಡುವುದು ಹೇಗೆ?

**ಉತ್ತರ** : ಮನುಷ್ಯನು ಧ್ಯಾನ ಮತ್ತು ಇತರ ಅನುಷ್ಠಾನಗಳ ಮೂಲಕವಾಗಿ, ಪ್ರಣವ ಮಂತ್ರವನ್ನು ಪಠಿಸುವುದರಿಂದ ಆತ್ಮವನ್ನು ಕಂಡುಕೊಂಡು ದೇಹದಿಂದ ಪ್ರತ್ಯೇಕವಾಗಿ ಗುರುತಿಸುತ್ತಾನೆ. ಇದು ಮೊಸರಿನಿಂದ ಬೆಣ್ಣೆಯನ್ನು ತೆಗೆಯುವ ಹಾಗೆ; ಎಳ್ಳಿನಿಂದ ಎಣ್ಣೆಯನ್ನು ತೆಗೆಯುವ ಹಾಗೆ; ಭೂಗರ್ಭದಿಂದ ನೀರನ್ನು ತೆಗೆಯುವ ಹಾಗೆ; ಕಾಷ್ಠದಿಂದ ಬೆಂಕಿಯನ್ನು ಪಡೆಯುವ ಹಾಗೆ. ಮಥಿಸುವುದು, ಹಿಂಡುವುದು, ಅರೆಯುವುದು, ಅಗೆಯುವುದು, ಕಡೆಯುವುದು—ಈ ಪ್ರಕ್ರಿಯೆಗಳ ಅಗತ್ಯವಿದೆ ಅಷ್ಟೆ. ಆತ್ಮವು ದೇಹದಿಂದ ಬೇರೆಯಾಗುತ್ತದೆ, ದೇಹವೇ ಆತ್ಮ ಅಥವಾ ನಾವು ಎಂಬ ನಂಬಿಕೆಯು ಮಾಯವಾಗುತ್ತದೆ.

**ಪ್ರಶ್ನೆ** : ಅನೇಕ ಹಿರಿಯರು, ಸಂತರು ನಾವು ಜೀವಾತ್ಮನನ್ನು ಪರಮಾತ್ಮನನ್ನಾಗಿ ದರ್ಶಿಸಬೇಕು; ಆ ಭಾವನೆಯನ್ನು ಆ ನಂಬಿಕೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳುತ್ತಾರೆ. ಅದು ಸಾಧ್ಯವಾಗುವುದು ಹೇಗೆ ಸ್ವಾಮಿ?

**ಉತ್ತರ** : ಅದು ಕಷ್ಟವೆಂದೇಕೆ ಭಾವಿಸುವೆ? ಸತ್ಯವನ್ನು ಹೇಳುವುದು ಸುಳ್ಳನ್ನು ಹೇಳುವುದಕ್ಕಿಂತ ಸುಲಭವಲ್ಲವೆ? ನೀನು ಸುಳ್ಳನ್ನು ನಿಜವೆಂದು ಘೋಷಿಸುತ್ತಿದ್ದೀಯೆ. ಆದ್ದರಿಂದ ಎಲ್ಲಾ ಬಗೆಯ ಕಷ್ಟಗಳು ಹುಟ್ಟಿಕೊಳ್ಳುತ್ತವೆ. ಜೀವಾತ್ಮನೂ ಪರಮಾತ್ಮನೂ ಒಂದೇ ಎಂಬ ಸತ್ಯವನ್ನು ಮೊದಲು ಒಪ್ಪಿಕೊ. ಮಿಕ್ಕದ್ದೆಲ್ಲ ಆಮೇಲೆ ಸುಲಭವಾಗುತ್ತದೆ. ಮೊದಲು ಆತ್ಮವನ್ನು ಗುರುತಿಸು; ದೇಹಕ್ಕೆ ಸಂಬಂಧಿಸಿದ ಜೀವಾತ್ಮ ಅದು. ಇದನ್ನು ನೀನು ಧ್ಯಾನ ಮೊದಲಾದ ಸಾಧನೆಗಳಿಂದ ಮಾಡಬಹುದು. ಹೂಗಳಿಂದ ಬೇರ್ಪಡಿಸಿದ ಪರಿಮಳದಂತೆ, ಕಬ್ಬಿನಿಂದ ತೆಗೆದ ಸಕ್ಕರೆಯಂತೆ, ಕಲ್ಲಿನಿಂದ ಬೇರ್ಪಡಿಸಿದ ಚಿನ್ನದಂತೆ, ಆತ್ಮವನ್ನು ಭೌತಿಕವಾದ ಈ ದೇಹದಿಂದ ಬೇರೆ ಮಾಡು. ಆ ಮೇಲೆ ನಿದಿಧ್ಯಾಸನ ಮೊದಲಾದವುಗಳ ಏಕಾಗ್ರತೆಯಿಂದ ಕೂಡಿದ ಧ್ಯಾನದ ಮೂಲಕ ಜೀವಾತ್ಮನನ್ನು ಪರಮಾತ್ಮನೊಂದಿಗೆ ಒಂದಾಗಿ ಮನಗಾಣಬಹುದು. ಅದು ತಪಸ್ಸಿನ ಪರಾಕಾಷ್ಠೆಯಾಗಿರುತ್ತದೆ; ಅದೇ ನಿರ್ವಾಣ.

**ಪ್ರಶ್ನೆ** : ತಪಸ್ಸು ಎಂದರೆ ಏನು ಸ್ವಾಮಿ?

**ಉತ್ತರ** : ಅದು ಎಲ್ಲಾ ಇಂದ್ರಿಯಗಳ ಚಟುವಟಿಕೆಗಳನ್ನು ನಶಿಸುವುದು, ಜೀತೇಂದ್ರಿಯನಾಗಿ, ಕಂದಮೂಲಾದಿಗಳನ್ನು ಭಕ್ಷಿಸಿ ಅಂದರೆ ಜಿಹ್ವಾ ಚಾಪಲ್ಯವನ್ನೂ ಗುಹ್ಯಾ ಚಾಪಲ್ಯವನ್ನೂ ಬಿಟ್ಟು ಪ್ರಾಪ್ತಿಗೋಸ್ಕರ ಪ್ರಯತ್ತಿಸುವುದು, ಪರಿಶ್ರಮಪಡುವುದು, ಮಿತ ನಿದ್ರೆ ಮಿತ ಆಹಾರ ಸೇವಿಸುವುದು, ತತ್ವವಿಚಾರದಿಂದ ಕೂಡಿದ ತಾಪವೇ ತಪವು! ಇದನ್ನು ಸಾತ್ವಿಕ ತಪಸ್ಸು ಎನ್ನುತ್ತಾರೆ.

**ಪ್ರಶ್ನೆ** : ಹಾಗಾದರೆ ರಾಜಸಿಕ ತಪಸ್ಸು ಯಾವುದು?

**ಉತ್ತರ** : ಯಾರು ಇಂದ್ರಿಯಗಳನ್ನು ಅಡಗಿಸದೆ, ಭಾವನೆಗಳನ್ನು ನಿಯಂತ್ರಿಸದೆ ಸುಮ್ಮನೆ ಉಪವಾಸ ಮೊದಲಾದವುಗಳಿಂದ ದೇಹವನ್ನು ದುರ್ಬಲಗೊಳಿಸುತ್ತಾ ಇರುತ್ತಾರೆಯೋ ಅವರು ರಾಜಸಿಕ ತಪಸ್ಸನ್ನು ಆಚರಿಸುತ್ತಿರುತ್ತಾರೆ. ಅವರು ಆತ್ಮತತ್ವವನ್ನು ಕುರಿತು ಅಧ್ಯಯನ ಮಾಡುವುದಿಲ್ಲ ಅಥವಾ ಅದರ ಮೇಲೆ ಧ್ಯಾನ ಮಾಡುವುದಿಲ್ಲ. ಅವರು ದೈಹಿಕ ವೈರಾಗ್ಯದ ಮೇಲೆ ಒತ್ತುಹಾಕುತ್ತಾರೆ.

**ಪ್ರಶ್ನೆ** : ತಾಮಸಿಕ ತಪಸ್ಸೂ ಇದೆಯಲ್ಲವೆ?

**ಉತ್ತರ** : ಇದೆ. ದೇವರುಗಳನ್ನು ಪೂಜಿಸಿ ವರಪಡೆಯುವುದು, ಆಮೇಲೆ ವರಗಳನ್ನು ಸಾಧನವಾಗಿ ಬಳಸಿಕೊಂಡು ಪ್ರಪಂಚವನ್ನು ಶೋಷಿಸುವುದು. ಇದು ತಾಮಸಿಕ ತಪಸ್ಸು. ಭಗವಂತನನ್ನು ಪಡೆಯುವುದು, ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವುದು, ಅತ್ಯುನ್ನತವಾದ ಜ್ಞಾನವನ್ನು ಸಾಧಿಸುವುದನ್ನು ಗುರಿಯಾಗಿ ಇಟ್ಟುಕೊಳ್ಳುವುದೇ ಅತ್ಯುತ್ತಮವಾದ ತಪಸ್ಸು. ಈ ಬಗೆಯ ತಪಸ್ಸನ್ನು ಶಾಸ್ತ್ರಗಳು ಸಮ್ಮತಿಸಿವೆ. ಮಿಕ್ಕವೆಲ್ಲ ನಿನ್ನನ್ನು ದಿಕ್ಕುಗೆಡಿಸಿ ಗುರಿ ತಪ್ಪುವಂತೆ ಮಾಡುತ್ತವೆ. ಶಾಸ್ತ್ರಗಳು ಸಮ್ಮತಿಸಿರುವ ತಪಸ್ಸು ಮಾತ್ರ ಆ ಹೆಸರಿಗೆ ಅರ್ಥವಾಗುತ್ತದೆ, ಮಿಕ್ಕವೆಲ್ಲ ತಮಸ್ಸು, ತಪಸ್ಸಲ್ಲ. ತಪಸ್ಸು ಎಂದರೆ ಶಾಖ, ಕಾವು. ಶಾಖವು ಪಾಪವನ್ನು ಸುಟ್ಟುಹಾಕಿ ಎಲ್ಲ ಕರ್ಮಗಳನ್ನೂ ಬೂದಿ ಮಾಡುತ್ತದೆ.

**ಪ್ರಶ್ನೆ** : ಋಷಿಗಳು ತಮ್ಮ ಆಶ್ರಮಗಳಲ್ಲಿ ಚಿಂತಾಮಣಿ ರತ್ನವನ್ನೂ ಕಲ್ಪವೃಕ್ಷ, ಕಾಮಧೇನು ಮೊದಲಾದವನ್ನೂ ಇಟ್ಟುಕೊಂಡಿದ್ದರೆಂದು ಶಾಸ್ತ್ರಗಳು ಹೇಳುತ್ತವೆ. ಅವರು ಬಯಸಿದುದನ್ನೆಲ್ಲ ಈ ವಸ್ತುಗಳು ಕೊಡುತ್ತಿದ್ದುವು. ಹಾಗಿರುತ್ತಾ ಅವರು ತಪಸ್ಸನ್ನು ಮಾಡಲೇ ಬೇಕಾಗಿರಲಿಲ್ಲವಲ್ಲ ಎಂದು ನನಗನ್ನಿಸುತ್ತದೆ. ದಯವಿಟ್ಟು ಇದನ್ನು ಸ್ಪಷ್ಟಪಡಿಸಿ.

**ಉತ್ತರ** : ಈ ವಿಷಯ ಚೆನ್ನಾಗಿ ಆಲೋಚನೆ ಮಾಡು. ಆಗ ನಿನಗೇ ತಿಳಿಯುತ್ತದೆ. ಚಿಂತಾಮಣಿ ಒಂದು ರತ್ನವಲ್ಲ, ಕಲ್ಪವೃಕ್ಷ ಒಂದು ಮರವಲ್ಲ, ಕಾಮ ಧೇನು ಒಂದು ಹಸುವಲ್ಲ. ಅವು ತಪಸ್ಸಿನ ಫಲಗಳಿಗೆ ಕೊಟ್ಟ ಹೆಸರುಗಳು. ತಪಸ್ಸು ಮಾಡುವ ವ್ಯಕ್ತಿಗೆ ತನಗೆ ತಾನೆ ಬರುವ ಶಕ್ತಿಗಳು. ತಾನು ಬಯಸಿದುದನ್ನೆಲ್ಲ ಅವನು ಪಡೆಯುತ್ತಾನೆ. ಅದು ಕಲ್ಪವೃಕ್ಷ ಸಿದ್ಧಿ. ಆಸೆಗಳೆಲ್ಲ ದಮನಗೊಂಡಾಗ ಅದು ಕಾಮಧೇನು ಸಿದ್ಧಿಯೆನಿಸುತ್ತದೆ. ಚಿಂತಾಮಣಿ ಸಿದ್ಧಿ ಎಂದರೇನು? ಚಿಂತೆ ಅಥವಾ ಮಾನಸಿಕ ತಳಮಳ ಇಲ್ಲದ್ದು. ದುಃಖಗಳೆಲ್ಲ ದೂರವಾಗುವ ಹಂತ ಅದು. ಚಿಂತೆ ಅಳಿದು, ಆನಂದ ದೊರೆಕೊಂಡಾಗ ಅದು ಚಿಂತಾಮಣಿ ಸಿದ್ಧಿಯೆನಿಸುತ್ತದೆ. ಮನಸ್ಸು, ಮಾತು ಮತ್ತು ಕೃತಿ ಈ ಮೂರರಿಂದಲೂ ಚಿಂತೆ ಮಾಯವಾಗ ಬೇಕು.

**ಪ್ರಶ್ನೆ** : ಮಾನಸಿಕ ತಪಸ್ಸು ಎಂದೂ ಹೇಳುತ್ತಾರಲ್ಲ, ಹಾಗೆಂದರೇನು?

**ಉತ್ತರ** : ಮಾತನ್ನು ನಿಯಂತ್ರಿಸು; ಆಲೋಚನೆ ಶುದ್ಧವಾಗಿರಲಿ; ವಿನಯವನ್ನು ಅಭ್ಯಾಸ ಮಾಡು; ಸದಾ ಕಾಲವೂ ಬ್ರಹ್ಮತತ್ವವನ್ನು ಕುರಿತೇ ಯೋಚಿಸು ತ್ತಿರು. ಆಗ ನೀನು ಮಾನಸಿಕ ತಪಸ್ಸು ಮಾಡುತ್ತಿರುವ ಹಾಗೆ.

**ಪ್ರಶ್ನೆ** : ದೈಹಿಕ ತಪಸ್ಸೊ?

**ಉತ್ತರ** : ಅದೂ ಒಳ್ಳೆಯದೇ ಅದರದೇ ರೀತಿಯಲ್ಲಿ. ಹಿರಿಯರನ್ನೂ ಗುರು ಗಳನ್ನೂ ಸಾಧುಸಂತರನ್ನೂ ಗೌರವಿಸುವುದು; ಅಹಿಂಸೆ, ಸಕಲ ಜೀವಿಗಳ ಬಗೆಗೆ ಕರುಣೆ, ಸತ್ಯಸಂಧತೆ, ಇವೆಲ್ಲವುಗಳಿಂದ ವ್ಯಕ್ತಿಗೆ ದೈಹಿಕ ಆರೋಗ್ಯ, ದೇಹಶುದ್ಧಿ ಉಂಟಾಗುತ್ತವೆ. ಮಾನಸಿಕ ತಪಸ್ಸು ಮನಶ್ಶುದ್ಧಿಗೆ ದಾರಿ. ಮಾತಿನ ಹತೋಟಿ ಅಥವಾ ತಪಸ್ಸು ವಾಕ್ಶುದ್ಧಿಗೆ ದಾರಿ. ಈ ಮೂರರಿಂದ ಅಮೂಲ್ಯವಾದ ಕಾಮಧೇನು, ಕಲ್ಪವೃಕ್ಷ ಮತ್ತು ಚಿಂತಾಮಣಿಗಳನ್ನು ಪಡೆಯಬಹುದು. ಅವು ಸಿದ್ಧಿಗಳೇ ಹೊರತು ಹಸು, ಮರ ಅಥವಾ ರತ್ನ ಅಲ್ಲ.

**ಪ್ರಶ್ನೆ** : ತಪಸ್ಸಿನ ಮೂಲಕವಾಗಿ ಬ್ರಹ್ಮತತ್ವವನ್ನೂ ಧರ್ಮತತ್ವವನ್ನೂ ಪಡೆದವರು ಯಾರಾದರೂ ಇದ್ದಾರೆಯೆ? ಅವರು ಯಾರು?

**ಉತ್ತರ** : ಕಪಿಲ ಮಹಾಮುನಿಯು ಬ್ರಹ್ಮತತ್ವವನ್ನು ಪಡೆದನು; ಜೈಮಿನಿ ಮಹಾ ಮುನಿಯು ಧರ್ಮತತ್ವವನ್ನು ಪಡೆದನು; ನಾರದನು ಬ್ರಹ್ಮರ್ಷಿಯಾ ದನು; ಭಗೀರಥನು ಭೂಮಿಗೆ ಗಂಗೆಯನ್ನು ತಂದನು; ಗೌತಮನು ಗೋದಾವರಿಯನ್ನು ಭೂಮಿಯ ಮೇಲೆ ಹರಿಯುವಂತೆ ಒಲಿಸಿದನು; ವಾಲ್ಮೀಕಿಯು ರಾಮ ಮಂತ್ರವನ್ನು ಸಾಕ್ಷಾತ್ಕರಿಸಿಕೊಂಡು ರಾಮಾಯಣ

 

ವನ್ನು ರಚಿಸಿದನು; ಗಾರ್ಗಿಯು ಬ್ರಹ್ಮಚರ್ಯದಲ್ಲೂ ಸುಲಭಾ ಆಧ್ಯಾತ್ಮಿಕ ಜ್ಞಾನದಲ್ಲೂ ಅತ್ಯುತ್ಕೃಷ್ಟ ನೆಲೆಯನ್ನು ತಪಸ್ಸಿನಿಂದಲೇ ಸಾಧಿಸಿದರು. ಒಂದಾದ ಮೇಲೊಂದರಂತೆ ಪಟ್ಟಿಯನ್ನು ಬೆಳೆಸುತ್ತಲೇ ಇರುವುದೇಕೆ? ತಪಸ್ಸಿನ ಮೂಲಕ ಬ್ರಹ್ಮ ಮತ್ತು ರುದ್ರರೂ ವ್ಯಕ್ತಿಯ ಸಹಯೋಗಿಗಳಾಗುತ್ತಾರೆ.

**ಪ್ರಶ್ನೆ** : ಸ್ವಾಮಿ! ಈ ಎತ್ತರದ ನೆಲೆಯನ್ನು ತಲುಪಲು ಉತ್ತಮ ಜಾತಿಯಲ್ಲಿ ಹುಟ್ಟಿರಬೇಕಾದದ್ದು ಅಗತ್ಯವೆಂದು ಹೇಳುವಿರಾ? ಅಥವಾ ಮೇಲು ಮಟ್ಟದ ಸಾಧನೆ ಸಾಕೆ?

**ಉತ್ತರ** : ಶೀಲವಿಲ್ಲದ ಜಾತಿ ಅರ್ಥರಹಿತ; ಅದೊಂದು ಪೊಳ್ಳು ಹೆಸರು. ಶೀಲದ ಆಧಾರವಿಲ್ಲದ ಸಾಧನೆಯಾದರೂ ಕುರುಡನ ನಡಗೆಯ ಹಾಗೆ. ನೈತಿಕತೆ, ಸದ್ಗುಣ, ಶೀಲಗಳು ಅತಿ ಮುಖ್ಯವಾದವು. ಇವುಗಳ ತಳಹದಿ ಇಟ್ಟುಕೊಂಡು, ತಾನು ಆರಿಸಿಕೊಂಡಿರುವ ಸಾಧನ ಮಾರ್ಗಕ್ಕೆ ವಿಧಿಸಲಾಗಿರುವ ಯೋಜನೆಯ ಪ್ರಕಾರ ಸಾಧನೆ ಮಾಡಿದ್ದೇ ಆದರೆ ಯಶಸ್ಸು ದೊರಕುವುದರಲ್ಲಿ ಸಂದೇಹವೇ ಇಲ್ಲ. ಆದರೆ ಇಲ್ಲಿ ಒಂದು ಎಚ್ಚರಿಕೆಯ ಅಂಶವನ್ನು ಗಮನಿಸಬೇಕು. ಜಾತಿ ಅಥವಾ ಹುಟ್ಟು ಮುಖ್ಯವಲ್ಲವೆಂದ ಮಾತ್ರಕ್ಕೆ ಸಾಧನೆಯಲ್ಲಿ ಸ್ವಲ್ಪವಾದರೂ ಆಲಸ್ಯ ಕೂಡದು. ನೀತಿ ಅಥವಾ ನೈತಿಕ ಮೌಲ್ಯಗಳು ಜಾತಿಗೆ ತಕ್ಕಂತೆ ಬೆಳೆದು ಬಂದಿರುತ್ತವೆ. ಆದ್ದರಿಂದ ನೈತಿಕತೆಯನ್ನು ಬೆಳೆಸಿ ಪೋಷಿಸಲು ಜಾತಿ ಪ್ರಜ್ಞೆಯೂ ಸಹಾಯಕವಾಗುತ್ತದೆ ಮತ್ತು ಮುಖ್ಯವಾಗುತ್ತದೆ. ಆದರೆ ಪೂರ್ವಜನ್ಮಗಳಲ್ಲಿ ಸಂಚಿತವಾದ ಪುಣ್ಯದ ಫಲವಾಗಿ ಒಳ್ಳೆಯತನ, ಸದ್ಗುಣಗಳ ಸಂಪತ್ತು ವ್ಯಕ್ತಿಯಲ್ಲಿ ತುಂಬಿದ್ದರೆ, ಆಗ ಜಾತಿಗೆ ಹೆಚ್ಚಿನ ಪ್ರಾಮುಖ್ಯ ನೀಡಬೇಕಾದ ಅಗತ್ಯವಿಲ್ಲ. ಹಿಂದಿನ ಜನ್ಮಗಳಲ್ಲಿ ಯೋಗ ಸಾಧನೆ ಮಾಡುತ್ತಿದ್ದು, ಅದು ಪೂರ್ಣಗೊಂಡಿರದಿದ್ದರೆ ಪ್ರಕ್ರಿಯೆಯು ಅಷ್ಟುಮಟ್ಟಿನ ಕುಶಲತೆಯನ್ನು ಹೊಂದಿರುತ್ತದೆ. ಸಾಧನೆ ಮತ್ತು ಆಧ್ಯಾತ್ಮಿಕತೆಯ ಪಥದಲ್ಲಿ ಸ್ವಲ್ಪ ದೂರದವರೆಗೆ ಜಾತಿ ಮತ್ತು ನೀತಿ ಸಹಾಯಮಾಡುತ್ತವೆ. ಇವೆರಡರಿಂದ ಗುಣಗಳು ಉನ್ನತಿ ಪಡೆಯುತ್ತವೆ.

**ಪ್ರಶ್ನೆ** : ಆದ್ದರಿಂದ ಪೂರ್ವಜನ್ಮಗಳ ಸಂಚಿತ ಪುಣ್ಯದ ಮೂಲಕವಾಗಿ ಮೋಕ್ಷ ಸಾಧಿಸಿದ ಕೆಲವರಾದರೂ ಇರಬೇಕೆಂದಾಯಿತು. ಅಂತಹ ಕೆಲವು ನಿದರ್ಶನಗಳನ್ನು ದಯವಿಟ್ಟು ಕೊಡುವಿರಾ?

**ಉತ್ತರ** : ಅಯ್ಯಾ! ನೀನು ಎಂದೂ ನದೀ ಮೂಲವನ್ನಾಗಲಿ, ಒಬ್ಬ ಋಷಿಯ ಮೂಲವನ್ನಾಗಲಿ ಹುಡುಕಲು ಹೋಗಬಾರದು. ಅವು ಅಷ್ಟಾಗಿ ಮಹತ್ವಪೂರ್ಣವಾಗಿ ಕಾಣದೆ ಹೋಗಬಹುದು. ಅವರು ಲೋಕಕ್ಕೆ ಸಲ್ಲಿಸಿರುವ

ಸೇವೆಯಿಂದ ನೀನು ತೃಪ್ತನಾಗಬೇಕು. ಅವರು ಪಡೆದ ಅನುಭವ ಅಮೂಲ್ಯವಾದದ್ದು; ಅದರಿಂದ ಪ್ರಭಾವಿತನಾಗು. ಅಂಥದೇ ಪ್ರಯತ್ನ ಶೀಲನಾಗಲು ಸ್ಫೂರ್ತಿ ಪಡೆದುಕೊ. ನೀನು ಮೂಲವನ್ನು ಹುಡುಕುತ್ತಾ ಹೋದರೆ ಸತ್ವವನ್ನು ತಪ್ಪಿಸಿಕೊಂಡು ಬಿಡುತ್ತೀಯೆ. ಆದರೂ ನೀನು ಪ್ರಶ್ನೆಯನ್ನೆತ್ತಿರುವುದರಿಂದ ಹೇಳುತ್ತೇನೆ. ವ್ಯಾಸರು ಮೀನುಗಾರ ಜಾತಿ ಯಲ್ಲಿ ಹುಟ್ಟಿದವರು, ಶೌನಕರು ಶುನಕ ವಂಶದವರು; ಅಗಸ್ತ್ಯ ಹುಟ್ಟಿದ್ದು ಕುಂಭದಲ್ಲಿ; ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದವನು; ಖಗೋಳ ಮಹಾಮುನಿ ವೈಶ್ಯ ವಂಶದಲ್ಲಿ ಜನಿಸಿದನು, ಸೂತಮಹಾಮುನಿ ನಾಲ್ಕನೆಯ ಜಾತಿ ಯಲ್ಲಿ ಜನಿಸಿದನು. ಜೊತೆಗೆ ಧರ್ಮಾತ್ಮರೂ ಸಜ್ಜನರೂ ಆದವರಲ್ಲಿ ತಮ್ಮ ಜಾತಿ ಮತ್ತು ನೀತಿಗಳ ನೈತಿಕತೆಯ ಮೇಲೆಯೇ ಕಣ್ಣಿಟ್ಟುಕೊಂಡವರಿ ದ್ದಾರೆ, ಸಮಸ್ತವನ್ನೂ ಪರಿತ್ಯಾಗ ಮಾಡಿ ತಮ್ಮನ್ನು ಜನನ ಮರಣಗಳ ಬಂಧನದಿಂದಲೂ ಭೌತಿಕ ಮೌಲ್ಯಗಳ ಭ್ರಮೆಯಿಂದಲೂ ವಿಮೋಚನೆ ಗೊಳಿಸಿಕೊಳ್ಳುವ ಆದರ್ಶಕ್ಕೆ ಅಂಟಿಕೊಂಡವರಿದ್ದಾರೆ: ಸಂಜಯ, ಸತ್ಯ ಕಾಮ ಮತ್ತು ಅಂತಹ ಅನೇಕರು. ಇಲ್ಲಿ ಕೇಳು, ಸ್ವಪ್ರಯತ್ನ, ವಿವೇಕ, ತಪಸ್ಸುಗಳು ವ್ಯಕ್ತಿಯು ಅತ್ಯುನ್ನತ ಸ್ಥಾನವನ್ನು ಪಡೆಯಲು ಅರ್ಹತೆ ಕೊಡುತ್ತವೆ. ಅಂತರಿಂದ್ರಿಯಗಳ ಪರಿಶುದ್ಧಿಯಿಲ್ಲದೆ ಯಾವ ವ್ಯಕ್ತಿಯೂ ಅವನು ಎಷ್ಟೇ ಮೇಲು ಜಾತಿಗೆ ಸೇರಿದವನಾಗಿರಲಿ ಪರತತ್ವವನ್ನು ಮುಟ್ಟಲಾರನು. ಕಳಪೆ ತಾಮ್ರವನ್ನು ಚಿನ್ನಕ್ಕೆ ಬೆರೆಸಿದರೆ ಆ ಮಿಶ್ರ ಲೋಹವು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಶುದ್ಧ ಚಿನ್ನವು ತಾಮ್ರದೊಂದಿಗೆ ಸಂಪರ್ಕ ಹೊಂದಿ ಮಿಶ್ರಲೋಹವಾದಂತೆ, ವಿಶ್ವ ತತ್ವವು, ವಿರಾಟ್ ರೂಪವು ಈ ಸಂಸಾರದಲ್ಲಿ ಕೆಳಮಟ್ಟದ ಅಹಂನೊಂ ದಿಗೆ ಬೆರೆತುಕೊಳ್ಳುತ್ತದೆ. ವಿರಾಟ್ ರೂಪವು ಜೀವಿಯಾಗಿ ಪರವರ್ತನೆ ಗೊಳ್ಳುತ್ತದೆ. ಹಾಗಾದರೆ ಮತ್ತೆ ಹಿಂದಕ್ಕೆ ಹೋಗಿ ನಿಜವಾದ ಚಿನ್ನವನ್ನು ಪಡೆಯುವುದು ಹೇಗೆ? ತಪಸ್ಸು ಮತ್ತು ವ್ರತಗಳಿಂದ, ಬುದ್ಧಿಗೆ ಮೆರುಗು ಕೊಟ್ಟು ಶುದ್ಧಗೊಳಿಸುವುದರಿಂದ ಹಿಂದಿನ ಹಂತವನ್ನು ಮರಳಿ ಪಡೆಯ ಬೇಕು. ಕೆಸರಿನಲ್ಲಿ ನಡೆದು ಬಂದ ನಂತರ ನೀವು ಕಾಲುಗಳನ್ನು ತೊಳೆದುಕೊಳ್ಳುವಿರಿ; ವಸ್ತುಗಳ ಮೋಹವೆಂಬ ಕೆಸರು ಮೆತ್ತಿದ ಮನ ಸ್ಸನ್ನು ಚೆನ್ನಾಗಿ ತೊಳೆಯಬೇಕು. ಮೋಹದ ಬೀಜಗಳನ್ನು ಮತ್ತೆ ಮೊಳಕೆಯೊಡೆಯದ ಹಾಗೆ ಸುಟ್ಟುಹಾಕುವ ಶಕ್ತಿಯಿರುವುದು ಜ್ಞಾನಕ್ಕೆ ಮಾತ್ರವೇ. ಆದ್ದರಿಂದ ವ್ಯಕ್ತಿಯು ಜ್ಞಾನಸಂಪನ್ನನಾಗಿದ್ದರೆ ಸುಲಭವಾಗಿ ಮುಕ್ತಿ ಪಡೆಯುತ್ತಾನೆ.

## ೧೫ ಅಷ್ಟಾಂಗ ಯೋಗ

**ಪ್ರಶ್ನೆ** : ಹುಟ್ಟು ಸಾವುಗಳಿಂದ ತಪ್ಪಿಸಿಕೊಳ್ಳುವ ಅದೃಷ್ಟವನ್ನು ಪಡೆಯಲು ಯೋಗವು ಬಹುಮುಖ್ಯವೆಂದು ಹಿರಿಯರು ಹೇಳುತ್ತಾರೆ. ಅವರು ಹೇಳುವ ಯೋಗ ಯಾವುದು?

**ಉತ್ತರ** : ಸದಾ ವಿಸ್ತಾರವಾಗುತ್ತಲೇ ಹೋಗುವ ಮಾನಸಿಕ ಕ್ಷೋಭೆಯನ್ನು ಪರಿಹರಿಸಿಕೊಳ್ಳುವ ಸಲುವಾಗಿ ಮತ್ತು ಮನಸ್ಸನ್ನು ಶುದ್ಧಗೊಳಿಸುವುದಕ್ಕಾಗಿ ಕೆಲವು ನಿರ್ದಿಷ್ಟ ಆಸನಗಳನ್ನು ಮಾಡಬೇಕು ಎಂದು ಯೋಗಶಾಸ್ತ್ರವು ವಿಧಿಸುತ್ತದೆ. ಶ್ರದ್ಧೆಯನ್ನು ಸ್ಥಿರಗೊಳಿಸಲು, ಜ್ಞಾನವನ್ನು ಸಂಸ್ಥಾಪಿಸಲು, ಮಾನವನಲ್ಲಿ ಸುಪ್ತವಾಗಿರುವ ಕುಂಡಲಿನೀ ಶಕ್ತಿಯನ್ನು ಎಚ್ಚರಿಸಲು ಕೂಡ ಆಸನಗಳನ್ನು ವಿಧಿಸಿದೆ.

**ಪ್ರಶ್ನೆ** : ಯೋಗಕ್ಕೆ ಕೆಲವು ಅಂಗಗಳಿವೆ ಎಂದು ಹೇಳುತ್ತಾರಲ್ಲ, ಅವು ಎಷ್ಟಿವೆ ಮತ್ತು ಅವುಗಳ ಹೆಸರೇನು?

**ಉತ್ತರ** : ಅವು ಒಟ್ಟು ಎಂಟಿವೆ. ಅಷ್ಟಾಂಗಗಳು ಇವು: ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ.

**ಪ್ರಶ್ನೆ** : ಮುಕ್ತಿ ಪಡೆಯಬೇಕಾದರೆ ಈ ಎಂಟು ಅಂಗಗಳನ್ನೂ ಪರಿಪೂರ್ಣವಾಗಿ ಆಚರಿಸಬೇಕೋ ಅಥವಾ ಯಾವುದಾದರೂ ಒಂದು ಸಾಕೊ?

**ಉತ್ತರ** : ಮೊದಲಿನ ಎರಡು, ಯಮ ಮತ್ತು ನಿಯಮಗಳನ್ನು ಪರಿಪೂರ್ಣವಾಗಿ ಆಚರಿಸುತ್ತಿದ್ದರೆ ಸಾಕು ಮುಕ್ತಿಯನ್ನು ಪಡೆಯಬಹುದು. ಅಷ್ಟೇಕೆ, ವಿಶ್ವವು ನಡೆಯುತ್ತಿರುವುದೇ ಯಮ, ನಿಯಮ ಎಂಬ ಈ ಎರಡರಿಂದ!

**ಪ್ರಶ್ನೆ** : ನಾವು ಯೋಗ ಎಂದಾಗ ಅಷ್ಟಾಂಗದ ಈ ನಿರ್ದಿಷ್ಟ ಯೋಗವನ್ನು ಉಲ್ಲೇಖಿಸುತ್ತೇವೆಯೋ ಅಥವಾ ಬೇರೆ ಯೋಗಗಳೂ ಇವೆಯೊ?

**ಉತ್ತರ** : ಯೋಗ ಎನ್ನುವುದು ಇದೊಂದೇ ಅಲ್ಲ; ಒಟ್ಟಾರೆ ನಾಲ್ಕಿವೆ.

**ಪ್ರಶ್ನೆ** : ಅವು ಯಾವುವು?

**ಉತ್ತರ** : ಮಂತ್ರಯೋಗ, ರಾಜಯೋಗ, ಲಯಯೋಗ ಮತ್ತು ಹಠಯೋಗ ಎಂದು ಅವು ಪ್ರಸಿದ್ಧವಾಗಿವೆ.

**ಪ್ರಶ್ನೆ** : ಈ ನಾಲ್ಕು ಯೋಗಗಳಿಗೆ ಅಂಗಗಳಿಲ್ಲವೆ?

**ಉತ್ತರ** : ದಡ್ಡ! ಕೋಟ್ಯಂತರ ಮಾನವರಿಗೆ ಎರಡು ಕಣ್ಣುಗಳೇ ದೃಷ್ಟಿಯ ಉಪಕರಣಗಳಲ್ಲವೆ? ಹಾಗೆಯೇ ಎಲ್ಲ ಯೋಗಗಳಿಗೂ ಯಮ ಮತ್ತು ನಿಯಮಗಳು ಕಣ್ಣುಗಳಿದ್ದ ಹಾಗೆ. ಅವಿಲ್ಲದೆ ಏನನ್ನೂ ದರ್ಶಿಸಲು ಬರುವುದಿಲ್ಲ. ಪ್ರತಿಯೊಬ್ಬ ಯೋಗಿಗೂ ಮನಶ್ಶುದ್ಧಿ ಅತ್ಯಗತ್ಯ. ಅದಕ್ಕೆ ಯಮ ಮತ್ತು ನಿಯಮ ಅನಿವಾರ್ಯ.

**ಪ್ರಶ್ನೆ** : ಯಮ ನಿಯಮ ಎಂದರೇನು? ಇವಕ್ಕೂ ಏನಾದರೂ ಬೇರೆ ಬೇರೆ ಅಂಗಗಳೋ ಲಕ್ಷಣಗಳೋ ಇವೆಯೆ?

**ಉತ್ತರ** : ಹೌದು, ಇವೆ. ಒಂದೊಂದಕ್ಕೂ ಹತ್ತು ಅಂಗಗಳಿವೆ. ಈ ಎಲ್ಲದರಲ್ಲೂ ಚೆನ್ನಾಗಿ ಸಂಸ್ಥಾಪಿತನಾದಾಗಲೇ ನಿನಗೆ ಮೋಕ್ಷ ಸಿದ್ಧಿಸುವುದು.

**ಪ್ರಶ್ನೆ** : ಯಮದಲ್ಲಿ ಅಂತರ್ಗತವಾದ ಹತ್ತು ಯಾವುವು ಹೇಳಿ?

**ಉತ್ತರ** : ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯಾ, ಆರ್ಜವ, ಕ್ಷಮಾ, ಧೃತಿ, ಮಿತಾಹಾರ, ಶೌಚ—ಈ ಹತ್ತು ಯಮದಲ್ಲಿ ಸೇರಿಕೊಂಡಿವೆ.

**ಪ್ರಶ್ನೆ** : ನಿಯಮದಲ್ಲಿ ಸೇರಿರುವ ಹತ್ತು ಯಾವುವೆಂದು ನಾನು ತಿಳಿಯಬಹುದೆ?

**ಉತ್ತರ** : ತಪಸ್ಸು, ಸಂತೋಷ, ಆಸ್ತಿಕ್ಯ ಬುದ್ಧಿ, ದಾನ, ಈಶ್ವರ ಪೂಜೆ, ವೇದಾಂತ, ವಾಕ್ಯ ಶ್ರವಣ, ಲಜ್ಜೆ, ಮತಿ, ಜಪ, ವ್ರತ—ಈ ಹತ್ತು ನಿಯಮವೆನಿಸುತ್ತವೆ. ಇವು ಮೋಕ್ಷವೆಂಬ ಭವನದ ತಳಹದಿಯೇ ಆಗಿವೆ. ಯೋಗಿಗಳು ಇವುಗಳಲ್ಲಿ ಪರಿಪೂರ್ಣತೆ ಸಾಧಿಸಿರಬೇಕು.

**ಪ್ರಶ್ನೆ** : ಯೋಗವು ಆಸನವನ್ನೂ ಒತ್ತಿಹೇಳುತ್ತದೆ ಎಂದಿರಿ. ಅದರರ್ಥವೇನು?

**ಉತ್ತರ** : ಅವು ಆತ್ಮಜ್ಞಾನಿಗಳಿಗೂ ಯೋಗಿಗಳಿಗೂ ಬಹಳ ಸಹಾಯ ಮಾಡುತ್ತವೆ.

**ಪ್ರಶ್ನೆ** : ಆಸನದಲ್ಲೂ ಬೇಕಾದಷ್ಟು ಬಗೆಗಳಿರಬಹುದಲ್ಲವೆ?

**ಉತ್ತರ** : ಹೌದು, ಬೇಕಾದಷ್ಟಿವೆ. ಆದರೆ ಬಹುಮುಖ್ಯವಾದಂಥವು ಇವು: ಸಿದ್ಧಾಸನ, ಬದ್ಧ ಪದ್ಮಾಸನ, ಸರ್ವಾಂಗಾಸನ. ಜೊತೆಗೆ ಮಯೂರ ಹಾಗೂ ಪಶ್ಚಿಮೋತ್ತಾನಾಸನಗಳಂಥವೂ ಇವೆ.

**ಪ್ರಶ್ನೆ** : ಈ ಆಸನಗಳಿಂದ ಆಗುವ ಪ್ರಯೋಜನವೇನು?

**ಉತ್ತರ** : ಅವು ದೇಹಕ್ಕೆ ಧೈರ್ಯವನ್ನು ತುಂಬಿ, ಮನಸ್ಸು ದೀರ್ಘಕಾಲ ಕೇಂದ್ರೀಕರಿಸಲು ಸಾಧ್ಯವಾಗುವಂತೆ ಮಾಡುತ್ತವೆ.

**ಪ್ರಶ್ನೆ** : ಸ್ವಾಮಿ! ಈಗ ಪ್ರಾಣಾಯಾಮದ ವಿಷಯವಾಗಿಯೂ ದಯವಿಟ್ಟು ಹೇಳಿ. ಎಷ್ಟು ಬಗೆಯ ಪ್ರಾಣಾಯಾಮಗಳಿವೆ?

**ಉತ್ತರ** : ಅನೇಕ ಬಗೆಗಳೇನೋ ಇವೆ. ಆದರೆ ಪ್ರಸ್ತುತ ಪ್ರಪಂಚದಲ್ಲಿ ಹಲವು ಬಗೆಯ ಪ್ರಾಣಾಯಾಮಗಳನ್ನು ಆಚರಿಸಲು ಸಾಧ್ಯವಿಲ್ಲ. ಧ್ಯಾನಕ್ಕೆ ಸಹಾಯಮಾಡುವಂಥವನ್ನು ಮಾತ್ರ ಆಚರಿಸಬೇಕು. ಅವು ಲಘು ಪ್ರಾಣಾಯಾಮ ಅಥವಾ ಉಸಿರಾಟ ನಿಯಂತ್ರಣದ ಸರಳ ವಿಧಾನಗಳು ಎನಿಸಿಕೊಳ್ಳುತ್ತವೆ.

**ಪ್ರಶ್ನೆ** : ಅವು ಹೇಗೆ ಪ್ರಯೋಜನಕಾರಿಯಾಗುತ್ತವೆ?

**ಉತ್ತರ** : ಬೆಂಕಿಯ ಮೇಲಿರಿಸಿದ ಮೂಸೆಯೊಳಗೆ ಲೋಹಗಳು ಶುದ್ಧವಾಗುವ ಹಾಗೆ, ಕರ್ಮದ ಕಿಟ್ಟವನ್ನು ಪ್ರಾಣಾಯಾಮವು ತೆಗೆದುಹಾಕಿ ಶುದ್ಧಗೊಳಿಸುತ್ತದೆ. ಮನಸ್ಸು ಮಾಲಿನ್ಯ ಕಳೆದು ನಿರ್ಮಲವಾಗುತ್ತದೆ. ಇದರ ಜೊತೆಗೆ ಕಾಯ ಶುದ್ಧಿಯೂ ಉಂಟಾಗುತ್ತದೆ. ಮನಸ್ಸು ದೇಹಗಳೆರಡೂ ಶುದ್ಧವಾಗುತ್ತವೆ. ಪ್ರಾಣಾಯಾಮದಲ್ಲಿ ಎರಡು ಬಗೆಗಳುಂಟು: ಮಂತ್ರಸಹಿತವಾದದ್ದು, ಮಂತ್ರರಹಿತವಾದದ್ದು. ಮಂತ್ರರಹಿತವಾದರೆ ಅದು ಹೆಚ್ಚೆಂದರೆ ದೇಹವನ್ನು ಮಟ್ಟಿಗೆ ಶುದ್ಧೀಕರಿಸಬಹುದು, ಮಂತ್ರಸಹಿತವಾದರೆ ಮನಸ್ಸನ್ನೂ ನಿರ್ಮಲಗೊಳಿಸುತ್ತದೆ.

**ಪ್ರಶ್ನೆ** : ಸ್ವಾಮಿ, ಅದನ್ನು ಆಚರಿಸುವುದು ಹೇಗೆ?

**ಉತ್ತರ** : ಎರಡು ಕ್ಷಣಗಳಷ್ಟು ಕಾಲ ಪೂರಕ (ಉಸಿರನ್ನು ಒಳಸೆಳೆದುಕೊಳ್ಳುವುದು), ನಾಲ್ಕು ಕ್ಷಣ ದೀರ್ಘವಾಗಿ ರೇಚಕ (ಉಸಿರನ್ನು ಹೊರಬಿಡುವುದು) ಮತ್ತು ಎಂಟು ಕ್ಷಣಗಳಷ್ಟು ದೀರ್ಘಕಾಲ ಕುಂಭಕ (ಉಸಿರನ್ನು ಒಳಗೆ ಹಿಡಿದಿರಿಸಿಕೊಳ್ಳುವುದು). ಪ್ರಾಣಾಯಾಮವನ್ನು ಬಹಳ ಜಾಗರೂಕತೆಯಿಂದ ಮೂರು ತಿಂಗಳ ಕಾಲ ಅಭ್ಯಾಸ ಮಾಡಬೇಕು. ಆಮೇಲೆ ಪೂರಕ ರೇಚಕ ಕುಂಭಕಗಳ ಕಾಲವನ್ನು ಇಮ್ಮಡಿಗೊಳಿಸಬಹುದು. ಸ್ಥಿರಗತಿಯಲ್ಲಿ ಹೀಗೆ ಅಭ್ಯಾಸ ಮಾಡುತ್ತಾ ಆರು ತಿಂಗಳು ಕಳೆದ ಮೇಲೆ ಇಂದ್ರಿಯಗಳ ಚಟುವಟಿಕೆ ತಾನಾಗಿ ಕುಗ್ಗಿರುತ್ತದೆ. ಶ್ರದ್ಧೆಯಿಂದ ಅನುಭವಿಸುತ್ತಾ ಪ್ರಾಣಾಯಾಮವನ್ನು ನಡೆಸಿದರೆ, ಅದು ಮನಸ್ಸಿನ ತಳಮಳವನ್ನು ಹತೋಟಿಗೆ ತರುತ್ತದೆ; ಇಲ್ಲದೆ ಹೋದರೆ ಅದು ಕೇವಲ ದೈಹಿಕ ವ್ಯಾಯಾಮವಾಗಿ ಉಳಿಯುತ್ತದೆ. ಅದರಿಂದ ದೈಹಿಕ ಆರೋಗ್ಯವಷ್ಟೇ ಸುಧಾರಿಸಬಹುದು. ಶುದ್ಧ ಆಹಾರ, ಬ್ರಹ್ಮಚರ್ಯ, ಏಕಾಂತವಾಸಿಯಾಗಿರುವುದು, ಮಿತವಾಗಿ ಮಾತನಾಡುವುದು—ಈ ಎಲ್ಲ ನಿಯಮಗಳನ್ನೂ ಕಡ್ಡಾಯವಾಗಿ ಆಚರಿಸಬೇಕು.

**ಪ್ರಶ್ನೆ** : ಸ್ವಾಮಿ! ತಾವು ಹೇಳಿದ ಮುಂದಿನ ವಿಷಯ ಪ್ರತ್ಯಾಹಾರ. ಅದರಲ್ಲಿ ಎಷ್ಟು ವಿಧಾನಗಳಿವೆ?

**ಉತ್ತರ** : ಮೂರು: ಸಾಕಾರ, ನಿರಾಕಾರ ಮತ್ತು ಆತ್ಮಭಾವ. ಯಾವ ಉದ್ದೇಶದಿಂದ ಇಂದ್ರಿಯಗಳನ್ನು ನಿಯಂತ್ರಿಸಿ, ಮನಸ್ಸನ್ನು ಏಕಾಗ್ರಗೊಳಿಸಲಾಗುತ್ತದೋ ಅದನ್ನವಲಂಬಿಸಿ ಈ ಬೇರೆ ಬೇರೆ ವಿಧಾನಗಳು. ಅದು ಸಗುಣೋಪಾಸನೆಗಾಗಿ ಎಂದಾದರೆ ಸಾಕಾರ ಪ್ರತ್ಯಾಹಾರ; ನಿರ್ಗುಣ ಉಪಾಸನೆಯಾದರೆ ನಿರಾಕಾರ ಪ್ರತ್ಯಾಹಾರ; ಸತ್ಯ, ಜ್ಞಾನ, ಅನಂತ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದಾದರೆ ಅದು ಆತ್ಮಭಾವ.

**ಪ್ರಶ್ನೆ** : ಧಾರಣ ಎಂದರೆ ಏನು ಸ್ವಾಮಿ? ಅದರಲ್ಲಿ ಎಷ್ಟು ಬಗೆಗಳಿವೆ?

**ಉತ್ತರ** : ಮಗು, ಅದು ಒಂದೇ ಬಗೆ. ಜ್ಞಾನಿಯು ತನ್ನ ಇಷ್ಟದೇವತೆಯ ಅರಿವಿನಲ್ಲಿ, ಅಥವಾ ಬ್ರಹ್ಮಪ್ರಜ್ಞೆಯಲ್ಲಿ ಸ್ಥಿರವಾಗಿ ಸ್ಥಾಪಿತನಾಗುತ್ತಾನೆ, ಭೂಮಿಯು ಪರ್ವತವನ್ನು ಧರಿಸಿರುವ ಹಾಗೆ. ಅದೇ ಧಾರಣ.

**ಪ್ರಶ್ನೆ** : ಮುಂದಿನದು ಧ್ಯಾನ ಅಲ್ಲವೆ? ಅದೂ ಹಲವು ಬಗೆಗಳಾಗಿರಬಹುದು.

**ಉತ್ತರ** : ಇಲ್ಲ ಇಲ್ಲ. ಅದೂ ಒಂದೇ ಬಗೆ. ಆಕಾರಸಹಿತ ಅಥವಾ ಆಕಾರರಹಿತ ಏನೇ ಆಗಲಿ, ವಕ್ರಗತಿಗಳಿಲ್ಲದೆ ಏಕಾಗ್ರವಾದರೆ ಅದನ್ನು ಧ್ಯಾನ ಎಂದು ಕರೆಯ ಬಹುದು.

**ಪ್ರಶ್ನೆ** : ಕೊನೆಯದು ಸಮಾಧಿ. ಅದರ ಅರ್ಥವೇನು?

**ಉತ್ತರ** : ಸಮಾಧಿ ಎಂದರೆ ಮನಸ್ಸನ್ನು ಕೀಲಿಸುವುದು. ಎಲ್ಲಾ ಬಗೆಯ ಪ್ರವೃತ್ತಿಗಳಿಂದ ತಳಮಳಗಳಿಂದ ಮನಸ್ಸನ್ನು ವಿಮುಕ್ತಿಗೊಳಿಸಿ ಭಗವಂತನ ಮೇಲೆ ಅಥವಾ ತನ್ನದೇ ಸತ್ಯದ ಮೇಲೆ ನೆಡುವುದು. ಸಮಾಧಿ ಸ್ಥಿತಿಯಲ್ಲಿ ಯಾವುದೇ ದ್ವಂದ್ವ ಭಾವಗಳಿರುವುದಿಲ್ಲ. ಮನಸ್ಸು ದ್ವಂದ್ವ ಅನುಭವಗಳಿಂದ ವಿಚಲಿತವಾಗುವುದಿಲ್ಲ. ಗಾಳಿ ಜೋರಾಗಿ ಬೀಸದ ಪ್ರದೇಶದಲ್ಲಿ ದೀಪವು ನಿಶ್ಚಲವಾಗಿ ಬೆಳಗುವಂತೆ ಬೆಳಗುತ್ತದೆ. ಅದೇ ವಿಧವಾಗಿ ಚಿತ್ತವು ನಿಶ್ಚಲವಾಗಿರುವುದನ್ನು ಸಮಾಧಿ ಎನ್ನುವರು

**ಪ್ರಶ್ನೆ** : ಸ್ವಾಮಿ! ಆ ಬಗೆಯ ಮನಸ್ಸು ಹೇಗೆ ವರ್ತಿಸುತ್ತದೆ? ದಯವಿಟ್ಟು ನಿದರ್ಶನಗಳೊಂದಿಗೆ ಸ್ಪಷ್ಟಪಡಿಸಿಕೊಡಿ.

**ಉತ್ತರ** : ಅಯ್ಯಾ, ನೀನು ಸೂಜಿಗೆ ದಾರವನ್ನು ಪೋಣಿಸಬೇಕಾದಾಗ, ಆ ಕೆಲಸದಲ್ಲಿ ಗಮನವನ್ನು ಕೇಂದ್ರೀಕರಿಸಬೇಕು—ಹಸ್ತದ ನಿಶ್ಚಲತೆ, ದಾರದ ತುದಿಯನ್ನು ನೇರವಾಗಿ ಮೊನಚಾಗಿ ಇಟ್ಟುಕೊಂಡಿರಬೇಕು, ಅಲ್ಲವೆ? ಹಾಗೆಯೆ ಸೂಕ್ಷ್ಮಾತಿಸೂಕ್ಷ್ಮವಾಗಿರುವ ಭಗವಂತನ ಕೃಪೆಯನ್ನು ಪ್ರವೇಶಿಸಬೇಕಾದರೆ, ಅದನ್ನು ಹೋಗಬೇಕಾದರೆ ಮನಸ್ಸು ಹಸ್ತದ ಹಾಗೆ ಸ್ಥಿರವಾಗಿ ಇರಬೇಕು. ಕಣ್ಣು ಮತ್ತು ಇತರ ಇಂದ್ರಿಯಗಳು ಪೂರ್ತಿಯಾಗಿ ಆ ಪ್ರಕ್ರಿಯೆಯ ಮೇಲೆಯೇ ಕೇಂದ್ರೀಕೃತವಾಗಿರಬೇಕು.

✍ ಟಿಪ್ಪಣಿ

✍ ಟಿಪ್ಪಣಿ

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

‘ಸಾಯಿ ಗೀತಾಂಜಲಿ’, ಜೇ.ಪೀ. ನಗರ, ಬೆಂಗಳೂರು ೫೬೦೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 1 | ಸತ್ಯಂ ಶಿವಂ ಸುಂದರಂ – ಭಾಗ ೧ | 120 | 38 | ಶ್ರೀ ಸಾಯಿ ಸಂಕೀರ್ತನ | 10 |
| 2 | ಸತ್ಯಂ ಶಿವಂ ಸುಂದರಂ – ಭಾಗ ೨ | 72 | 39 | ಶ್ರೀ ಸತ್ಯಸಾಯಿ ಎಜುಕೇರ್ | 10 |
| 3 | ಸತ್ಯಂ ಶಿವಂ ಸುಂದರಂ – ಭಾಗ ೩ | 25 | 40 | ಭಕ್ತರಿಗೆ ಶ್ರೀ ಸತ್ಯಸಾಯಿ ಎಜುಕೇರ್ | 10 |
| 4 | ಸತ್ಯಂ ಶಿವಂ ಸುಂದರಂ – ಭಾಗ ೪ | 26 | 41 | ಬಾಲ ವಿಕಾಸ – ೧ | 80 |
| 5 | ಸತ್ಯಂ ಶಿವಂ ಸುಂದರಂ – ಭಾಗ ೫ | 65 | 42 | ಬಾಲ ವಿಕಾಸ – ೨ | 55 |
| 6 | ಸತ್ಯಂ ಶಿವಂ ಸುಂದರಂ – ಭಾಗ ೬ | 105 | 43 | ಬಾಲ ವಿಕಾಸ – ೩ | 70 |
| 7 | ಸತ್ಯಂ ಶಿವಂ ಸುಂದರಂ – ಭಾಗ ೭ | 130 | 44 | ಬಾಲ ವಿಕಾಸ ೧–೩ರ ಅನುಬಂಧ | 20 |
| 8 | ಶ್ರೀ ಸತ್ಯಸಾಯಿ ವಾಣಿ – ಭಾಗ ೧ | 35 | 45 | ಬಾಲವಿಕಾಸ ಗುರುಗಳ ಕೈಪಿಡಿ | 15 |
| 9 | ಶ್ರೀ ಸತ್ಯಸಾಯಿ ವಾಣಿ – ಭಾಗ ೨ | 35 | 46 | ಈಶ್ವರಮ್ಮ | 40 |
| 10 | ಶ್ರೀ ಸತ್ಯಸಾಯಿ ವಾಣಿ – ಭಾಗ ೩ | 30 | 47 | ಶ್ರೀ ಕೃಷ್ಣ – ಶ್ರೀ ಸತ್ಯಸಾಯಿ | 40 |
| 11 | ಶ್ರೀ ಸತ್ಯಸಾಯಿ ವಾಣಿ – ಭಾಗ ೪ | 46 | 48 | ಸಾಧನಾ, ಅಂತರ್ಮುಖಿ ಯಾತ್ರೆ | 38 |
| 12 | ಶ್ರೀ ಸತ್ಯಸಾಯಿ ವಾಣಿ – ಭಾಗ ೫ | 53 | 49 | ಭರವಸೆಯ ಹೊಂಗಿರಣ | 32 |
| 13 | ಶ್ರೀ ಸತ್ಯಸಾಯಿ ವಾಣಿ – ಭಾಗ ೬ | 25 | 50 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | 30 |
| 14 | ಶ್ರೀ ಸತ್ಯಸಾಯಿ ವಾಣಿ – ಭಾಗ ೭ | 30 | 51 | ಪ್ರಶಾಂತಿ ನಿಲಯಂ | 8 |
| 15 | ಶ್ರೀ ಸತ್ಯಸಾಯಿ ವಾಣಿ – ಭಾಗ ೮ | 35 | 52 | ವಾಕ್ಯ–ವಿಭೂತಿ | 10 |
| 16 | ಸತ್ಯಸಾಯಿ ವಾಹಿನಿ | 55 | 53 | ಸ್ವಾಮಿಯೆಡೆಗೆ ತಡೆಯೋಟ | 8 |
| 17 | ವಿದ್ಯಾ ವಾಹಿನಿ | 20 | 54 | ಹೆತ್ತವರ–ಪಾಲಕತ್ವದ ಪಾತ್ರ | 10 |
| 18 | ಜ್ಞಾನ ವಾಹಿನಿ | 15 | 55 | ಶ್ರೀ ಗುರುಚರಣ | 15 |
| 19 | ಉಪನಿಷತ್ ವಾಹಿನಿ | 20 | 56 | ಸಾಯಿತ್ರೀ | 30 |
| 20 | ಧ್ಯಾನ ವಾಹಿನಿ | 20 | 57 | ಶ್ರೀ ಸತ್ಯಸಾಯಿ ಅಷ್ಟೋತ್ತರಶತ ರತ್ನಮಾಲೆ | 18 |
| 21 | ಪ್ರೇಮ ವಾಹಿನಿ | 20 | | | |
| 22 | ಪ್ರಶಾಂತಿ ವಾಹಿನಿ | 20 | 58 | ಜ್ಯೋತಿರ್ಧ್ಯಾನ | 13 |
| 23 | ಪ್ರಶ್ನೋತ್ತರ ವಾಹಿನಿ | 20 | 59 | ಭಗವಲ್ಲೀಲಾ | 35 |
| 24 | ಧರ್ಮ ವಾಹಿನಿ | 25 | 60 | ಚಮತ್ಕಾರ ವಾಣಿ | 15 |
| 25 | ಸಂದೇಹ ನಿವಾರಿಣಿ | 25 | 61 | ಕೋಽಹಂ? ಸೋಽಹಂ! | 15 |
| 26 | ಸೂತ್ರ ವಾಹಿನಿ | 20 | 62 | ನೀತಿ ಪಾಠಗಳು | 30 |
| 27 | ಲೀಲಾ ಕೈವಲ್ಯ ವಾಹಿನಿ | 10 | 63 | ಸಂಧ್ಯಾವಂದನ ವಿಧಿ | 10 |
| 28 | ಭಾಗವತ ವಾಹಿನಿ | 60 | 64 | ಭಜನೆಗಳು | 10 |
| 29 | ಗೀತಾ ವಾಹಿನಿ | 50 | 65 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ (ಸಾರ ಸಂಗ್ರಹ) | 11 |
| 30 | ರಾಮಕಥಾರಸ ವಾಹಿನಿ | 120 | | | |
| 31 | ಶ್ರೀ ಸತ್ಯಸಾಯಿ ಆನಂದದಾಯಿ | 50 | 66 | ಆತ್ಮಾವಲೋಕನ | 10 |
| 32 | ಶ್ರೀ ಸತ್ಯಸಾಯಿ ಆರಾಧನಾ ಸ್ತೋತ್ರ ಸೌರಭ | 12 | 67 | ಅವತಾರ ಘೋಷಣೆ | 12 |
| | | | 68 | ಶ್ರೀ ಸತ್ಯಸಾಯಿ ಪೂಜಾ ವಿಧಿ | 21 |
| 33 | ಶ್ರೀ ಸತ್ಯಸಾಯಿ ಸಂಸ್ಥೆ (ಭಾರತ) – ನಿಯಮ ಮತ್ತು ನಿಬಂಧನೆಗಳು | 40 | 69 | ರಸಪ್ರಶ್ನೆಗಳು ಶ್ರೀ ಸತ್ಯಸಾಯಿ ಬಾಬಾ | 20 |
| | | | 70 | ರಸಪ್ರಶ್ನೆಗಳು ರಾಮಾಯಣ | 16 |
| 34 | ಶ್ರೀ ಸತ್ಯಸಾಯಿ ದೃಷ್ಟಾಂತ ಸೌರಭ | 15 | 71 | ರಸಪ್ರಶ್ನೆಗಳು ಮಹಾಭಾರತ | 17 |
| 35 | ಸೂಕ್ತಿ ಸೌರಭ – ಭಾಗ ೧ | 10 | 72 | ರಸಪ್ರಶ್ನೆಗಳು ಭಾಗವತ | 17 |
| 36 | ಸೂಕ್ತಿ ಸೌರಭ – ಭಾಗ ೨ | 25 | 73 | ರಸಪ್ರಶ್ನೆಗಳು ಭಗವದ್ಗೀತೆ | 9 |
| 37 | ಸಾಯಿ ಭಜನೆಗೆ ಮಾರ್ಗದರ್ಶಿ ಸೂತ್ರಗಳು | 10 | 74 | ತ್ವಮೇವ ಮಾತಾ | 20 |
| | | | | ಮುಂದುವರಿದಿದೆ . . . | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

‘ಸಾಯಿ ಗೀತಾಂಜಲಿ’, ಜೇ.ಪೀ. ನಗರ, ಬೆಂಗಳೂರು ೫೬೦ ೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ |
|---|---|---|
| 75 | ನನ್ನ ಆಧ್ಯಾತ್ಮಿಕ ದಿನಚರಿ | 10 |
| 76 | ಉತ್ಕೃಷ್ಟತೆಯೆಡೆಗೆ ನನ್ನ ವಿಕಾಸ | 8 |
| 77 | ಅಮರಪುರಿಯ ಆನಂದ ಯಾತ್ರೆ | 10 |
| 78 | ಪರಮ ವೈದ್ಯ | 28 |
| 79 | ಶ್ರೀ ಸತ್ಯಸಾಯಿ ಪರಮಸುಖದಾಯಿ | 45 |
| 80 | ಯುಗಾವತಾರಿ ಶ್ರೀ ಸತ್ಯಸಾಯಿ | 60 |
| 81 | ನನ್ನ ನೆಚ್ಚಿನ ಬಾಬಾ | 45 |
| 82 | ಸೇವೆಯೇ ಸಾಧನೆ | 31 |
| 83 | ಶ್ರೀ ಸತ್ಯಸಾಯಿ ಗೀತೆ | 36 |
| 84 | ವಿದ್ಯಾ ಸಂಸ್ಥೆಗಳಲ್ಲಿ ನೈತಿಕ ವಿದ್ಯೆಯ ಅವಶ್ಯಕತೆ | 10 |
| 85 | ವೇದ ಮಂಜರಿ | 60 |
| 86 | ವೇದ ಮಂತ್ರಗಳು (ಬಾಲವಿಕಾಸ ಮಕ್ಕಳಿಗಾಗಿ) | 30 |
| 87 | ಶ್ರೀ ಸತ್ಯಸಾಯಿ ಸಂಸ್ಥೆಗಳ ಮಾರ್ಗದರ್ಶಿ ಸೂತ್ರಗಳು | 25 |
| 88 | ಶ್ರೀ ಸತ್ಯಸಾಯಿ ಮಧುರ ಸ್ಮೃತಿ | 60 |
| 89 | ಭಾರತದ ಸಂತರು | 50 |
| 90 | ಶ್ರೀ ಸತ್ಯಸಾಯಿ ಮುರುಗನ ಕರುಣಾಮೃತ | 40 |
| 91 | ದಿವ್ಯ ಪಥ ಭಾಗ – ೧ | 50 |
| 92 | ಹರಿ ಭಜನ ಬಿನಾ | 30 |
| 93 | ಒಂದು ದಿವ್ಯ ಜೀವನ | 63 |
| 94 | ದಿವ್ಯ ತಪ | 40 |
| 95 | ಬಾಲ ವಿಕಾಸ ಮಕ್ಕಳ ನಾಟಕಗಳು | 65 |
| 96 | ಸತ್ಯಸಾಯಿ ಈಗಲೂ ಇದ್ದಾರೆ | 105 |
| 97 | Sri Sathya Sai, The Indweller | 15 |
| 98 | Guidelines for Sai Bhajans | 10 |
| 99 | Balavikas - 1 | 75 |
| 100 | Balavikas - 2 | 70 |
| 101 | Balavikas - 3 | * |
| 102 | Supplement to Balavikas 1 | 10 |
| 103 | Supplement to Balavikas 2 | 10 |
| 104 | Supplement to Balavikas 3 | 10 |
| 105 | Sri Sathya Sai Educare | 10 |
| 106 | Sai Educare for Devotees | 10 |
| 107 | Sandhyavandana Vidhi | 10 |
| 108 | Sainama Kirtana Kaliyuga Sadhana | 100 |
| 109 | Educare, Veda of Twenty First Century | 60 |
| 110 | Namo Namah Sri Guru Padukabyam | 60 |
| 111 | Sri Sathya Sai Balvikas: The Pathway to Excellence–2 | * |
| 112 | Brindamrutam | 225 |
| 113 | Sri Sathya Sai Madhura Smrithi | 90 |
| 114 | Bhagavallila | 35 |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.